ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 11 ಸೋಮವಾರ 2023

ಸಂಪುಟ: 44 | ಸಂಚಿಕೆ: 234 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

ಪ್ರಭಾವಿ ಸಚಿವರೊಬ್ಬರು 60 ಶಾಸಕರೊಡನೆ

ಬಿಜೆಪಿ ಸೇರಲು ತಯಾರಿ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಫೋಟಕ ಮಾಹಿತಿ

- ಕೇಂದ್ರದ ಬಿಜೆಪಿ ನಾಯಕರ ಜೊತೆ ಮಾತುಕತೆ
- ಕೈ ಕಾಲು ಕಟ್ಟುತ್ತಿರುವ ಪ್ರಭಾವಿ ಸಚಿವ
- ಅಕ್ರಮಗಳಿಂದ ಪಾರು ಮಾಡುವಂತೆ ಮನವಿ
- ಇಂದಿನ ರಾಜಕಾರಣದಲ್ಲಿ ಸ್ವಾರ್ಥವೇ ತುಂಬಿದೆ

ಹಾಸನ, ಡಿ.10(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರದ ಪ್ರಭಾವಿ ಮಂತ್ರಿಯೊಬ್ಬರು ತಾವು ಎಸಗಿರುವ ಅಕ್ರಮಗಳಿಂದ ಪಾರಾಗಲು 60 ಶಾಸಕರೊಡನೆ ಬಿಜೆಪಿ ಸೇರಲು ತಯಾರಾಗಿದ್ದು, ಕೇಂದ್ರದ ಬಿಜೆಪಿ ನಾಯಕರ ಕೈ ಕಾಲು ಕಟ್ಟುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಫೋಟಕ ಮಾಹಿತಿ ನೀಡಿದ್ದಾರೆ.

ಹಾಸನದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 50ರಿಂದ 60 ಶಾಸಕರೊಡನೆ ಬಿಜೆಪಿಗೆ ಬರುತ್ತೇನೆ. ನಾನು ಎಸಗಿರುವ ಅಕ್ರಮಗಳಿಂದ ಪಾರು ಮಾಡಿ. ಐದಾರು ತಿಂಗಳು ರಿಲೀಫ್ ಕೊಡಿ ಎಂದು ಕೇಂದ್ರದ ಬಿಜೆಪಿ ನಾಯಕರನ್ನು ಕಾಂಗ್ರೆಸ್ ಸಚಿವರು ಗೋಗರೆಯುತ್ತಿದ್ದಾರೆ ಎಂದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ನೊಣವಿನಕೆರೆ ಸ್ವಾಮೀಜಿ ಭವಿಷ್ಯ ನುಡಿದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲವೂ ಸರಿ ಇಲ್ಲ. ಈ ಸರ್ಕಾರ ಯಾವಾಗ ಬಿದ್ದು ಹೋಗುವುದೊ ಗೊತ್ತಿಲ್ಲ. ಪ್ರಭಾವಿ ಮಂತ್ರಿಯೊಬ್ಬರು ತಮ್ಮ ಮೇಲಿರುವ ಅಕ್ರಮಗಳಿಂದ ಪಾರಾಗಲು ಹರಸಾಹಸಪಡುತ್ತಿದ್ದಾರೆ ಎಂದರು. ಬಿಜೆಪಿ ಸೇರಲು ಮುಂದಾಗಿರುವ ಸಚಿವರು ಯಾರೆಂದು ಪತ್ರಕರ್ತರು ಪದೇ ಪದೇ ಪ್ರಶ್ನಿಸಿದಾಗ, ಅವರ ಹೆಸರು ಬಹಿರಂಗ ಮಾಡದ ಕುಮಾರಸ್ವಾಮಿ, ಸಣ್ಣ ಪುಟ್ಟವರು ಹೋಗಲು ಆಗುವುದೇ ದೊಡ್ಡವರು, ಅದರಲ್ಲೂ ಪ್ರಭಾವಿಗಳು ಮಾತ್ರ ಈ ಸಾಹಸ ಮಾಡಲು ಸಾಧ್ಯ ಎಂದರು.

ಮಹಾರಾಷ್ಟ್ರದಲ್ಲಿ ನಡೆದ ರಾಜಕೀಯ ಬೆಳವಣಿಗೆಯಂತೆ ಕರ್ನಾಟಕದಲ್ಲೂ ಆಗಬಹುದು. ಮಹಾರಾಷ್ಟ್ರದಂತೆ ಇಲ್ಲೂ ಯಾರು ಹುಟ್ಟಿಕೊಳ್ಳುತ್ತಾರೊ ಗೊತ್ತಿಲ್ಲ. ಈಗಿನ ರಾಜಕಾರಣದ ಪರಿಸ್ಥಿತಿಯಲ್ಲಿ ಏನು ಬೇಕಾದರೂ ಆಗಬಹುದು. ಯಾರಿಗೂ ನಿಷ್ಠೆ, ಪ್ರಾಮಾಣಿಕತೆ ಇಲ್ಲ. ಸ್ವಾರ್ಥಕ್ಕಾಗಿ ಏನು ಬೇಕಾದರೂ ಮಾಡುತ್ತಾರೆ. ಇವತ್ತು ಇಲ್ಲಿರುತ್ತಾರೆ, ನಾಳೆ ಮತ್ತೊಂದು ಪಕ್ಷಕ್ಕೆ ಹಾರುತ್ತಾರೆ. ಇದು ಈಗಿನ ರಾಜಕೀಯ ಪರಿಸ್ಥಿತಿ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಟೀಕೆ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, ಹರಿಪ್ರಸಾದ್ ಒಬ್ಬರೆ ಅಲ್ಲ, ಸಾಕಷ್ಟು ಜನರಿಗೆ ಅಸಮಾಧಾನವಿದೆ. ಒಬ್ಬೊಬ್ಬರಾಗಿ ಈಗ ಬಹಿರಂಗವಾಗಿ ಅಸಮಾಧಾನ ಹೊರ ಹಾಕುತ್ತಿದ್ದಾರೆ. ಪಾಪ, ಹರಿಪ್ರಸಾದ್ ಒಬ್ಬರ ಹೆಸರನ್ನೇಕೆ ಹೇಳುತ್ತೀರಾ, ಅವರು ಕಾಂಗ್ರೆಸ್ ಪಕ್ಷದ ಪ್ರಾಮಾಣಿಕ ಕಾರ್ಯಕರ್ತ ಎಂದು ತಿಳಿಸಿದರು.



ಹೆಚ್.ಡಿ.ಕುಮಾರಸ್ವಾಮಿ

> “ಕಷ್ಟಪಟ್ಟು ಸಿದ್ದರಾಮಯ್ಯ ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಆದರೆ ಕೆಲವು ತಪ್ಪು ನಿರ್ಧಾರ ಮತ್ತು ಭ್ರಷ್ಟಾಚಾರದಿಂದ ಜನರಲ್ಲಿ ಕೆಟ್ಟ ಭಾವನೆ ಮೂಡಿಸುವ ಪರಿಸ್ಥಿತಿಯನ್ನು ಅವರೇ ತಂದುಕೊಂಡಿದ್ದಾರೆ. ದೇಶ ಹಾಗೂ ರಾಜ್ಯ ಅಭಿವೃದ್ಧಿಯಾಗಲು ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡಿಸಲಿ, ಅದು ಬಿಟ್ಟು ಜಾತಿ ಗಣತಿ ಮಾಡಿ, ಜಾತಿಗಳ ನಡುವೆ ವಿಷ ಬೀಜ ಬಿತ್ತುತ್ತಿದ್ದಾರೆ.
> –ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ

ಅಲ್ಪಸಂಖ್ಯಾತ ಮತದಾರರ ಓಲೈಕೆಗಾಗಿ ಮುಸ್ಲಿಮರಿಗೆ ಹತ್ತು ಸಾವಿರ ಕೋಟಿ ರೂ. ನೀಡುವುದಾಗಿ ಸಿದ್ದರಾಮಯ್ಯ ಹೇಳಿದ್ದಾರೆ ಎಂದು ಟೀಕಿಸಿದ ಕುಮಾರಸ್ವಾಮಿ, ಮುಸ್ಲಿಮರಿಗೆ ಹತ್ತು ಸಾವಿರ ಕೋಟಿ ರೂ. ಕೊಟ್ಟರೆ ರೈತರಿಗೆ ಏನು ಕೊಡುತ್ತೀರಾ.

ಅರಸೀಕೆರೆಯಿಂದ ತುಮಕೂರುವರೆಗೆ ಪಾದಯಾತ್ರೆ

ಕೊಬ್ಬರಿಗೆ ಬೆಂಬಲ ಬೆಲೆ ನೀಡುವಂತೆ ಆಗ್ರಹಿಸಿ ಅರಸೀಕೆರೆಯಿಂದ ತುಮಕೂರುವರೆಗೆ ಪಾದಯಾತ್ರೆ ನಡೆಸುತ್ತೇನೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ತಿಳಿಸಿದರು.

ರೈತರನ್ನು ಭಿಕ್ಷುಕರಂತೆ ನೋಡುತ್ತಿರುವ ರಾಜ್ಯ ಸರ್ಕಾರ ಕೊಬ್ಬರಿಗೆ ಬೆಂಬಲ ಬೆಲೆ ನೀಡುವ ವಿಚಾರದಲ್ಲಿ ಮೀನಾ–ಮೇಷ ಎಣಿಸುತ್ತಿದೆ. ಈ ನಿಟ್ಟಿನಲ್ಲಿ ಬೆಳಗಾವಿ ಅಧಿವೇಶನ ಮುಗಿದ ನಂತರ ಪಾದಯಾತ್ರೆ ಕೈಗೊಳ್ಳುತ್ತೇನೆ.

ರಾಜ್ಯದ 13 ಜಿಲ್ಲೆಗಳಲ್ಲಿ ಹೆಚ್ಚಾಗಿ ತೆಂಗು ಬೆಳೆಯಲಾಗುತ್ತದೆ. ಆದರೆ ಈಗ ಕೊಬ್ಬರಿ ಬೆಲೆ ಶೇ.50ರಷ್ಟು ಕುಸಿದಿದೆ. ಕಳೆದೊಂದು ವರ್ಷದಿಂದ ಬೆಲೆ ಹೆಚ್ಚಳವಾಗಿಲ್ಲ. ಏಳೂವರೆ ಸಾವಿರದಿಂದ ಎಂಟೂವರೆ ಸಾವಿರ ರೂ. ಬೆಲೆ ಇದೆ. ಇದರಿಂದ ತೆಂಗು ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ಸರ್ಕಾರ ರೈತರ ನೆರವಿಗೆ ಧಾವಿಸುವಂತೆ ಆಗ್ರಹಿಸಿ ಪಾದಯಾತ್ರೆ ನಡೆಸುತ್ತಿದ್ದೇನೆ ಎಂದು ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ರೈತರ ಮನೆ ಬಳಿಗೆ ಬ್ಯಾಂಕ್ ಮತ್ತು ಲೇವಾದೇವಿದಾರರು ಬಂದು ನಿಲ್ಲುತ್ತಿದ್ದಾರೆ. ರೈತರನ್ನು ಆರ್ಥಿಕ ▶ 5ನೇ ಪುಟಕ್ಕೆ

ಬ್ರ್ಯಾಂಡ್ ಮೈಸೂರು

ಲೋಗೋ ಬಿಡುಗಡೆ

ಜಾಗತಿಕ ಮಟ್ಟದಲ್ಲಿ ಮೈಸೂರಿನ ಹಿರಿಮೆ ಪ್ರಚುರಪಡಿಸುವ ಗುರಿ



ಮೈಸೂರು ಜಿಪಂ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, ‘ನಮ್ಮ ಪರಂಪರೆ ನಿಮ್ಮ ತಾಣ’ ಅಡಿಬರಹವುಳ್ಳ ಅತ್ಯಾಕರ್ಷಕ ಬ್ರ್ಯಾಂಡ್ ‘ಮೈಸೂರು ಲೋಗೋ’ ಬಿಡುಗಡೆ ಮಾಡಿದರು. ಶಾಸಕರಾದ ಸಿ.ಎನ್.ಮಂಜೇಗೌಡ, ರವಿಶಂಕರ್, ದರ್ಶನ್ ಧ್ರುವನಾರಾಯಣ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಇತರರು ಉಪಸ್ಥಿತರಿದ್ದರು.

ಮೈಸೂರು, ಡಿ.10(ಎಸ್‌ಬಿಡಿ)– ಮೈಸೂರಿನ ಪ್ರೇಕ್ಷಣೀಯ ತಾಣಗಳ ಬಗ್ಗೆ ಜಾಗತಿಕ ಮಟ್ಟದಲ್ಲಿ ವ್ಯಾಪಕವಾಗಿ ಪ್ರಚುರಪಡಿಸುವ ಮೂಲಕ ಇಲ್ಲಿನ ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶದಿಂದ ರೂಪಿಸಿರುವ ನೂತನ ಬ್ರ್ಯಾಂಡ್ ಮೈಸೂರು ಲೋಗೋವನ್ನು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಭಾನುವಾರ ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ‘ನಮ್ಮ ಪರಂಪರೆ ನಿಮ್ಮ ತಾಣ’ ಅಡಿಬರಹ(ಟ್ಯಾಗ್ ಲೈನ್)ವುಳ್ಳ ಅತ್ಯಾಕರ್ಷಕ ‘ಮೈಸೂರು ಲೋಗೋ’ ಬಿಡುಗಡೆ ಮಾಡಿದ ಸಚಿವರು, ಮೈಸೂರು ಹಾಗೂ ಸುತ್ತಮುತ್ತಲ ಪ್ರವಾಸಿ ತಾಣಗಳನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದು ಬಣ್ಣಿಸಿದರು.

ಮೈಸೂರು ಬ್ರ್ಯಾಂಡ್ ಅನುಷ್ಠಾನ ಯಶಸ್ವಿಯಾದರೆ ಇದರಿಂದ ಖಂಡಿತವಾಗಿ ಸಾಕಷ್ಟು ಅನುಕೂಲಗಳಾಗಲಿವೆ. ರಾಜ್ಯ ಹಾಗೂ ದೇಶ ವ್ಯಾಪ್ತಿಯ ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ಈ ಬ್ರ್ಯಾಂಡ್ ರೂಪಿಸಿಲ್ಲ. ಜಾಗತಿಕ ಮಟ್ಟದಲ್ಲಿ ಪರಂಪರೆ, ಇತಿಹಾಸದ ಬಗ್ಗೆ ಆಸಕ್ತಿ ಹೊಂದಿರುವ ಹಾಗೂ ಹೊಸತನಕ್ಕೆ ತುಡಿಯುವವರಿಗೆ ನಮ್ಮ ಮೈಸೂರಿನ ಹಿರಿಮೆಯನ್ನು ಮನಮುಟ್ಟಿಸುವ ಗುರಿ ಇದರಲ್ಲಿದೆ ಎಂದರು. ▶ 8ನೇ ಪುಟಕ್ಕೆ

ಹೊಸ ವರ್ಷಕ್ಕೆ ನೂತನ ಟೂರಿಸಂ ಪಾಲಿಸಿ; ಪಾರಂಪರಿಕ ಸ್ಮಾರಕಗಳ ದತ್ತು ನೀಡಲು ಕ್ರಮ

ಮೈಸೂರು: ಜನವರಿ ಅಂತ್ಯದೊಳಗೆ ರಾಜ್ಯದಲ್ಲಿ ನೂತನ ಪ್ರವಾಸೋದ್ಯಮ ನೀತಿ (ಟೂರಿಸಂ ಪಾಲಿಸಿ) ಜಾರಿಗೊಳಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ತಿಳಿಸಿದರು. ಪಾರಂಪರಿಕ ಕಟ್ಟಡ ಹಾಗೂ ಸ್ಮಾರಕಗಳ ಸಂರಕ್ಷಣೆ ಸಂಬಂಧ ಮಾತನಾಡುವ ಸಂದರ್ಭದಲ್ಲಿ ಸಚಿವರು, ಈ ಹೊಸ ನೀತಿ ಜಾರಿಯ ಬಗ್ಗೆ ಹೇಳಿದರು. ಮೈಸೂರಿನಲ್ಲಿ ಹೆಚ್ಚು ಸಂಖ್ಯೆಯ ▶ 8ನೇ ಪುಟಕ್ಕೆ

ಮೈಸೂರಲ್ಲಿ 24 ಪ್ರವಾಸಿ ತಾಣಗಳಿವೆ...

> “ಅರಮನೆ, ಮೃಗಾಲಯ ಮಾತ್ರವಲ್ಲದೆ ಮೈಸೂರು ಹಾಗೂ ಸುತ್ತಮುತ್ತ ಸುಮಾರು 24 ಪ್ರೇಕ್ಷಣೀಯ ಸ್ಥಳಗಳಿವೆ. ಇವುಗಳನ್ನು ಜಗತ್ತಿಗೆ ಪರಿಚಯಿಸಬೇಕು. ಇಲ್ಲಿನ ಸುರಕ್ಷತೆಯ ಬಗ್ಗೆ ಪ್ರವಾಸಿಗರಲ್ಲಿ ಖಚಿತತೆ ಮೂಡಿಸಬೇಕು. ಪ್ರವಾಸಿ ತಾಣಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಜಿಲ್ಲಾಡಳಿತ ಸಿದ್ಧವಾಗಿದೆ. ಇದನ್ನು ಸರ್ಕಾರದ ಗಮನಕ್ಕೂ ತಂದು ಪ್ರಸ್ತಾವನೆ ಸಲ್ಲಿಸಲಾಗಿದೆ. –ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ

ಛತ್ತೀಸ್‌ಗಢ ಮುಖ್ಯಮಂತ್ರಿಯಾಗಿ ವಿಷ್ಣುದೇವ್ ಸಾಯಿ ಆಯ್ಕೆ

ರಾಯ್ಪುರ,ಡಿ.10–ಛತ್ತೀಸ್‌ಗಢದ ನೂತನ ಮುಖ್ಯಮಂತ್ರಿಯಾಗಿ ಮಾಜಿ ಕೇಂದ್ರ ಸಚಿವ ವಿಷ್ಣುದೇವ್ ಸಾಯಿ ಆಯ್ಕೆಯಾಗಿದ್ದಾರೆ. ಬಿಜೆಪಿ ವೀಕ್ಷಕರ ಸಮ್ಮುಖದಲ್ಲಿ ನಡೆದ ಶಾಸಕರ ಸಭೆಯಲ್ಲಿ ಸಿಎಂ ಹುದ್ದೆಗೆ ವಿಷ್ಣುದೇವ್ ಸಾಯಿ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ.



ಶಾಸಕಾಂಗ ಸಭೆಯಲ್ಲಿ ಬಿಜೆಪಿ ಹೈಕಮಾಂಡ್ ಕಳುಹಿಸಿದ್ದ ವೀಕ್ಷಕರ ತಂಡ ವಿಷ್ಣುದೇವ್ ಸಾಯಿ ಅವರ ಹೆಸರನ್ನು ಸೂಚಿಸಿದ್ದು, ಶಾಸಕರು ಅದನ್ನು ಅನುಮೋದಿಸಿದ್ದಾರೆ. ಛತ್ತೀಸ್‌ಗಢದ ರಾಯ್ಪುರ್ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ವಿಷ್ಣುದೇವ್ ಸಾಯಿ, ಪ್ರಧಾನಿ ಮೋದಿ ಅವರ ಮೊದಲ ಅವಧಿಯಲ್ಲಿ ಉಕ್ಕು ಖಾತೆ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

59 ವರ್ಷದ ವಿಷ್ಣುದೇವ್ ಸಾಯಿ ಮೂಲತಃ ಆರ್‌ಎಸ್‌ಎಸ್ ಹಿನ್ನೆಲೆಯುಳ್ಳವರಾಗಿದ್ದು, ಮಾಜಿ ಸಿಎಂ ರಮಣ್ ಸಿಂಗ್ ಗೂ ಆಪ್ತರಾಗಿದ್ದಾರೆ. ವಿಷ್ಣುದೀಪ್ ಸಾಯಿ ನಾಲ್ಕನೇ ಅವಧಿಗೆ ಸಂಸದರಾಗಿದ್ದು, 2006ರಲ್ಲಿ ಛತ್ತೀಸ್‌ಗಢ ಬಿಜೆಪಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದು, ಅತ್ಯುತ್ತಮ ಸಂಘಟಕರೆಂಬ ಖ್ಯಾತಿ ಹೊಂದಿದ್ದಾರೆ

ಜಮ್ಮು–ಕಾಶ್ಮೀರದ 370ನೇ ವಿಧಿ ರದ್ದು ಕಾನೂನು ಬದ್ಧತೆ

ಇಂದು ಸುಪ್ರೀಂ ಮಹತ್ವದ ತೀರ್ಪು



ನವದೆಹಲಿ,ಡಿ.10–ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸುವ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ಕುರಿತು ಸುಪ್ರೀಂ ಕೋರ್ಟ್ ಸೋಮವಾರ ತೀರ್ಪು ನೀಡಲಿದೆ. ಎರಡು ವಾರಗಳ ಕಾಲ ನಡೆದ ವಿಚಾರಣೆ ಬಳಿಕ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ ತೀರ್ಪನ್ನು ಕಾಯ್ದಿರಿಸಿತ್ತು.

ಆರ್ಟಿಕಲ್ 370 ರದ್ದತಿ ವಿರುದ್ಧ ವಾದ ಮಂಡಿಸಿದ ಅರ್ಜಿಗಳಲ್ಲಿ ಮುಖ್ಯವಾಗಿ ಎರಡು ಸವಾಲುಗಳನ್ನು ಎತ್ತಲಾಗಿತ್ತು. ಮೊದಲನೆಯದು ರಾಷ್ಟ್ರಪತಿಗಳ ಆದೇಶಗಳ ಸಾಂವಿಧಾನಿಕತೆಗೆ ಸಂಬಂಧಿಸಿದೆ. ಆದರೆ ಎರಡನೆಯ ಸವಾಲು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸುವ ಬಗ್ಗೆ. ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನಾ ಸಭೆಯ ಒಪ್ಪಿಗೆಯಿಲ್ಲದೆ ರಾಷ್ಟ್ರಪತಿಗಳು ಸಾಂವಿಧಾನಿಕ ನಿಬಂಧನೆ 370 ಅನ್ನು ಪರೋಕ್ಷವಾಗಿ ತಿದ್ದುಪಡಿ ಮಾಡಿದ್ದಾರೆ ಎಂದು ಅರ್ಜಿದಾರರು ಹೇಳಿದ್ದಾರೆ. ‘ಸಂವಿಧಾನ ಸಭೆ’ಯನ್ನು ‘ವಿಧಾನ ಸಭೆ’ಯೊಂದಿಗೆ ಬದಲಿಸುವ ಮೂಲಕ ಇದನ್ನು ಸಕ್ರಿಯಗೊಳಿಸಲಾಯಿತು. ಎರಡನೆಯದಾಗಿ, ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯಿದೆ, 2019 ಸಂವಿಧಾನದ 3ನೇ ವಿಧಿಯ ಅಡಿಯಲ್ಲಿ ಅಸಂವಿಧಾನಿಕ ಎಂದು ಅವರು ವಾದಿಸುತ್ತಾರೆ. ಈ ಆರ್ಟಿಕಲ್ ಹೊಸ ರಾಜ್ಯಗಳನ್ನು ರಚಿಸಲು ಮತ್ತು ಅಸ್ತಿತ್ವದಲ್ಲಿರುವ ರಾಜ್ಯಗಳ ಗಡಿಗಳನ್ನು ಬದಲಾಯಿಸಲು ಅಥವಾ ಮಾರ್ಪಡಿಸಲು ಸಂಸತ್ತಿಗೆ ಅಧಿಕಾರ ನೀಡುತ್ತದೆ. ಫೆಡರಲ್ ಪ್ರಜಾಸತ್ತಾತ್ಮಕ ರಾಜ್ಯಗಳನ್ನು ಕೇಂದ್ರಾಡಳಿತ ಪ್ರದೇಶದಂತೆ ಕಡಿಮೆ ಪ್ರಾತಿನಿಧ್ಯದ ಸ್ವರೂಪಕ್ಕೆ ಇಳಿಸುವ ಅಧಿಕಾರವನ್ನು 3ನೇ ವಿಧಿಯು ಸಂಸತ್ತಿಗೆ ನೀಡುವುದಿಲ್ಲ ಎಂದು ಅರ್ಜಿದಾರರು ವಾದಿಸಿದರು. ಫೆಡರಲ್ ಪ್ರಜಾಪ್ರಭುತ್ವದಲ್ಲಿ, ಸ್ವಾಯತ್ತ ಸ್ವ–ಆಡಳಿತದ ಹಕ್ಕು, ವಿಶೇಷವಾಗಿ ಸಾಂವಿಧಾನಿಕ ಮತ್ತು ರಾಜಕೀಯ ಸ್ಥಾನಮಾನಕ್ಕೆ ಸಂಬಂಧಿಸಿದಂತೆ, ಸಂವಿಧಾನದ ಭಾಗ IIIರ ಅಡಿಯಲ್ಲಿ ಮೂಲಭೂತ ಹಕ್ಕು ಮತ್ತು ಕಾನೂನಿನಿಂದ ಸ್ಥಾಪಿಸಲಾದ ಸರಿಯಾದ ಪ್ರಕ್ರಿಯೆಯಿಲ್ಲದೆ ಅದನ್ನು ತೆಗೆದುಕೊಳ್ಳಲಾಗುವುದಿಲ್ಲ ಎಂದು ಅರ್ಜಿದಾರರು ವಾದಿಸಿದರು. 2019ರ ಆಗಸ್ಟ್ 28ರಂದು ಮಾಜಿ ಸಿಜೆಐ ನ್ಯಾಯಮೂರ್ತಿ ರಂಜನ್ ಗೊಗೊಯ್ ನೇತೃತ್ವದ ತ್ರಿಸದಸ್ಯ ಪೀಠವು ಈ ಅರ್ಜಿಗಳನ್ನು ಐದು ನ್ಯಾಯಾಧೀಶರ ▶ 5ನೇ ಪುಟಕ್ಕೆ

ಅರ್ಜುನ ಆನೆ ಸಾವು

ನಿವೃತ್ತ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆ

ಹಾಸನ, ಡಿ.10– ಕಾಡಾನೆ ಕಾರ್ಯಾಚರಣೆ ವೇಳೆ ಮಾಜಿ ಕ್ಯಾಪ್ಟನ್ ಅರ್ಜುನ ಮೃತಪಟ್ಟಿದ್ದಾನೆ. ಅರ್ಜುನ ಸಾವಿನ ಬಗ್ಗೆ ಅನೇಕರು ಶಂಕೆ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಅರಣ್ಯ ಇಲಾಖೆ ನಿವೃತ್ತ ವನ್ಯಜೀವಿ ಪಾಲಕರ ನೇತೃತ್ವದಲ್ಲಿ ತನಿಖಾ ಸಮಿತಿ ನೇಮಕ ಮಾಡಿದ್ದೇವೆ. ಅವರು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, 15 ದಿನದ ಒಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸುತ್ತಾರೆ. ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ ಹೇಳಿದರು.



ಅರ್ಜುನನ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ, ಶ್ರದ್ಧಾಂಜಲಿ ಸಲ್ಲಿಸಿ ಬಳಿಕ ಮಾತನಾಡಿದ ಅವರು, ದಸರಾ ಆನೆ ಅರ್ಜುನನನ್ನು ಕಳೆದುಕೊಂಡಿದ್ದು ದುಃಖಕರ. ಎಂಟು ಬಾರಿ ಅಂಬಾರಿ ಹೊತ್ತಿದ್ದ ಅರ್ಜುನನ ಸಾವು ನೋವು ತಂದಿದೆ ಎಂದರು. ಕಾರ್ಯಾಚರಣೆ ಅತ್ಯಂತ ಅಪಾಯದ್ದು. ಈ ಭಾಗದಲ್ಲಿ ಸಾಕಷ್ಟು ಆನೆಗಳು ಬೆಳೆ ನಾಶ ಮಾಡಿವೆ. ಚಿಕ್ಕಮಗಳೂರಿನಲ್ಲಿ ▶ 5ನೇ ಪುಟಕ್ಕೆ

ಬೆಂಗಳೂರಿನಲ್ಲಿ ಈಡಿಗರ ಒಗ್ಗಟ್ಟು ಪ್ರದರ್ಶನ

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗಿ



ಬೆಂಗಳೂರು,ಡಿ.10–ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ಅಮೃತ ಮಹೋತ್ಸವವು ಸಮುದಾಯದ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾಯಿತು. ಈಡಿಗರು, ಬಿಲ್ಲವರು, ನಾಮಧಾರಿಗಳು, ಹಳೇಪೈಕರು, ದೀವರು, ಈಳವರು ಒಳಗೊಂಡಂತೆ ಸಮುದಾಯದ 26 ಒಳಪಂಗಡಗಳು ಸೇರಿದ್ದ ಈ ಸಮಾವೇಶದಲ್ಲಿ ಸಮುದಾಯದ ರಾಜಕಾರಣಿಗಳು, ಸಂಘಟಕರು, ಮುಖಂಡರು ತಮ್ಮ ಆಗ್ರಹಗಳನ್ನು ಸರ್ಕಾರದ ಗಮನಕ್ಕೆ ತಂದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಸಮುದಾಯದ ಪರವಾಗಿ ಮನವಿಗಳನ್ನು ಮಾಡಿದರು. ಕುಲಕಸುಬು ಕಳೆದುಕೊಂಡ ಮೇಲೆ ಬೀದಿಪಾಲಾಗಿರುವ ಸಮುದಾಯವನ್ನು ಮೇಲೆತ್ತುವ ಭರವಸೆ ನೀಡಬೇಕು. ಶರಾವತಿ ನದಿಗೆ ಡ್ಯಾಮ್ ಕಟ್ಟಿದ ಮೇಲೆ ರಾಜ್ಯಕ್ಕೆ ಬೆಳಕು ಸಿಕ್ಕಿತು. ಆದರೆ ಭೂಮಿ ಕಳೆದುಕೊಂಡ ಈಡಿಗರು ಕತ್ತಲಲ್ಲಿ ಬದುಕುತ್ತಿದ್ದಾರೆ. ಭೂ ಒಡೆತನದ ಹಕ್ಕುಪತ್ರಗಳನ್ನು ಸಮುದಾಯಕ್ಕೆ ನೀಡಬೇಕು ಎಂದು ಆಗ್ರಹಿಸಿದರು. ಜೊತೆಗೆ ಸಿದ್ದರಾಮಯ್ಯನವರಲ್ಲಿ ಎಸ್.ಬಂಗಾರಪ್ಪನವರ ಗುಣಗಳನ್ನು ಕಾಣುತ್ತಿರುವುದಾಗಿ ನುಡಿದರು. ಸಮುದಾಯಕ್ಕೆ ನಿಗಮವನ್ನು ಸ್ಥಾಪಿಸಿ 500 ಕೋಟಿ ರೂ. ನೀಡಬೇಕು, ಅಧ್ಯಯನ ಪೀಠ ▶ 8ನೇ ಪುಟಕ್ಕೆ

ಶಿವರಾಜ್‌ಕುಮಾರ್‌ಗೆ ಕಾಂಗ್ರೆಸ್‌ನಿಂದ ಟಿಕೆಟ್ ಆಫರ್ ನೀಡಿದ ಡಿಕೆಶಿ

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆಗೆ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಸಿದ್ಧತೆ ಈಗಾಗಲೇ ಆರಂಭವಾಗಿರುವಂತೆಯೇ, ಕೆಪಿಸಿಸಿ ಅಧ್ಯಕ್ಷರು ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್‌ಗೆ ಕಾಂಗ್ರೆಸ್‌ನಿಂದ ಟಿಕೆಟ್ ಆಫರ್ ನೀಡಿದ್ದಾರೆ.

ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಈಡಿಗ ಸಮುದಾಯದ ಬೃಹತ್ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಾರ್ಲಿಮೆಂಟಿಗೆ ತಯಾರಿಯಾಗಲು ಶಿವಣ್ಣ ಅವರಿಗೆ ಹೇಳಿದ್ದೇನೆ. ಅವರು ಯಾವ ಕ್ಷೇತ್ರದಿಂದಲೂ ಸ್ಪರ್ಧಿಸಿದರೂ ಟಿಕೆಟ್ ನೀಡುವುದಾಗಿ ಹೇಳಿರುವುದಾಗಿ ತಿಳಿಸಿದರು. ಆದರೆ, ಶಿವಣ್ಣ ಈಗಾಗಲೇ ಐದಾರು ಸಿನಿಮಾಗಳನ್ನು ಒಪ್ಪಿಕೊಂಡಿದ್ದು, ಅವುಗಳ ಚಿತ್ರೀಕರಣ ಮುಗಿಯಬೇಕು ಎಂದಿದ್ದಾರೆ. ಚಿತ್ರ ಯವಾಗದರೂ ಮಾಡಬಹುದು, ಆದರೆ ಪಾರ್ಲಿಮೆಂಟ್ ಹೋಗುವ ಅವಕಾಶ ▶ 8ನೇ ಪುಟಕ್ಕೆ

ಮುಖ್ಯಮಂತ್ರಿಯಿಂದ ಈಡಿಗ ಸಮುದಾಯ ಒಡೆಯುವ ಹುನ್ನಾರ

ಪ್ರಣವಾನಂದ ಸ್ವಾಮೀಜಿ ಆರೋಪ

ಗಂಗಾವತಿ: ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದಲ್ಲಿ ಈಡಿಗ ಸಮುದಾಯದವರನ್ನು ವ್ಯವಸ್ಥಿತವಾಗಿ ಒಡೆಯುವ ಹುನ್ನಾರಕ್ಕೆ ಕೈಹಾಕಿದ್ದಾರೆ ಎಂದು ಈಡಿಗ ಸಮಾಜದ ನಾರಾಯಣ ಗುರುಗಳ ಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ಆರೋಪಿಸಿದರು.

ಈಡಿಗ, ಬಿಲ್ಲವ, ನಾಮಧಾರಿ ಸೇರಿ ಹಿಂದುಳಿದ ಮತ್ತು ಅತಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಹಕ್ಕುಗಳನ್ನು ಒದಗಿಸಲು ಆಗ್ರಹಿಸಿ ನಡೆಸಿದ ಒಂದು ದಿನದ ಉಪವಾಸ ಸತ್ಯಾಗ್ರಹದಲ್ಲಿ ಮಾತನಾಡಿದ ಅವರು ಸಿದ್ದರಾಮಯ್ಯ ಈಡಿಗ ಸಮಾಜದ ರಾಜಕೀಯ ನಾಯಕರನ್ನು ನಮ್ಮವರಿಂದಲೇ ಮೂಲೆಗುಂಪು ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಬಿ.ಕೆ.ಹರಿಪ್ರಸಾದ್, ಎಚ್.ಆರ್.ಶ್ರೀನಾಥ್ ಸೇರಿ ಹಲವರು ಕಾಂಗ್ರೆಸ್‌ಗೆ 40 ವರ್ಷಗಳಿಂದ ದುಡಿಯುತ್ತಿದ್ದಾರೆ. ಆದರೆ ಸಿದ್ದರಾಮಯ್ಯ ಪಕ್ಷದಲ್ಲಿ ಸ್ಥಾನಮಾನ ನೀಡದೆ ಈಡಿಗ ಸಮಾಜದ ನಾಯಕರನ್ನು ಮುಗಿಸುವ ಹುನ್ನಾರ ನಡೆಸಿದ್ದಾರೆ. ಹರಿಪ್ರಸಾದ್ ಅವರನ್ನು ರಾಜಕೀಯವಾಗಿ ಮುಗಿಸಬೇಕೆಂಬ ದುರುದ್ದೇಶದಿಂದ ಬೆಂಗಳೂರಲ್ಲಿ ಈಡಿಗರ ಸಮಾವೇಶ ನಡೆಸಲಾಗಿದೆ. ಸಮಾವೇಶಕ್ಕೆ ನಮ್ಮ ಅಭ್ಯಂತರವಿಲ್ಲ, ಆದರೆ, ನಮ್ಮ ಜನರನ್ನು ಬಳಸಿಕೊಂಡು ಸಮಾಜ ಒಡೆಯುವುದನ್ನು ಒಪ್ಪುವುದಿಲ್ಲ ಏನಾದರೂ ನಾವೆಲ್ಲರೂ ಒಂದೇ ಎಂದರು.

ಜಾರ್ಖಂಡ್ ಸಂಸದ ಧೀರಜ್ ಸಾಹು ಮೇಲೆ ಐಟಿ ದಾಳಿ

ಕೇಂದ್ರವು ಕಾಂಗ್ರೆಸ್ ನಾಯಕರನ್ನೇ ಏಕೆ ಗುರಿಯಾಗಿಸಿಕೊಂಡಿದೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ



ಬೆಂಗಳೂರು, ಡಿ.10– ಜಾರ್ಖಂಡ್‌ನ ಕಾಂಗ್ರೆಸ್ ಸಂಸದ ಧೀರಜ್ ಪ್ರಸಾದ್ ಸಾಹು ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ 200 ಕೋಟಿ ರೂ. ಗೂ ಅಧಿಕ ಲೆಕ್ಕಕ್ಕೆ ಸಿಗದಷ್ಟು ನಗದು ವಶಪಡಿಸಿಕೊಂಡ ಹಿನ್ನೆಲೆಯಲ್ಲಿ, ಕೇಂದ್ರವು ಕೇವಲ ಕಾಂಗ್ರೆಸ್ ಅನ್ನು ಗುರಿಯಾಗಿಸಿಕೊಂಡಿದೆ ಹೊರತು ಬಿಜೆಪಿಯನ್ನಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಜಾರ್ಖಂಡ್ ಮತ್ತು ಒಡಿಶಾದಲ್ಲಿ ರಾಜ್ಯಸಭಾ ಸಂಸದ ಧೀರಜ್ ಸಾಹುಗೆ ಸಂಬಂಧಿಸಿರುವ ಸ್ಥಳಗಳ ಮೇಲೆ ಇತ್ತೀಚೆಗೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿದ ಬಗ್ಗೆ ಅವರು ಪ್ರತಿಕ್ರಿಯಿಸಿದರು. ಅವರು (ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ) ಕೇವಲ ಕಾಂಗ್ರೆಸ್ ಅನ್ನು ಗುರಿಯಾಗಿಸಿಕೊಂಡಿದ್ದಾರೆ. ಅವರು ಬಿಜೆಪಿ ನಾಯಕರ ಮೇಲೂ ದಾಳಿ ಮಾಡಲಿ. ಆಗ ಮಾತ್ರ ಅವರ ಬಳಿ ಎಷ್ಟು ಅಕ್ರಮ ಸಂಪತ್ತು ಇದೆ ಎಂದು ತಿಳಿಯುತ್ತದೆ ಎಂದು ತಿಳಿಸಿದರು.

ಆದಾಯ ತೆರಿಗೆ ಕಾಯ್ದೆ ಪ್ರಕಾರ, ಕಪ್ಪು ಹಣವನ್ನು ಯಾರು ಕೂಡಿಟ್ಟರೂ ಅದು ತಪ್ಪು. ಐಟಿ ಇಲಾಖೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿ. ಆದರೆ, ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಂಡು ಕೇವಲ ಕಾಂಗ್ರೆಸ್ ಅನ್ನು ಗುರಿ ಯಾಗಿಸಿಕೊಂಡಿದೆ. ಕೇಂದ್ರ ಸರ್ಕಾರ ಕಾಂಗ್ರೆಸ್ ನಾಯಕರನ್ನೇ ಗುರಿಯಾಗಿಸಿಕೊಂಡಿದೆ. ಬಿಜೆಪಿಯವರನ್ನು ಗುರಿಯಾಗಿಸಿಕೊಂಡಿಲ್ಲ ಏಕೆ ಎಂದು ಪ್ರಶ್ನಿಸಿದ ಅವರು, ಬಿಜೆಪಿಯವರ ಮೇಲೆ ದಾಳಿ ಮಾಡಿದರೆ ಅಪಾರ ಹಣ ಸಿಗುತ್ತದೆ ಎಂದರು.

ಒಡಿಶಾ ಮೂಲದ ಬೌದ್ ಡಿಸ್ಟಿಲರಿ ಪ್ರೈವೇಟ್ ಲಿಮಿಟೆಡ್ ಮತ್ತು ಅದಕ್ಕೆ ಸಂಬಂಧಿಸಿದ ಸಂಸ್ಥೆಗಳ ವಿರುದ್ಧ ಆದಾಯ ತೆರಿಗೆ ಇಲಾಖೆ ನಡೆಸಿದ ಶೋಧದಲ್ಲಿ ಇದುವರೆಗೆ ಭಾರಿ ಪ್ರಮಾಣದ ನಗದು ಪತ್ತೆಯಾಗಿದೆ. ಹುಡುಕಾಟದ ಭಾಗವಾಗಿ ಸಾಹು ಅವರಿಗೆ ಸಂಬಂಧಿಸಿರುವ ಸ್ಥಳಗಳಲ್ಲಿಯೂ ಶೋಧ ನಡೆಸಲಾಯಿತು. ವಶಪಡಿಸಿಕೊಂಡ ಮೊತ್ತವು 290 ಕೋಟಿ ರೂ.ಗಳನ್ನು ತಲುಪುವ ನಿರೀಕ್ಷೆಯಿದೆ. ಇದು ಈವರೆಗಿನ ಕಾರ್ಯಾಚರಣೆಯಲ್ಲಿ ಪತ್ತೆಯಾದ ಅತಿಹೆಚ್ಚು ಕಪ್ಪುಹಣವಾಗಿದೆ ಎನ್ನಲಾಗಿದೆ.

ಆಕಾಶ್ ಆನಂದ್ ಬಿಎಸ್‌ಪಿ ಉತ್ತರಾಧಿಕಾರಿ

ಸೋದರಳಿಯನನ್ನು ಉತ್ತರಾಧಿಕಾರಿಯಾಗಿ ಘೋಷಿಸಿದ ಮಾಯಾವತಿ



ಲಖನೌ, ಡಿ.10– ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ಮಾಯಾವತಿ ಭಾನುವಾರ ತಮ್ಮ ಸೋದರಳಿಯ ಆಕಾಶ್ ಆನಂದ್ ಅವರನ್ನು ರಾಜಕೀಯ ಉತ್ತರಾಧಿಕಾರಿ ಎಂದು ಘೋಷಿಸಿದ್ದಾರೆ ಎಂದು ಪಕ್ಷದ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿಂದು ಈ ವಿಷಯ ತಿಳಿಸಿದ ಬಿಎಸ್‌ಪಿಯ ಷಹಜಹಾನ್‌ಪುರ ಜಿಲ್ಲಾ ಘಟಕದ ಮುಖ್ಯಸ್ಥ ಉದಯವೀರ್ ಸಿಂಗ್, ಆಕಾಶ್ ಆನಂದ್ ಅವರನ್ನು ತಮ್ಮ ಉತ್ತರಾಧಿಕಾರಿ ಎಂದು ಮಾಯಾವತಿ ಜೀ ಘೋಷಿಸಿದ್ದು, ಉತ್ತರ ಪ್ರದೇಶ ಹೊರತುಪಡಿಸಿ ಉಳಿದೆಡೆ ಪಕ್ಷ ಸಂಘಟನೆ ಬಲಪಡಿಸುವ ಜವಾಬ್ದಾರಿಯನ್ನು ಅವರಿಗೆ ನೀಡಲಾಗಿದೆ ಎಂದು ಹೇಳಿದರು.

ಆದರೆ ಪಕ್ಷದ ಅಧಿಕೃತ ಹೇಳಿಕೆಯು ಅಂತಹ ಯಾವುದೇ ನಿರ್ಧಾರವನ್ನು ಉಲ್ಲೇಖಿಸಿಲ್ಲ. ಜಿಲ್ಲೆಯಲ್ಲಿ ನಡೆದ ಸಭೆಯಲ್ಲಿ ಮಾಯಾವತಿ ಈ ನಿರ್ಧಾರವನ್ನು ಪ್ರಕಟಿಸಿದರು ಎಂದು ಸಿಂಗ್ ಹೇಳಿದರು.

ಮಾಯಾವತಿಯವರ ಕಿರಿಯ ಸಹೋದರ ಆನಂದ್ ಕುಮಾರ್ ಅವರ ಪುತ್ರರಾಗಿರುವ ಆಕಾಶ್ ಆನಂದ್, 2016 ರಲ್ಲಿ ಬಿಎಸ್ಪಿಗೆ ಸೇರ್ಪಡೆಗೊಂಡು 2019 ರಲ್ಲಿ ಲೋಕಸಭಾ ಚುನಾವಣೆಯ ಸಮಯದಲ್ಲಿ ಪಕ್ಷದ ಸ್ಟಾರ್ ಪ್ರಚಾರಕರಲ್ಲಿ ಒಬ್ಬರಾಗಿ ಪ್ರಮುಖವಾಗಿ ಕಾಣಿಸಿಕೊಂಡಿದ್ದರು. ಕಾಂಗ್ರೆಸ್ ಮತ್ತು ಇತರೆ ರಾಜಕೀಯ ಪಕ್ಷಗಳ ಕುಟುಂಬ ರಾಜಕೀಯವನ್ನು ಟೀಕಿಸುತ್ತಿದ್ದ ಮಾಯಾವತಿ ಅವರು ಈಗ ಪಕ್ಷದಲ್ಲಿ ತಮ್ಮ ಸೋದರಳಿಯನಿಗೆ ಪಕ್ಷದ ಉನ್ನತ ಹುದ್ದೆ ನೀಡಿದ್ದಾರೆ.


ತೆಲಂಗಾಣ ಮಾಜಿ ಸಿಎಂ ಕೆಸಿಆರ್ ಆರೋಗ್ಯ ವಿಚಾರಿಸಿದ ನೂತನ ಸಿಎಂ ರೇವಂತ್ ರೆಡ್ಡಿ



ಹೈದರಾಬಾದ್,ಡಿ.10–ಸ್ನಾನದ ಕೋಣೆಯಲ್ಲಿ ಜಾರಿ ಬಿದ್ದು, ಇಲ್ಲಿನ ಯಶೋಧ ಆಸ್ಪತ್ರೆಯಲ್ಲಿ ಮೂಳೆ ಜೋಡಣೆ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವ ತೆಲಂಗಾಣದ ಮಾಜಿ ಮುಖ್ಯಮಂತ್ರಿ ಹಾಗೂ ಬಿಆರ್‌ಎಸ್ ಪಕ್ಷದ ಮುಖ್ಯಸ್ಥ ಕೆ.ಚಂದ್ರಶೇಖರ್ ರಾವ್ ಅವರನ್ನು ಹಾಲಿ ಮುಖ್ಯಮಂತ್ರಿ ರೇವಂತ್ ರೆಡ್ಡಿ ಭೇಟಿಯಾಗಿ ಆರೋಗ್ಯ ವಿಚಾರಿಸಿದ್ದಾರೆ. ಡಿಸೆಂಬರ್ 7ರಂದು ಎರ್ರವಳ್ಳಿಯಲ್ಲಿರುವ ತಮ್ಮ ತೋಟದ ಮನೆಯಲ್ಲಿ ಬಿದ್ದು ನಂತರ ಅವರಿಗೆ ತೊಡೆ ಮೂಳೆ ಜೋಡಣೆ ಶಸ್ತ್ರಚಿಕಿತ್ಸೆ ಮಾಡಿದ್ದು, ಚೇತರಿಸಿಕೊಳ್ಳಲು ಆರರಿಂದ ಎಂಟು ವಾರಗಳು ಬೇಕಾಗುತ್ತದೆ ಎಂದು ವೈದ್ಯರು ತಿಳಿಸಿದ್ದರು. ಇತ್ತೀಚಿಗೆ ನಡೆದ ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 64 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಅಧಿಕಾರ ಹಿಡಿದಿದೆ. ಬಿಆರ್‌ಎಸ್ 39 ಸ್ಥಾನಗಳಲ್ಲಿ ಗೆದ್ದು, ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು.

ನಿಧನ


ಇಂದಿರಮ್ಮ



ಮೈಸೂರು,ಡಿ.10–ಮೈಸೂರಿನ ಕುವೆಂಪುನಗರ ನಿವಾಸಿ ಇಂದಿರಮ್ಮ(86) ಅವರು ಭಾನುವಾರ ಬೆಳಗ್ಗೆ ನಿಧನರಾದರು.


ಇವರು 40 ವರ್ಷಗಳಿಂದ 'ಪ್ರಿಯಾಂಕ ಟಿಫಾನೀಸ್' ನಡೆಸುತ್ತಿದ್ದರು. ಇವರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ. ಚಾಮುಂಡಿಬೆಟ್ಟದತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಇಂದು ಸಂಜೆ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಎನ್.ನಂಜುಂಡಸ್ವಾಮಿ




ಮೈಸೂರಿನ ವಿಜಯನಗರ ಬಡಾವಣೆ ನಿವಾಸಿ ಎಂ.ಎನ್.ನಂಜುಂಡಸ್ವಾಮಿ (76) ಸೋಮವಾರ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಲಲಿತಾದ್ರಿಪುರ ವೀರಶೈವ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ 1 ಗಂಟೆಗೆ ಮೃತರ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಜಿನಚಂದ್ರ



ಮೈಸೂರಿನ ಜಯಲಕ್ಷ್ಮೀಪುರಂ ನಿವಾಸಿ, ನಿವೃತ್ತ ಇಇ ಜಿನಚಂದ್ರ (62) ಅವರು ಭಾನುವಾರ ಮಧ್ಯಾಹ್ನ ನಿಧನರಾದರು. ಇವರು ಪತ್ನಿ ಮಮತಾ, ಮಕ್ಕಳಾದ ಜೆ.ಚಿರಂತ್ ಜೈನ್ ಹಾಗೂ ಜೆ.ಪ್ರಖ್ಯಾತ ಜೈನ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಗೋಕುಲಂ ರುದ್ರಭೂಮಿಯಲ್ಲಿ ಸೋಮವಾರ(ಡಿ.11) ಬೆಳಗ್ಗೆ 10ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಎನ್.ಮಂಜುನಾಥ್



ಹೆಚ್.ಡಿ.ಕೋಟೆ ಪಟ್ಟಣದ ಸಿದ್ದಪ್ಪಾಜಿ ರಸ್ತೆಯ ನಿವಾಸಿ ಟಿ.ಎನ್.ಮಂಜುನಾಥ್(54) ಹೃದಯಘಾತದಿಂದ ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂದು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಗ್ರಾಹಕರು, ಮತದಾರರ ಹಕ್ಕಿನ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕು

ಮೈಸೂರು ಗ್ರಾಹಕರ ಪರಿಷತ್‌ನ ಸದಸ್ಯರ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಸಲಹೆ





ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ತು ಕಚೇರಿಯಲ್ಲಿ ಭಾನುವಾರ ಸದಸ್ಯರ ಸಾಮಾನ್ಯ ಸಭೆ ನಡೆಯಿತು.



'ಏಳಿ, ಎದ್ದೇಳಿ, ಜವಾಬ್ದಾರಿಯುತ ಪೌರತ್ವವನ್ನು ಪ್ರಚಾರಗೊಳಿಸಲು ನಿಮ್ಮನ್ನು ನೀವೇ ತೊಡಗಿಸಿಕೊಳ್ಳಿ' ಎಂದು ಜಾಗೃತಿ ಮೂಡಿಸುವ ಪೋಸ್ಟರ್ ಅನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ.10(ಎಸ್‌ಪಿಎನ್)– ಶಾಲಾ ಹಂತದಿಂದಲೇ ಭಾರತದ ಬಡತನ ನಿರ್ಮೂಲನೆ ಹಾಗೂ ಹವಾಮಾನ ಬದಲಾವಣೆ ಸಂಬಂಧ ಮೈಸೂರು ಗ್ರಾಹಕ ಚಳವಳಿಗಳಿಗೆ ವಿದ್ಯಾರ್ಥಿಗಳು ಮತ್ತು ಯುವಕರನ್ನು ತೊಡಗಿಸುವ ಕುರಿತು ಮೈಸೂರು ಗ್ರಾಹಕರ ಪರಿಷತ್‌ನಲ್ಲಿ ಸದಸ್ಯರು ಚರ್ಚೆ ನಡೆಸಿದರು.

ಮೈಸೂರು ಯಾದವಗಿರಿಯ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕ ಪರಿಷತ್ತು ಕಚೇರಿಯಲ್ಲಿ ಭಾನುವಾರ ನಡೆದ ಸಾಮಾನ್ಯ ಸಭೆಯಲ್ಲಿ ಗ್ರಾಹಕರ ಹಕ್ಕುಗಳ ಕುರಿತು ವಿದ್ಯಾವರ್ಧಕ ಪಿಯು ಕಾಲೇಜಿನ ಉಪನ್ಯಾಸಕರು,ವಿಜಯ ವಿಠಲ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು, ಉಪನ್ಯಾಸಕರು, ಶಿಕ್ಷಕರು, ಇಂಜಿನಿಯರ್ ವಿದ್ಯಾರ್ಥಿಗಳು ಸೇರಿದಂತೆ ಇತರರೊಂದಿಗೆ ಸದಸ್ಯರು ಚರ್ಚೆ ನಡೆಸಿದರು.

ವಿದೇಶಗಳಲ್ಲಿ ಗ್ರಾಹಕರೇ ಅಲ್ಲಿನ ಯಜಮಾನ ಎಂದು ಆಯಾಯ ರಾಷ್ಟ್ರಗಳ ಸರ್ಕಾರಗಳು, ಜನಪ್ರತಿನಿಧಿಗಳು ಪರಿಭಾವಿಸುತ್ತಿವೆ. ಆದರೆ, ಭಾರತದಲ್ಲಿ ಸ್ವಾತಂತ್ರ್ಯ ಬಂದಾಗ ಇದ್ದಂತಹ ಪರಿಸ್ಥಿತಿ ಹಾಗೆ ಮುಂದುವರೆಯುತ್ತಿವೆ. ಬಡತನ ನಿರ್ಮೂಲನೆ, ಗುಣಮಟ್ಟದ ಶಿಕ್ಷಣ, ಆರೋಗ್ಯ ಹಾಗೂ ಹವಮಾನ ಬದಲಾವಣೆಗೆ ಈಗಿನ ಆಡಳಿತ ವ್ಯವಸ್ಥೆಯಲ್ಲಿ ಸಾಧ್ಯವೇ ಎಂದು ವಿದ್ಯಾರ್ಥಿಯೊಬ್ಬರು ಪ್ರಶ್ನಿಸಿದರು. ಈ ವ್ಯವಸ್ಥೆ ಬದಲಾಗ ಬೇಕಾದರೆ ಜನಪ್ರತಿನಿಧಿಗಳು, ಗ್ರಾಹಕರಿಗೆ ನೀಡಬೇಕಾದ ಸವಲತ್ತುಗಳನ್ನು ನೀಡಿದರೆ ಎಲ್ಲ ಕೆಲಸಗಳು, ಸುಲಲಿತವಾಗಿ ಗ್ರಾಹಕರಿಗೆ ಸಿಗುತ್ತವೆ ಎಂದು ಸದಸ್ಯ ಬಾಮಿ ವಿ.ಶಣೈ, ವಿದ್ಯಾರ್ಥಿ ಪ್ರಶ್ನೆಗೆ ಉತ್ತರಿಸಿದರು.

ಶಿಕ್ಷಕರೊಬ್ಬರು ವಿಷಯ ಪ್ರಸ್ತಾಪಿಸಿ, ನಾನು ವಿದ್ಯಾರ್ಥಿ ಆಗಿದ್ದ ಸಂದರ್ಭದಿಂದಲೂ ಪ್ರಜಾಪ್ರಭುತ್ವದಲ್ಲಿ ಮತದಾರನೇ ರಾಜ, ಮಾರುಕಟ್ಟೆಯಲ್ಲಿ ಗ್ರಾಹಕನೇ ರಾಜ ಎಂಬ ಅಂಶಗಳನ್ನು ಭಾಷಣಗಳ ಮೂಲಕ ಕೇಳಿಕೊಂಡು ಬೆಳೆದಿದ್ದೇನೆ. ಆದರೆ, ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ಪ್ರಶ್ನಿಸುವ ಹಕ್ಕಿಲ್ಲ. ಮತದಾನದ ನಂತರ ಮತದಾರರನಿಗೆ ತಾನು ಆಯ್ಕೆ ಮಾಡಿದ ಜನಪ್ರತಿನಿಧಿಯನ್ನು ಪ್ರಶ್ನಿಸುವ ಹಕ್ಕಿರುವುದಿಲ್ಲ. ಎಲ್ಲವೂ ಭಾಷಣಕ್ಕೆ ಸೀಮಿತವಾಗಿವೆ ಎಂದು ತಮ್ಮ ಅನುಭವವನ್ನು ಸಭೆಗೆ ವಿವರಿಸಿದರು.

ಇದಕ್ಕೆ ಉತ್ತರಿಸಿದ ಸದಸ್ಯ ಬಾಮಿ ವಿ.ಶಣೈ, ನಾವು ಪ್ರತಿವರ್ಷ ಗ್ರಾಹಕರ ದಿನಾಚರಣೆಯನ್ನು ಆಚರಿಸಿಕೊಂಡು ಬಂದಿದ್ದೇವೆ. ಇಂತಹ ಆಚರಣೆಗಳಿಂದ ಯಾವುದೇ ಸುಧಾರಣೆಗಳು ಕಾಣುತ್ತಿಲ್ಲ. ಹಾಗಾಗಿ ಶಾಲಾ ಹಂತದಿಂದಲೇ ಗ್ರಾಹಕರು ಮತ್ತು ಮತದಾರರ ಹಕ್ಕುಗಳು, ಜವಾಬ್ದಾರಿ ಕುರಿತು, ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಅದಕ್ಕೆ ಯುವಕರು, ವಿದ್ಯಾರ್ಥಿಗಳ ಸಹಭಾಗಿತ್ವ ಅತೀ ಮುಖ್ಯ ಎಂದು ಅವರು ಮನವಿ ಮಾಡಿದರು.

ಭಾರತಕ್ಕೆ ಸ್ವತಂತ್ರ್ಯ ಲಭಿಸಿ 75 ವರ್ಷ ಕಳೆದರೂ ಸರ್ಕಾರಿ ಕಚೇರಿಗಳಲ್ಲಿ ನಮ್ಮ ಕೆಲಸಗಳ ಮಾಡಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಗೊಗರೆಯ ಪರಿಸ್ಥಿತಿ ಇದೆ. ಇಂತಹ ಮುಂಜುಗರಗಳಿಂದ ಪಾರಾಗಲು ಅಥವಾ ಕಾನೂನು ಬಾಹಿರವಾಗಿಯಾದರೂ ಲಂಚ ನೀಡಿ, ಕೆಲಸ ಮಾಡಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿವೆ ಎಂದು ಕೆಲ ಘಟನಾವಳಿಗಳನ್ನು ಉಲ್ಲೇಖಿಸಿ ತಿಳಿಸಿದರು. ಇದಕ್ಕೆ ಬೇರೆ ಸದಸ್ಯರು ದನಿಗೂಡಿಸಿದರು.

ಮತ್ತೊರ್ವ ಸದಸ್ಯೆ ಶೋಭನಾ ಮಾತನಾಡಿ, ಗ್ರಾಹಕರ ಹಕ್ಕುಗಳನ್ನು ಪಡೆಯಲು ನಾವೆಲ್ಲ ಸಂಘಟಿತರಾಗಿ, ಸಮಾಜದಲ್ಲಿ ವಿಭಿನ್ನ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. 'ಏಳಿ, ಎದ್ದೇಳಿ, ಜವಾಬ್ದಾರಿಯುತ ಪೌರತ್ವ ವನ್ನು ಪ್ರಚಾರಗೊಳಿಸಲು ನಿಮ್ಮನ್ನು ನೀವೇ ತೊಡಗಿಸಿಕೊಳ್ಳಿ' ಎಂದು ಜಾಗೃತಿ ಮೂಡಿಸುವ ಪೋಸ್ಟರ್‌ಗಳನ್ನು ಶಾಲಾ–ಕಾಲೇಜುಗಳಲ್ಲಿ ಪ್ರದರ್ಶಿಸಲು ಸಲಹೆ ನೀಡಿದರು. ಕಳೆದ 30 ವರ್ಷಗಳಿಂದ ಮೈಗ್ರಾಪ ವತಿಯಿಂದ ಗ್ರಾಹಕರನ್ನು ಎಚ್ಚರಿಸಲು ಅನೇಕ ಕಾರ್ಯಕ್ರಮಗಳನ್ನು ಆಚರಿಸಿ, ಭಾಷಣಗಳನ್ನು ಮಾಡಿದ್ದೇವೆ. ಆದರೂ ಪ್ರಯೋಜನವಾಗಿಲ್ಲ. ಬೇರೆ ಬೇರೆ ಮಾರ್ಗಗಳ ಮೂಲಕ ಗ್ರಾಹಕರು, ಮತದಾರರ ಹಕ್ಕು, ಜವಾಬ್ದಾರಿಗಳನ್ನು ಜಾಗೃತಿಗೊಳಿಸಲು ಮಂಬರುವ ದಿನಗಳಲ್ಲಿ ಶಾಲಾ–ಕಾಲೇಜುಗಳಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯನ್ನು ವಿಭಿನ್ನ ರೀತಿ ಚಳವಳಿ ರೀತಿಯ ಅಭಿಯಾನ ಹಮ್ಮಿಕೊಳ್ಳುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ರೇಣು ಅಗರ್‌ವಾಲ್, ಸಿ.ಆರ್.ರೂಪ, ವಸಂತಕುಮಾರ್, ಬಿ.ಆರ್.ಸೌಮ್ಯ, ಕೀರ್ತನ ಆರ್.ನಾಯಕ, ವಿ.ರೀಟಾ, ಪಿ.ಹರ್ಷಿತಾ, ಜಿ.ಪಾಲ್ಗುಣ, ಮಂಜುನಾಥ್ ಬಿ.ಗೌಡ, ಎನ್.ಶ್ವೇತ, ಆರ್.ಕಾರ್ತಿಕ್, ಡಿ.ವಿ.ದಯಾನಂದ ಸಾಗರ್, ವಿ.ಎಸ್.ಸೀತಾರಾಮ್, ಜೆ.ಎಲ್.ಸೌಮ್ಯ ಶಾಸ್ತ್ರಿ, ಎನ್.ರೂಪ, ಅಭಿಜ್ಞಾ, ಎಸ್.ಎ.ವೀಣಾ, ಪದ್ಮಾವತಿ ಸೇರಿದಂತೆ ಇತರರಿದ್ದರು.

ವಿದ್ವಾನ್ ಆನಂದರಿಗೆ 'ಸಂಗೀತ ವಿದ್ಯಾನಿಧಿ', ವಿದ್ವಾನ್ ಅರವಿಂದ್ ಹೆಬ್ಬಾರ್‌ಗೆ 'ಸಂಗೀತ ಸೇವಾ ನಿಧಿ' ಪ್ರಶಸ್ತಿ ಪ್ರದಾನ



ಮೈಸೂರು, ಡಿ.10(ಎಸ್‌ಪಿಎನ್)–ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಸಂಗೀತ, ನೃತ್ಯ ಹಾಗೂ ಇತರೆ ಲಲಿತಾ ಕಲೆಗಳಲ್ಲಿ ಸಾಧನೆಗೈದ ಹಿರಿಯ ವಿದ್ವಾಂಸರಿಗೆ ಪ್ರತಿ ವರ್ಷ ಕೊಡ ಮಾಡುವ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ವಿದ್ವಾನ್ ಎ.ವಿ.ಆನಂದ್ ಅವರಿಗೆ, 'ಸಂಗೀತ ಸೇವಾನಿಧಿ' ಪ್ರಶಸ್ತಿಯನ್ನು ಉಡುಪಿಯ ವಿದ್ವಾನ್ ಅರವಿಂದ್ ಹೆಬ್ಬಾರ್ ಅವರಿಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಪ್ರೊ.ರಾ.ವಿಶ್ವೇಶ್ವರನ್ ವಿತರಿಸಿದರು.

ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಐದು ದಿನಗಳ 28ನೇ ಸಂಗೀತ ಸಮ್ಮೇಳನದ ಸಮಾರೋಪ ಹಾಗೂ ಹಿರಿಯ ಕಲಾವಿದರಿಗೆ ಸಂಗೀತ ವಿದ್ಯಾನಿಧಿ ಮತ್ತು ಸೇವಾನಿಧಿ ಪ್ರಶಸ್ತಿಯನ್ನು ಪ್ರೊ.ರಾ.ವಿಶ್ವೇಶ್ವರನ್ ಪ್ರದಾನ ಮಾಡಿ ಮಾತನಾಡಿದರು.

ವಿದ್ವಾನ್ ಪ್ರೊ.ರಾ.ವಿಶ್ವೇಶ್ವರನ್ ಮಾತನಾಡಿ, ಕಳೆದ ಇಪ್ಪತ್ತೆಂಟು ವರ್ಷಗಳಿಂದ ದೇಶದ ನಾನಾ ಭಾಗದ ವಿದ್ವಾಂಸರಿಗೆ ಸಂಗೀತ ಸೇವಾನಿಧಿ, ಸಂಗೀತ ವಿದ್ಯಾನಿಧಿ ಪ್ರಶಸ್ತಿಯನ್ನು ಗೌರವಿಸುತ್ತಿರುವುದು ಸಂತೋಷದ ಸಂಗತಿ. ಅದೇ ಈ ವರ್ಷ ಸಮ್ಮೇಳನಾಧ್ಯಕ್ಷ ವಿದ್ವಾನ್ ಎ.ವಿ.ಆನಂದ್ ಅವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿ ನೀಡಿರುವುದು ಸಂತೋಷದ ಸಂಗತಿ. ಅಲ್ಲದೆ, ಕರಾವಳಿ ತೀರದ ವಿದ್ವಾನ್ ಅರವಿಂದ್ ಹೆಬ್ಬಾರ್ ಅವರಿಗೆ 'ಸಂಗೀತ ಸೇವಾನಿಧಿ' ಪ್ರಶಸ್ತಿ ನೀಡಿರುವುದು ಔಚಿತ್ಯಪೂರ್ಣವಾಗಿದೆ ಎಂದು ಹೇಳಿದರು.

ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ರಾಜ್ಯಮಟ್ಟದ ಸಂಗೀತ ಸಮ್ಮೇಳನ ನಡೆಸಿ, ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ನಾಡಿನ ಹೆಸರಾಂತ ಸಾಹಿತಿಗಳಿಗೆ ಗೌರವಿಸುತ್ತಿರುವುದು ಸಂತೋಷದ ಸಂಗತಿ. ಅಲ್ಲದೆ, ಐದು ಸಂಗೀತ ಸಮ್ಮೇಳನ ಆಯೋಜಿಸಿರುವುದು ರಾಜ್ಯದಲ್ಲೇ ಮೊದಲು ಎಂದ ಅವರು, ಈ ಸಮ್ಮೇಳನ ಯಾವುದೋ ತ್ಯಾಗರಾಜರ ಆರಾಧನೆಯಲ್ಲಿ ಸಂಗೀತ ಸಮ್ಮೇಳನ ಆಯೋಜಿಸಿದಂತಲ್ಲ. ಅದಕ್ಕೂ ಮಿಗಿಲಾದ ಸಮ್ಮೇಳನ ಎಂದರೆ ತಪ್ಪಾಗಲಾರದು ಎಂದರು.

ಈ ವೇಳೆ ಮೈಸೂರು ಎಂ.ನಾಗರಾಜ್, ಮೈಸೂರು ಮಂಜುನಾಥ್ ಇತರರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಸಂಪಗೋಡು ವಿಘ್ನರಾಜ ಪ್ರಸ್ತುತಪಡಿಸಿದ ಸಂಗೀತ ಕಛೇರಿ ಪ್ರೇಕ್ಷಕರ ಮನಸೂರೆಗೊಂಡವು. ಇವರಿಗೆ ಮತ್ತೂರು ಆರ್.ಶ್ರೀನಿಧಿ(ವೈಲಿನ್), ಎ.ವಿ.ಆನಂದ್ (ಮೃದಂಗ), ಸಿ.ಪಿ.ವ್ಯಾಸ ವಿಠ್ಠಲ (ಖಂಜಿರ) ಸಹಕಾರ ನೀಡಿದರು.


ಇಂದಿನಿಂದ ಪಾರ್ಕಿನ್‌ಸನ್ಸ್ ಕಾಯಿಲೆ ಚಿಕಿತ್ಸಾ ಶಿಬಿರ

ಮೈಸೂರು,ಡಿ.10–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಡಿ.11ರಿಂದ 16ರವರೆಗೆ ಪಾರ್ಕಿನ್‌ಸನ್ಸ್ ಕಾಯಿಲೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ದೇಹ ಕಂಪಿಸುವುದು, ಬಿಗಿತ, ನಡೆಯಲು ಕಷ್ಟವಾಗುವುದು, ನಿಧಾನವಾದ ಚಲನೆ, ವರ್ತನೆ ಅಥವಾ ಆಲೋಚನಾ ತೊಂದರೆಗಳು, ಸಂವೇದನೆ ಹಾಗೂ ನಿದ್ರಾಹೀನತೆ ಇತ್ಯಾದಿ ತೊಂದರೆಗಳಿಗೆ ತಜ್ಞ ವೈದ್ಯರಿಂದ ತಪಾಸಣೆ, ಸಲಹೆ ಮತ್ತು ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9886485005, ದೂ. 0821–2548231 ಸಂಪರ್ಕಿಸಬಹುದು.

ಅಸ್ತಮಾ ರೋಗಕ್ಕೆ ಉಚಿತ ಔಷಧಿ

ಮೈಸೂರು,ಡಿ.10–ಮೈಸೂರಿನ ಸೇವಾ ಭಾರತಿ ವತಿಯಿಂದ ಡಿ.26ರಂದು ಬೆಳಗ್ಗೆ 5ರಿಂದ 7ರವರೆಗೆ ಅಸ್ತಮಾ, ತತ್ಸಂಬಂಧಿತ ಕೆಮ್ಮು, ನೆಗಡಿ ಕಾಯಿಲೆಗಳಿಗೆ ಉಚಿತವಾಗಿ ಔಷಧಿ ನೀಡಲಾಗುವುದು. ಆಸಕ್ತರು ಡಿ. 20ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ. 9481170530, 9611802730.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.12.2023 ಸೋಮವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023ರಿಂದ 15.12.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, 4ನೇ ಕಾರ್ತಿಕ ಸೋಮ ವಾರದ ಅಂಗವಾಗಿ ಬೆಳಗ್ಗೆ 7ರಿಂದ ಶ್ರೀ ವೀರಭದ್ರೇಶ್ವರ, ಶ್ರೀ ಚಾಮರಾಜೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತಾಭಿಷೇಕ, ಮಹಾರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಶ್ರೀ ಚಾಮರಾಜೇಶ್ವರಸ್ವಾಮಿ ಪ್ರೀತ್ಯರ್ಥವಾಗಿ ಗಿರಿಜಾ ಕಲ್ಯಾಣ ಮಹೋತ್ಸವ, ಸಂಜೆ 7 ಗಂಟೆಗೆ ಶಾಲ್ಯನ್ನ ಅಲಂಕಾರ, ಒಳ ಆವರಣದಲ್ಲಿ ಉತ್ಸವಗಳು, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ಗಂಟೆವರೆಗೆ.

■ **ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಮಾನಸ ಗಂಗೋತ್ರಿ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಉಪನ್ಯಾಸ ನೀಡುವವರು: ನಿವೃತ್ತ ಪ್ರಾಧ್ಯಾಪಕ ಪ್ರೊ.ಉಮಾಪತಿ, ವಿಷಯ: ಭಾರತದ ಸಂವಿಧಾನ ಮತ್ತು ಗಾಂಧಿತತ್ವಗಳು, ಉಪಸ್ಥಿತಿ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಅಧ್ಯಕ್ಷತೆ: ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರಕುಮರ್, ಸ್ಥಳ: ಗಾಂಧಿ ಅಧ್ಯಯನ ಕೇಂದ್ರದ ತರಗತಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30 ಗಂಟೆಗೆ.

■ **ಶ್ರೀ ಸಂಗಮೇಶ್ವರ ದೇವಸ್ಥಾನ:** ಕಾರ್ತಿಕ ಮಾಸ–ಸೋಮವಾರಗಳಂದು ವಿಶೇಷ ಪೂಜಾ ಮಹೋತ್ಸವ, ಧಾರ್ಮಿಕ ಉಪನ್ಯಾಸಗಳು, ದಿವ್ಯಸಾನ್ನಿಧ್ಯ: ಮೈಸೂರಿನ ಶ್ರೀ ಕುದೇರು ಮಠದ ಷ.ಬ್ರ.ಶ್ರೀಗುರುಶಾಂತ ಸ್ವಾಮಿಗಳು, ಉಪನ್ಯಾಸ: ಸುತ್ತೂರು ಶ್ರೀಕ್ಷೇತ್ರದ ಜೆಎಸ್‌ಎಸ್ ಸಂಸ್ಕೃತ ಕಾಲೇಜು ಪ್ರಾಂಶುಪಾಲರಾದ ಸುನಂದ ಭೂಪಾಳಿ, ವಿಷಯ: ಶೈಕ್ಷಣಿಕ ಕ್ಷೇತ್ರಕ್ಕೆ ಮಠಮಾನ್ಯಗಳ ಕೊಡುಗೆ, ಸ್ಥಳ: ಶ್ರೀ ನಟರಾಜ ಸಭಾಭವನ, ಶ್ರೀ ಹೊಸಮಠ, ಉಪನ್ಯಾಸ: ಸಂಜೆ 7 ಗಂಟೆಗೆ, ಉತ್ಸವ 7.30ಕ್ಕೆ, ಪ್ರಸಾದ: ರಾತ್ರಿ 8ಕ್ಕೆ.

■ **ಶ್ರೀತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್:** ಸಂಗೀತ ಕಾರ್ಯಕ್ರಮ, ಸಂಜೆ 6 ಗಂಟೆಗೆ ಶಾಸ್ತ್ರೀಯ ಸಂಗೀತ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ಶ್ರೀನಾದಬ್ರಹ್ಮ ಸಂಗೀತ ಸಭಾ.

■ **ಕಾವಾ ಬಳಗ:** ಆಂತರ್ಯ ಅಷ್ಟಪದಿಗಳ ಅನಾವರಣ, ಪುಸ್ತಕ ಬಿಡುಗಡೆ ಹಾಗೂ ಚಿತ್ರ ಸಂಕಲನದ ಪ್ರದರ್ಶನ ಸಮಾರಂಭ, ಅಧ್ಯಕ್ಷತೆ: ಪ್ರಾಚ್ಯವಸ್ತು ಸಂಗ್ರಹಾಲಯ ಆಯುಕ್ತರು, ಕಾವಾ ಡೀನ್ ದೇವರಾಜು, ಪುಸ್ತಕ ಬಿಡುಗಡೆ: ಖ್ಯಾತ ಸಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು, ಸಿದ್ಧಾರ್ಥನಗರ, ಬೆಳಗ್ಗೆ 11 ಗಂಟೆಗೆ.

■ **ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘ ಮತ್ತು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಮೈಸೂರು:** ಕೊನೆ ಕಾರ್ತಿಕ ಸೋಮವಾರದ ಅಂಗವಾಗಿ ಸಾಮೂಹಿಕ ದೀಪೋತ್ಸವ ಕಾರ್ಯಕ್ರಮ, ಸ್ಥಳ: ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ಆವರಣ, ಕೆ.ಜಿ.ಕೊಪ್ಪಲು, ಸಂಜೆ 5 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,:** ಭಾರತೀಯ ಭಾಷಾ ದಿನೋತ್ಸವ ವಿಶೇಷ ಉಪನ್ಯಾಸ, ಉಪನ್ಯಾಸಕರು: ಕರ್ನಾಟಕ ರಾಜ್ಯ ಮುಕ್ತ ವಿವಿಯ ಸಹಾಯಕ ಪ್ರಾಧ್ಯಾಪಕರಾದ ಡಾ.ಪಿ.ಮಣಿ, ವಿಷಯ: ಶ್ರೀ ಸುಬ್ರಹ್ಮಣ್ಯ ಭಾರತಿ ಅವರ ಬದುಕು ಮತ್ತು ಬರಹ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ವಿಜಯಕುಮಾರ್, ಎಸ್.ಶಂಕರ್, ಸ್ಥಳ: ಬಿಎಂಶ್ರೀ ಸಭಾಂಗಣ, ಮಾನಸ ಗಂಗೋತ್ರಿ, ಮಧ್ಯಾಹ್ನ 12.30ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತತೆ):** ಸಾಫ್ಟ್ ಸ್ಕಿಲ್ಸ್ ಡೆವೆಲಪ್‌ಮೆಂಟ್ ಕುರಿತು ಕಾರ್ಯಾಗಾರ, ಸ್ಥಳ: ನವಜ್ಯೋತಿ ಆಡಿಟೋರಿಯಂ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ

ಹಳೇಬೀಡು, ಹುಣಸೂರು ತಾಲೂಕು

■ **ಶ್ರೀ ಮಲೆ ಮಹದೇಶ್ವರಸ್ವಾಮಿ ಸೇವಾ ಬಳಗ:** 7ನೇ ವರ್ಷದ ಕಡೇ ಕಾರ್ತಿಕ ಮಾಸದ ಪೂಜಾ ಮಹೋತ್ಸವ, ಬೆಳಗ್ಗೆ 9.30ರಿಂದ ಮಹದೇಶ್ವರಸ್ವಾಮಿಗೆ ಅಭಿಷೇಕ, ಮಹಾಮಂಗಳಾರತಿ, ಮುಖ್ಯ ಅತಿಥಿಗಳು: ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಎಂಎಲ್‌ಸಿ ಹೆಚ್.ವಿಶ್ವನಾಥ್, ಸ್ಥಳ: ಶ್ರೀ ಮಹದೇಶ್ವರಸ್ವಾಮಿ ಸನ್ನಿಧಿ, ಹಳೇಬೀಡು, ಹುಣಸೂರು ತಾಲೂಕು.

ಮೈಸೂರು ಆಕಾಶವಾಣಿ



6.10 ಚಿಂತನ: ಡಾ.ಬಸವರಾಜ್ ಕಲ್ಗುಡಿ, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಡಾ. ಟಿ.ವಿ.ಸತ್ಯನಾರಾಯಣ, 6.50 ರೈತರಿಗೆ ಸಲಹೆ, 9.00 ನೆನಪಿನಂಗಳ: ಖ್ಯಾತ ತಬಲಾ ಕಲಾವಿದರಾದ ಉಸ್ತಾದ್ ಅಲ್ಲಾ ರಖಾ ಅವರೊಂದಿಗಿನ ಸಂವಾದ, 10.00 ವಿದ್ವಾನ್ ರಾಜ್ಕುಮಾರ್ ಭಾರತಿ: ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

12.30 ದೇವರನಾಮ: ವಿನಾಯಕ ತೊರವಿ, 12.45 ನಮ್ಮ ಆರೋಗ್ಯ: 'ಫಂಗಲ್ ಇನ್ಫೆಕ್ಷನ್ ಲಕ್ಷಣಗಳು ಮತ್ತು ಚಿಕಿತ್ಸೆ' ಕುರಿತು ಡಾ.ಎಂ.ಎನ್. ಸುಮನಾ ಅವರೊಂದಿಗೆ ಮಾತುಕತೆ, 1.25 ಭಾವಗೀತೆಗಳು: ಆರ್. ಶೈಲಾ, 3.00 ಲಲಿತಾ ಹರಿಪ್ರಿಯಾ: ಹಾಡುಗಾರಿಕೆ. **4.00 ಮಹಿಳಾರಂಗ:** ಕಲಿಕಾ ನ್ಯೂನತೆ ಇರುವ ಮಕ್ಕಳನ್ನು ಗುರುತಿಸಿ ಅವರಿಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು ಕುರಿತು ಅಧ್ಯಾಪಕಿ ರೂಪಾರಾವ್ ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ ಆಪ್ತಸಮಾ ಲೋಚಕಿ ಸುಶೀಲಾ ಕೆ., 4.45 ಹಿಂದಿ ಪಾಠ: ಡಾ. ಸ್ಮಿತಾ ಚಿಪ್ಳೂಣ್‌ಕರ್, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ" ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು ಹೊನ್ನು": ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮೂಲಕ ತೋಟಗಾರಿಕಾ ಬೆಳೆಗಳಿಗೆ ಪ್ರೋತ್ಸಾಹ ಕುರಿತ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ ಹೆಚ್.ಎಂ. ನಾಗರಾಜ್.

9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ": ದೊಡ್ಡ ಅರಸಿನಕೆರೆಯ ಹುಲಿವೇಷ ಕಲಾವಿದ ಡಿ. ಚಿಕ್ಕೋನು ಅವರೊಂದಿಗೆ ಸಂದರ್ಶನ, ಸಂದರ್ಶಕರು– ಅಬ್ದುಲ್ ರಶೀದ್.

ಹುಲಿ ಸೆರೆಗಾಗಿ ತೀವ್ರಗೊಂಡ ಕಾರ್ಯಾಚರಣೆ

● ಹುಲಿ ಅಡಗಿರುವ ಕಬ್ಬಿನ ಗದ್ದೆ ಸುತ್ತುವರೆದ ಅರಣ್ಯ ಸಿಬ್ಬಂದಿ ● 15 ದಿನದಿಂದ ಅರಣ್ಯ ಸಿಬ್ಬಂದಿಗೆ ಚಳ್ಳೆಹಣ್ಣು ತಿನ್ನಿಸುತ್ತಿರುವ ಹುಲಿ ● ರೀಚ್‌ಅಪ್ ಯಂತ್ರದ ಮೇಲೆ ಕುಳಿತು ಹುಲಿ ಚಲನ-ವಲನ ಗಮನಿಸುತ್ತಿರುವ ಸಿಬ್ಬಂದಿ ● ಕಾರ್ಯಾಚರಣೆಗೆ ಸೇರಿಕೊಂಡ ಸರಗೂರು ಟ್ರ್ಯಾಕ್ ಟೀಂ, ಅಗ್ನಿಶಾಮಕ ಸಿಬ್ಬಂದಿ





ಮೈಸೂರು, ಡಿ.10(ಎಂಟಿವೈ)– ಮೈಸೂರು ತಾಲೂಕಿನ ದೊಡ್ಡಕಾನ್ಯಾ, ಚಿಕ್ಕಕಾನ್ಯಾ, ಬ್ಯಾತಳ್ಳಿ, ಸಿಂಧುವಳ್ಳಿ ಸುತ್ತಮುತ್ತ ಕಳೆದ ಒಂದು ತಿಂಗಳಿನಿಂದಲೂ ಕಣ್ಣಾ ಮುಚ್ಚಾಲೆ ಆಟ ಆಡುತ್ತಿರುವ ಒಂದೂವರೆ ವರ್ಷದ ಹುಲಿ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆಯನ್ನು ಇನ್ನಷ್ಟು ತೀವ್ರಗೊಳಿಸಿದ್ದು, ಸ್ಥಳೀಯ ಸಿಬ್ಬಂದಿಗಳೊಂದಿಗೆ ಸರಗೂರಿನ ಟ್ರ್ಯಾಕ್ ಟೀಂ ಮತ್ತು ಅಗ್ನಿಶಾಮಕ ಸಿಬ್ಬಂದಿಗಳನ್ನು ಬಳಸಿಕೊಂಡು ಕಾರ್ಯಾಚರಣೆ ಮುಂದುವರೆಸಲಾಗಿದೆ.

ಡಿ.1ರಂದು ಕ್ಯಾಮರಾ ಟ್ರ್ಯಾಪ್‌ನಲ್ಲಿ ಹುಲಿಯ ಚಲನ-ವಲನ ದೃಶ್ಯ ಪತ್ತೆಯಾದ ಬಳಿಕ ಎರಡು ದಿನ ಕಣ್ಮರೆಯಾಗಿದ್ದ ಹುಲಿ ಮತ್ತೆ ಪದೇ ಪದೆ ದೊಡ್ಡಕಾನ್ಯಾ ಮತ್ತು ಚಿಕ್ಕಕಾನ್ಯಾ ಸಮೀಪದ ಕಬ್ಬಿನ ಗದ್ದೆಯಲ್ಲಿ ಅಳವಡಿಸಿರುವ ಕ್ಯಾಮರಾ ಟ್ರ್ಯಾಪ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದು, ಇದರಿಂದ ಮುಂದೆ ಆಗಬಹುದಾದ ಅನಾಹುತ ತಪ್ಪಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ತನ್ನ ಕಾರ್ಯಾಚರಣೆಯನ್ನು ಚುರುಕುಗೊಳಿಸಿದೆ.

ಡಿ.8ರಂದು ಹುಲಿ ಓಡಾಡುತ್ತಿರುವ ದೃಶ್ಯ ಅರಣ್ಯ ಇಲಾಖೆಯ ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆಯಾಗಿದ್ದು, ಸಮೀಪದ ಕಬ್ಬಿನ ಗದ್ದೆಯಲ್ಲಿ ಹುಲಿ ಅವಿತುಕೊಂಡಿರುವುದು ಖಚಿತವಾಗಿದೆ. ಈ ಹಿನ್ನೆಲೆಯಲ್ಲಿ ಸರಗೂರಿನ ಟ್ರ್ಯಾಕ್ ಟೀಂ ಹಾಗೂ ಅಗ್ನಿಶಾಮಕ ಸಿಬ್ಬಂದಿ ತಂಡ ಮತ್ತು ವಿವಿಧೆಡೆಯಿಂದ ಹುಲಿ ಕಾರ್ಯಾಚರಣೆಯಲ್ಲಿ ನಿಪುಣರಾಗಿರುವ ಹೆಚ್ಚುವರಿ ಸಿಬ್ಬಂದಿಗಳನ್ನು ಕರೆಸಿಕೊಂಡು ಶನಿವಾರ ರಾತ್ರಿಯಿಡೀ ಕಾರ್ಯಾಚರಣೆ ನಡೆಸಲಾಯಿತಾದರೂ, ಹುಲಿ ಮಾತ್ರ ಅರಣ್ಯ ಸಿಬ್ಬಂದಿಗಳಿಗೆ ಚಳ್ಳೆಹಣ್ಣು ತಿನ್ನಿಸಿ ನಾಪತ್ತೆಯಾಗಿತ್ತು.

ಗಬ್ಬಿನ ಗದ್ದೆಯಲ್ಲಿರುವ ಹುಲಿಯನ್ನು ಅರವಳಿಕೆ ಮದ್ದು ನೀಡಿ ಸೆರೆ ಹಿಡಿಯುವ ನಿಟ್ಟಿನಲ್ಲಿ ಹಾಗೂ ಹುಲಿಯ ಟ್ರ್ಯಾಕ್ ಪತ್ತೆ ಹಚ್ಚಲು ಸಹಕಾರಿಯಾಗುವಂತೆ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಆನೆಯ ಮೇಲೆ ಮರದ ಅಂಬಾರಿಯನ್ನು ಇಡಲು ತರಲಾಗಿದ್ದ ಹೈಡ್ರಾಲಿಕ್ ರೀಚ್ ಅಪ್ ಯಂತ್ರವನ್ನು ತಂದು ಗದ್ದೆಯ ಮಧ್ಯದಲ್ಲಿಟ್ಟು 18 ಅಡಿ ಎತ್ತರದಲ್ಲಿ ರೀಚ್‌ಅಪ್ ಯಂತ್ರದ ಮೇಲೆ ಕ್ಯಾಮರಾ ಟ್ರ್ಯಾಪ್ ಅಳವಡಿಸಿ, ಅದರೊಂದಿಗೆ ಅರವಳಿಕೆ ತಜ್ಞರನ್ನು ಕೂರಿಸಲಾಗಿತ್ತು. ಕಳೆದ ರಾತ್ರಿ ಕಬ್ಬಿನ ಗದ್ದೆಯಿಂದ ಹೊರ ಬಂದ ಹುಲಿ ರೀಚ್‌ಅಪ್ ಯಂತ್ರದ ಸಮೀಪವೇ ಬಂದು ಸಿಬ್ಬಂದಿಗಳ ಸುಳಿವು ಅರಿತು ಮತ್ತೆ ದಟ್ಟವಾದ ಕಬ್ಬಿನ ಗದ್ದೆಯೊಳಕ್ಕೆ ನುಸುಳಿದೆ.

ಬಳಿಕ ರಾತ್ರಿಯಿಡೀ ಕಾದು ಕುಳಿತ ಅರಣ್ಯ ಸಿಬ್ಬಂದಿಗಳಿಗೆ ಹುಲಿ ಚಳ್ಳೆಹಣ್ಣು ತಿನ್ನಿಸಿ ಕಣ್ಮರೆಯಾಗಿದೆ. ಈ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗಿನಿಂದಲೇ ಹುಲಿ ಇರುವಿಕೆಯ ಸ್ಥಳದ ಸುತ್ತ ಅರಣ್ಯ ಸಿಬ್ಬಂದಿಗಳು ಗಸ್ತು ತಿರುಗುತ್ತಿದ್ದು, ವಿವಿಧೆಡೆ ಅಳವಡಿಸಿರುವ ಕ್ಯಾಮರಾ ಟ್ರ್ಯಾಪ್‌ಗಳ ದೃಶ್ಯವನ್ನು ಪರಿಶೀಲಿಸಿದ್ದಾರೆ. ಯಾವುದೇ ಕ್ಯಾಮರಾದಲ್ಲೂ ಹುಲಿ ಕಬ್ಬಿನ ಗದ್ದೆಯಿಂದ ಹೊರಗೆ ಹೋಗಿರುವ ದೃಶ್ಯ ಪತ್ತೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಮೂವರು ಅರವಳಿಕೆ ತಜ್ಞರೊಂದಿಗೆ ಅರಣ್ಯ ಸಿಬ್ಬಂದಿ ರಾತ್ರಿಯಿಡೀ ಕಾರ್ಯಾಚರಣೆ ಮುಂದುವರೆಸಿದ್ದು, ಹೇಗಾದರೂ ಮಾಡಿ ಹುಲಿಯನ್ನು ಕಬ್ಬಿನ ಗದ್ದೆಯಿಂದ ಹೊರಗೆ ಆಕರ್ಷಿಸಿ ಅರವಳಿಕೆ ಮದ್ದು ನೀಡಿ ಸುರಕ್ಷಿತವಾಗಿ ಸೆರೆ ಹಿಡಿಯಬೇಕೆಂದು ಪಣ ತೊಟ್ಟಿದ್ದಾರೆ.

ಮೈಸೂರು ವೃತ್ತದ ಸಿಎಫ್ ಡಾ. ಮಾಲತಿ ಪ್ರಿಯಾ, ಡಿಸಿಎಫ್ ಡಾ. ಕೆ.ಎನ್.ಬಸವರಾಜ್ ನೇತೃತ್ವದಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಎಸಿಎಫ್ ಎನ್.ಲಕ್ಷ್ಮೀಕಾಂತ ಸೇರಿದಂತೆ 100ಕ್ಕೂ ಹೆಚ್ಚು ಸಿಬ್ಬಂದಿಗಳು ಪಾಲ್ಗೊಂಡಿದ್ದಾರೆ.

ಅನುಭವದ ಕೊರತೆ: ಮೈಸೂರು ಸಮೀಪ ಕಾಣಿಸಿಕೊಂಡಿರುವ ಹುಲಿಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದ್ದು, ಅನುಭವದ ಕೊರತೆಯಿಂದ ಕಳೆದ 15 ದಿನದಿಂದಲೂ ಹುಲಿ ಸೆರೆ ಹಿಡಿಯುವಲ್ಲಿ ವಿಫಲರಾಗಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಆರಂಭದಲ್ಲಿ ಹುಲಿ ಇರುವಿಕೆ ಬಗ್ಗೆ ದೂರು ನೀಡಿದ್ದರೂ ಗಂಭೀರವಾಗಿ ಪರಿಗಣಿಸದ ಅರಣ್ಯ ಇಲಾಖೆ, ಚಿರತೆ ಎಂದು ಸ್ಥಳೀಯರಿಗೆ ತಿಳಿಸಿ ಸುಮ್ಮನಾಗುತ್ತಿತ್ತು ಆನಂತರ ಅರಣ್ಯ ಸಿಬ್ಬಂದಿಗಳೇ ಹುಲಿಯನ್ನು ನೋಡಿದಾಗ ಹುಲಿ ಇರುವಿಕೆಯನ್ನು ಅರಣ್ಯ ಇಲಾಖೆ ಖಚಿತಪಡಿಸಿಕೊಂಡಿತ್ತು. ಆನಂತರ ಆರಂಭಿಸಿದ ಕಾರ್ಯಾಚರಣೆಯಲ್ಲಿ ಕೇವಲ ಹುಲಿಯ ಚಿತ್ರಗಳನ್ನಷ್ಟೇ ಕ್ಯಾಮರಾ ಟ್ರ್ಯಾಪ್ ಮೂಲಕ ಸೆರೆ ಹಿಡಿದಿರುವ ಸಿಬ್ಬಂದಿಗಳು, ಹುಲಿಯನ್ನು ಪತ್ತೆ ಹಚ್ಚುವಲ್ಲಿ ವಿಫಲರಾಗಿದ್ದಾರೆ. ಹುಲಿ ಸೆರೆಗೆ ಕ್ರಮ ಕೈಗೊಳ್ಳಿ ಎಂದು ಒತ್ತಾಯಿಸುತ್ತಿದ್ದರೂ ಕಾರ್ಯಾಚರಣೆ ಮಾಡುವುದಾಗಿ ಹೇಳುವ ಮೂಲಕ ಜನರನ್ನು ಸಮಾಧಾನ ಮಾಡುತ್ತಿದ್ದಾರೆ. ಹೀಗಾಗಿ ಬಂಡೀಪುರ ಅಥವಾ ನಾಗರಹೊಳೆಯಲ್ಲಿನ ನುರಿತ ಸಿಬ್ಬಂದಿಗಳನ್ನು ಕರೆಸಿ ಹುಲಿ ಸೆರೆ ಹಿಡಿಯಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಸಣ್ಣಪುಟ್ಟ ಪ್ರಾಣಿಗಳ ಬೇಟೆಯಾಡಿದ ಹುಲಿ: ದೊಡ್ಡಕಾನ್ಯ ಚಿಕ್ಕಕಾನ್ಯ ಬಳಿ ಕಳೆದ ಒಂದು ತಿಂಗಳಿನಿಂದಲೂ ಓಡಾಡುತ್ತಿರುವ ಹುಲಿ ಈಗಷ್ಟೇ ತಾಯಿಯಿಂದ ಬೇರ್ಪಟ್ಟ ಹುಲಿಯಾಗಿದೆ. ಕೇವಲ ಒಂದೂವರೆಯಿಂದ ಎರಡು ವರ್ಷದ ಈ ಹುಲಿಯು ತಾಯಿಯಿಂದ ಬೇರ್ಪಟ್ಟು ತನ್ನ ಸರಹದ್ದು ಗುರುತಿಸಿಕೊಳ್ಳಲು ವಲಸೆ ಹೋಗುವ ಸಂದರ್ಭದಲ್ಲಿ ದೊಡ್ಡಕಾನ್ಯ ಬಳಿ ಇರುವ ಪಾಳುಬಿದ್ದ ಭೂಮಿಯಲ್ಲಿ ವಾಸ್ತವ್ಯ ಹೂಡಿದೆ. ಕಬ್ಬಿನ ಗದ್ದೆ ಹಾಗೂ ಪಾಳು ಬಿದ್ದ ಭೂಮಿಯಲ್ಲಿ ಇರುವ ಕಾಡಂದಿ, ಮೊಲ ಸೇರಿದಂತೆ ಸಣ್ಣಪುಟ್ಟ ಪ್ರಾಣಿಗಳನ್ನು ಮಾತ್ರ ಬೇಟೆಯಾಡುವ ಕಲೆ ಕಲಿತಿರುವ ಈ ಮರಿ, ಇದುವರೆಗೆ ಹಲವು ಬಾರಿ ಮನುಷ್ಯರು ಎದುರಾಗಿದ್ದರೂ ಅವರ ಮೇಲೆ ದಾಳಿ ಮಾಡುವ ಪ್ರಯತ್ನ ಮಾಡಿಲ್ಲ. ಅಲ್ಲದೇ ಕುರಿಯೊಂದನ್ನು ಬಿಟ್ಟರೆ ದೊಡ್ಡ ಜಾನುವಾರುಗಳನ್ನೂ ಬಲಿ ಪಡೆದಿಲ್ಲ. ಹಾಗಾಗಿ ಈ ಹುಲಿ ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವ ಕಲೆ ಕಲಿತುಕೊಂಡಿಲ್ಲ ಎಂದು ಸಾಬೀತಾಗಿದೆ.

ಸವಾಲಾದ ಹುಲಿ

ದೊಡ್ಡಕಾನ್ಯ ಬಳಿ ಓಡಾಡುತ್ತಿರುವ ಹುಲಿ ಆರೋಗ್ಯವಂತ ಹುಲಿಯಾಗಿದ್ದು, ಅದನ್ನು ಸುರಕ್ಷಿತವಾಗಿ ಸೆರೆ ಹಿಡಿಯಬೇಕಾಗಿದೆ. ಮಾನವ ಪ್ರಾಣ ಹಾನಿ ತಪ್ಪಿಸುವ ನಿಟ್ಟಿನಲ್ಲಿ ಈ ಹುಲಿಯನ್ನು ಸೆರೆ ಹಿಡಿಯುವ ಅನಿವಾರ್ಯತೆ ಎದುರಾಗಿದೆ. ಇದರ ಬೆನ್ನಲ್ಲೇ ಅರಣ್ಯ ಇಲಾಖೆ ಮುಂದೆ ಸವಾಲೊಂದು ಎದುರಾಗಿದೆ. ಈ ಹುಲಿಯನ್ನು ಸೆರೆ ಹಿಡಿದ ನಂತರ ಏನು ಮಾಡಬೇಕು ಎಂಬ ಚಿಂತೆ ಅರಣ್ಯ ಸಿಬ್ಬಂದಿಗಳಲ್ಲಿ ಕಾಡುತ್ತಿದೆ. ಈ ಹುಲಿಯು ಚಿಕ್ಕ ವಯಸ್ಸಿನದ್ದಾಗಿದ್ದು, ಅದನ್ನು ಬೇರೆ ಯಾವ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಿದರೆ ಅದು ಬದುಕುವುದು ಕಷ್ಟವಾಗುತ್ತದೆ. ಏಕೆಂದರೆ ಹುಲಿಯ ಆಹಾರ ಸರಪಳಿಯಾದ ಜಿಂಕೆ, ಕಾಡೆಮ್ಮೆ, ಸಾಂಬಾರ್ ಪ್ರಾಣಿಗಳನ್ನು ಬೇಟೆಯಾಡುವ ಸಾಮರ್ಥ್ಯ ಈ ಹುಲಿಗೆ ಇಲ್ಲದ ಕಾರಣ ಅದನ್ನು ಸ್ಥಳಾಂತರಿಸುವುದು ಹೇಗೆ ಎಂಬ ಚಿಂತೆ ಅರಣ್ಯ ಇಲಾಖೆ ಮುಂದಿದೆ. ಒಂದು ವೇಳೆ ಅದನ್ನು ಮೃಗಾಲಯದ ಪುನರ್ವಸತಿ ಕೇಂದ್ರದಲ್ಲಿ ಆಶ್ರಯ ನೀಡಿದರೆ ವನ್ಯಜೀವಿ ಹೋರಾಟಗಾರರು ಆಕ್ಷೇಪ ವ್ಯಕ್ತಪಡಿಸುವ ಸಾಧ್ಯತೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಮುಂದೆ ದೊಡ್ಡ ಸವಾಲು ಎದುರಾಗಿದೆ.

ಅತ್ಯಾಕರ್ಷಕ ಲೋಗೋ; ಮನಸೆಳೆಯುವ ಟ್ಯಾಗ್‌ಲೈನ್

ಮೈಸೂರು, ಡಿ.10(ಎಸ್‌ಬಿಡಿ)– ಪ್ರವಾಸೋದ್ಯಮ ಸಚಿವರು ಲೋಕಾರ್ಪಣೆ ಮಾಡಿದ ಬ್ರ್ಯಾಂಡ್ ಮೈಸೂರು ಲೋಗೋ(ಲಾಂಛನ) ಹಾಗೂ ಟ್ಯಾಗ್‌ಲೈನ್ (ಅಡಿಬರಹ) ಗಮನ ಸೆಳೆಯುತ್ತವೆ. ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ವೃತ್ತಾಕಾರದ ಲೋಗೋ ಬಿಡುಗಡೆ ಮಾಡಲಾಗಿದೆ.

ದೀಪಾಲಂಕೃತ ಅರಮನೆ ಬಿಂಬಿಸುವಂತೆ ಲೋಗೋ ಒಳಾಂಗಣವನ್ನು ವಿನ್ಯಾಸಗೊಳಿಸಲಾಗಿದೆ. ಮಧ್ಯದಲ್ಲಿ ದಸರಾ ಜಂಬೂಸವಾರಿ ಬಿಂಬಿಸುವ ಚಿನ್ನದ ಅಂಬಾರಿ ಹೊತ್ತ ಎರಡು ಆನೆಗಳ ನಡುವೆ ರಾಜವಂಶದ ಲಾಂಛನ ಗಂಡಭೇರುಂಡ ಚಿತ್ರಿಸಲಾಗಿದೆ. ಮೈಸೂರು ಹೆಗ್ಗುರುತುಗಳನ್ನೂ ಈ ಲೋಗೋದಲ್ಲಿ ಕಾಣಬಹುದು. ಆನೆಗಳ ಮೇಲಿನ ಹೊದಿಕೆ 'ಮೈಸೂರು ರೇಷ್ಮೆ' ವಸ್ತ್ರವನ್ನು ಬಿಂಬಿಸುತ್ತದೆ. ಗಂಡಭೇರುಂಡದ ನೆತ್ತಿಯಲ್ಲಿ 'ಮೈಸೂರು ವೀಳ್ಯೆ' ಎಲೆ ಮಾದರಿ ಚಿತ್ರಿಸಲಾಗಿದೆ. 'ಮೈಸೂರು' ಪದದ ಇಕ್ಕೆಲಗಳಲ್ಲಿ 'ಮೈಸೂರು ಮಲ್ಲಿಗೆ' ವಿನ್ಯಾಸಗೊಳಿಸಲಾಗಿದೆ.

ಈ ಅತ್ಯಾಕರ್ಷಕ ಬ್ರ್ಯಾಂಡ್ ಮೈಸೂರು ಲೋಗೋವನ್ನು ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳ ಪತ್ರ ವ್ಯವಹಾರ ಹಾಗೂ ಇತರೆ ಎಲ್ಲಾ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಬಳಸುವ ಮೂಲಕ ಮೈಸೂರು ಪರಂಪರೆ ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಕ್ಕಂತಾಗುತ್ತದೆ.

ಪ್ರವಾಸಿಗರನ್ನು ಆಹ್ವಾನಿಸುವ 'ನಮ್ಮ ಪರಂಪರೆ ನಿಮ್ಮ ತಾಣ' ಎಂಬ ಅಡಿಬರಹ ಮನಮುಟ್ಟುವಂತಿದೆ.

ನಾಗರಹೊಳೆ ಹಾಗೂ ಬಂಡೀಪುರ ಆನೆಗಳ ವಾಸಸ್ಥಾನವಾಗಿರುವುದರಿಂದ ಆನೆಮುಖ ಹೋಲುವ ಗಜಮುಖನ ದೇಹಾಕೃತಿಯನ್ನು ಹಹಹಹ(ಗಜ್ಜು) ಹೆಸರಿನಲ್ಲಿ ವಿನ್ಯಾಸ ಮಾಡಿ, ಮೈಸೂರು ರೇಷ್ಮೆ ಪೇಟ, ಪಂಚೆ, ಶಲ್ಯ ಧರಿಸಿ, ಹಣೆಯಲ್ಲಿ ಗಂಧದ ಬೊಟ್ಟಿರುವಂತೆ ವಿನ್ಯಾಸಗೊಳಿಸಿ 'ಮ್ಯಾಸ್‌ಕಾಟ್' ರೂಪಿಸಲಾಗಿದೆ.

ಮೈಸೂರು ಪೇಟ ಹಾಗೂ ರೇಷ್ಮೆ ಶಲ್ಯ ಧರಿಸಿರುವ ಹ್ಯಾಪಿ ಮನ್, ರೇಷ್ಮೆ ಸೀರೆ ಧರಿಸಿದ ತಾಯಿ ಚಾಮುಂಡೇಶ್ವರಿ, ಪೆನ್ನು, ಕೀ ಚೇನ್, ಛತ್ರಿ ಮುಂತಾದ ಸ್ಮರಣಿಕೆಗಳನ್ನು ವಿನ್ಯಾಸಗೊಳಿಸಿದ್ದು, ಮೈಸೂರು ಪ್ರವಾಸದ ನೆನಪಿಗೆ ಇವುಗಳನ್ನು ಕೊಂಡೊಯ್ಯಬಹುದಾಗಿದೆ.

ಮೈಸೂರಿನ ವಿವಿಧ ತಾಣಗಳನ್ನು ವರ್ಣಿಸುವ 'ಬ್ಲಾಗ್'ಗಳನ್ನು ಮೈಸೂರು ಪ್ರವಾಸೋದ್ಯಮದ ಸಾಮಾಜಿಕ ಜಾಲತಾಣಗಳಲ್ಲಿ ಬಳಸಿಕೊಳ್ಳಲು ಮುಕ್ತಗೊಳಿಸಲಾಗಿದೆ.

ಬಹುಮಾನ ವಿಜೇತರು: ಪ್ರವಾಸೋದ್ಯಮ ಇಲಾಖೆಯಿಂದ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಲೋಗೋ ವಿಭಾಗದಲ್ಲಿ ಎಲ್.ರ. ರಾಘವೇಂದ್ರ(ಪ್ರ), ಎಂ.ಬಾಲಸ್ವಾಮಿ(ದ್ವಿ), ರಿದ್ವಾ ಶೈಲ ರೈ(ತೃ), ಟ್ಯಾಗ್‌ಲೈನ್ ವಿಭಾಗದಲ್ಲಿ ಮ್ಯಾಸ್‌ಕಾಟ್(ಸುಂದರ ಶುಭಕಾರಿ) ವಿಭಾಗದಲ್ಲಿ ಅದಿತಿ ಪಂಡಿತ್(ಪ್ರ), ಬಿ.ಪ್ರಣೀತ ಆಶ್ವಿನಯ್(ದ್ವಿ), ಸಯಾನ್ ಪಂಡಿತ್(ತೃ), ವಿಭಿನ್ನ ಸ್ಮರಣಿಕೆ ವಿಭಾಗದಲ್ಲಿ ಬಿ.ಪ್ರಣೀತ್ ಆಶ್ವಿನಯ್(ಪ್ರ), ಟಿ.ಪ್ರತಿಭಾ(ದ್ವಿ), ಎಲ್.ಪ್ರೀತಮ್ ಭಾರದ್ವಾಜ್(ತೃ), ಹಾಗೂ ಬ್ಲಾಗ್ (ಮಿಂಬರಹ) ವಿಭಾಗದಲ್ಲಿ ಸಿಂಧು ಎಸ್.ಶಾಸ್ತ್ರಿ(ಪ್ರ), ಮೇಘನಾ ಭಾಸ್ಕರ(ದ್ವಿ) ಹಾಗೂ ಎಸ್.ಎಂ.ಮೀನಾಕ್ಷಿ(ತೃ) ಬಹುಮಾನ ಪಡೆದಿದ್ದಾರೆ. ವಿಜೇತರಿಗೆ ಪ್ರಥಮ 20 ಸಾವಿರ, ದ್ವಿತೀಯ 10 ಸಾವಿರ ಹಾಗೂ ತೃತೀಯ 5 ಸಾವಿರ ರೂ. ಬಹುಮಾನ ನೀಡಲಾಗುತ್ತದೆ.

ಡಿಸೆಂಬರ್ 19ರಂದು 'ಇಂಡಿಯಾ' ಮೈತ್ರಿಕೂಟದ ಸಭೆ

ನವದೆಹಲಿ, ಡಿ.10– ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಡಿಸೆಂಬರ್ 19ರಂದು ದೆಹಲಿಯಲ್ಲಿ ಸಭೆ ನಡೆಸಲಿದೆ. ಬಿಜೆಪಿ ವಿರುದ್ಧ ಪ್ರಮುಖ ಕಾರ್ಯಸೂಚಿಗಳನ್ನು ನಿಗದಿಪಡಿಸುವುದು, ಸ್ಥಾನ ಹಂಚಿಕೆ ಮತ್ತು ಜಂಟಿಯಾಗಿ ರ್‍ಯಾಲಿಗಳನ್ನು ಆಯೋಜಿಸುವ ಬಗ್ಗೆ ಮಾತುಕತೆಯು ಮೈತ್ರಿಕೂಟದ ಮುಂದಿರುವ ವಿಷಯಗಳು. ಈ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು ಎನ್ನಲಾಗಿದೆ.

ಈ ಕುರಿತು ಸಾಮಾಜಿಕ ಜಾಲತಾಣದ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರತ್ಯುತ್ತರ ನೀಡುವ ಸಲುವಾಗಿ 'ನಾನಲ್ಲ, ನಾವು' ಘೋಷಣೆ ಅಡಿ 'ಇಂಡಿಯಾ' ಪಕ್ಷಗಳು ಕೆಲಸ ಮಾಡಲಿವೆ ಎಂದಿದ್ದಾರೆ.


ರಾಜಸ್ಥಾನ, ಛತ್ತೀಸಗಢ ಮತ್ತು ಮಧ್ಯಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸಾಧನೆ ಕಳಪೆಯಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆಯುವ ಮೂಲಕ ಸತತವಾಗಿ ಮೂರನೇ ಬಾರಿಗೆ ಅಧಿಕಾರಕ್ಕೇರಲಿದೆ ಎಂಬ ವಿಶ್ವಾಸವನ್ನು ಪ್ರಧಾನಿ ನರೇಂದ್ರ ಮೋದಿ ಅವರು ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ 'ಇಂಡಿಯಾ' ಸಭೆ ಮಹತ್ವದ್ದಾಗಿದೆ. ಮುಂಬರಲಿರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಪರ್ಯಾಯವಾದ ಸಕಾರಾತ್ಮಕ ಕಾರ್ಯಸೂಚಿ ರೂಪಿಸುವ ಸವಾಲು ವಿರೋಧಪಕ್ಷಗಳ ಎದುರಿದೆ.

ಜಾತಿ ಗಣತಿ, ಹಳೆ ಪಿಂಚಣಿ ಯೋಜನೆ ಮರು ಜಾರಿ ಸೇರಿ ಹಲವಾರು ವಿಷಯಗಳನ್ನು ವಿರೋಧಪಕ್ಷಗಳು ವಿಧಾನಸಭೆ ಚುನಾವಣಾ ಪ್ರಚಾರದ ವೇಳೆ ಮುನ್ನೆಲೆಗೆ ತಂದಿದ್ದವು. ಈ ಕುರಿತು ಪ್ರತಿಕ್ರಿಯೆ ನೀಡಿದ ನಾಯಕರೊಬ್ಬರು, ಚುನಾವಣಾ ಪ್ರಚಾರದ ವೇಳೆ ಮುನ್ನೆಲೆಗೆ ತಂದಿದ್ದ ವಿಷಯಗಳನ್ನು ಮತದಾರರು ತಿರಸ್ಕರಿಸಿದ್ದಾರೆ ಎಂಬುದನ್ನು ಚುನಾವಣಾ ಫಲಿತಾಂಶವು ಬಿಂಬಿಸುತ್ತಿದೆ ಎನ್ನಲು ಸಾಧ್ಯವಿಲ್ಲ ಎಂದಿದ್ದಾರೆ.

10 ವರ್ಷದ ಅವಧಿಯಲ್ಲಿ ಸಮಾಜದಲ್ಲಿ ದ್ವೇಷ, ಅಸೂಯೆ ಬೀಜ ಬಿತ್ತಲಾಗಿದೆ

ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ ಆರೋಪ



ಮೈಸೂರು, ಡಿ.10(ಬಿಎಲ್‌ಯು)– ಕಳೆದ ಹತ್ತು ವರ್ಷದ ಅವಧಿಯಲ್ಲಿ ಸಮಾಜದಲ್ಲಿ ದ್ವೇಷ, ಅಸೂಯೆ ಬೀಜ ಬಿತ್ತಲಾಗಿದೆ ಎಂದು ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ ಆರೋಪಿಸಿದ್ದಾರೆ

ಮೈಸೂರಿನ ಮಹಾರಾಜ ಪೌಢಶಾಲೆ ಸಭಾಂಗಣದಲ್ಲಿ ಇಂದು ಭಾರತ ಜ್ಞಾನ ವಿಜ್ಞಾನ ಸಮಿತಿ, ಪೀಪಲ್ ಲೀಗಲ್ ಫೋರಂ, ರೋವರ್ಸ್ ರೇಂಜರ್ಸ್ ಘಟಕ ಆಯೋಜಿಸಿದ್ದ 'ಸಂವಿಧಾನದ ದೃಷ್ಟಿಯಲ್ಲಿ ಮಾನವ ಹಕ್ಕುಗಳು' ಕುರಿತ ಉಪನ್ಯಾಸ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ದ್ವೇಷ, ಅಸೂಯೆ ಹೆಚ್ಚಾಗುತ್ತಿರುವ ಕಾರಣ ಸಂವಿಧಾನದ ಮೌಲ್ಯ ಕೂಡ ಕಡಿಮೆಯಾಗುತ್ತಿದೆ ಎಂದರು.

ಕಳೆದ ಹತ್ತು ವರ್ಷದ ಅವಧಿಯಲ್ಲಿ ಬಿತ್ತಿರುವ ದ್ವೇಷ, ಹಿಂಸೆಯ ಬೀಜ ಈಗ ದೊಡ್ಡ ಮರವಾಗಿದ್ದು, ಅದೇ ವಿಷದ ಹಣ್ಣನ್ನು ಈಗ ಎಲ್ಲರೂ ತಿನ್ನಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ದೇಶದಲ್ಲಿ ಶಾಂತಿಯ ವಾತಾವರಣ ಹಾಗೂ ಭಾತೃತ್ವ ಭಾವನೆ ಇಲ್ಲದಂತಾಗಿದೆ ಯಾವಾಗ ಭಾತೃತ್ವ ಭಾವನೆ ಇರುವುದಿಲ್ಲವೋ ಆಗ ನ್ಯಾಯ ಹಾಗೂ ಸ್ವಾತಂತ್ರ್ಯ ಸಿಗುವುದಿಲ್ಲ. ಈಗ ಅದೇ ಪರಿಸ್ಥಿತಿ ಎದುರಾಗಿದೆ. ಈ ನಿಟ್ಟಿನಲ್ಲಿ ಶಾಂತಿಯ ವಾತಾವರಣ ನಿರ್ಮಾಣವಾಗಿ ಎಲ್ಲರೂ ಭಾತೃತ್ವ ಮನೋಭಾವ ಮೈಗೂಡಿಸಿಕೊಳ್ಳಬೇಕು. ಈಗ ಸಮಾಜದಲ್ಲಿ ಎದುರಾಗಿರುವ ರೋಗಕ್ಕೆ ಇದೆ ಮದ್ದು ಎಂದು ಒಂಬತ್ಕೆರೆ ಅಭಿಪ್ರಾಯಪಟ್ಟರು.

ಡಿಸೆಂಬರ್ 10 ರ ಈ ದಿನವನ್ನು ವಿಶ್ವ ಮಾನವ ಹಕ್ಕುಗಳ ದಿನಾಚರಣೆಯಾಗಿ ಆಚರಿಸುತ್ತಿದ್ದೇವೆ. ಈ ದಿನದ ಮಹತ್ವ ಸಾರ್ಥಕತೆಯಾಗಲು ಮಾನವ ಹಕ್ಕುಗಳ ಉಲ್ಲಂಘನೆಯಾಗಬಾರದು. ಸಂವಿಧಾನದ ಮೌಲ್ಯ ಮತ್ತು ತತ್ವವನ್ನು ಎಲ್ಲರೂ ಅನುಸರಿಸಬೇಕು ಎಂದು ಒಂಬತ್ಕೆರೆ ಸಲಹೆ ನೀಡಿದರು.

ಮಹಾರಾಜ ಸರ್ಕಾರಿ ಪೌಢಶಾಲೆಯ ಮುಖ್ಯ ಶಿಕ್ಷಕ ಡಾ.ಡಿ.ಮಹೇಶ್, ಪೀಪಲ್ಸ್ ಲೀಗಲ್ ಫೋರಂ ನಿರ್ದೇಶಕ ಬಾಬು ರಾಜ್ ಪಲ್ಲದನ್, ರೋವರ್ಸ್ ರೇಂಜರ್ಸ್ ಸಂಚಾಲಕ ಡಾ.ಆರ್.ಶ್ರೀನೆ ನಾಯಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿರಿಧಾನ್ಯಗಳ ಮಹತ್ವ ಸಾರಿದ ವಾಕಥಾನ್



ಮೈಸೂರು, ಡಿ.10(ಜಿಎ)–ಸಿಎಫ್‌ಟಿಆರ್‌ಐ ವತಿಯಿಂದ ಆಯೋಜಿಸಿರುವ ರಾಷ್ಟ್ರೀಯ ಸಿರಿಧಾನ್ಯ ಆಹಾರ ಸಮ್ಮೇಳನದ ಅಂಗವಾಗಿ ಭಾನುವಾರ ವಾಕಥಾನ್ ಮೂಲಕ ಸಿರಿಧಾನ್ಯಗಳ ಮಹತ್ವ ಸಾರಿದರು.

ಬೆಳಿಗ್ಗೆ 8 ಗಂಟೆಗೆ 300ಕ್ಕೂ ಹೆಚ್ಚು ಮಂದಿ ಸಿರಿಧಾನ್ಯದ ಮಹತ್ವ ಸಾರುವ ಫಲಕಗಳನ್ನು ಹಿಡಿದುಕೊಂಡು ಸಿಎಫ್‌ಟಿಆರ್‌ಐನ ದ್ವಾರದಿಂದ ಹೊರಟು ದಾಸಪ್ಪ ವೃತ್ತದಿಂದ ಜೆಎಲ್‌ಬಿ ರಸ್ತೆ ಮೂಲಕ ಫೀಲ್ಡ್ ಮಾರ್ಷಲ್ ಕಾರಿಯಪ್ಪ ವೃತ್ತದ ಮಾರ್ಗವಾಗಿ ಮೈಸೂರು–ಹುಣಸೂರು ರಸ್ತೆ ಸಾಗಿ ನಂತರ ಕಲಾಮಂದಿರದ ಸಮೀಪದ ಸಿಎಫ್‌ಟಿಆರ್‌ಐನ ದ್ವಾರಕ್ಕೆ ತಲುಪಿ ವಾಕಥಾನ್ ಪೂರ್ಣಗೊಳಿಸಿದರು.

ಈ ವೇಳೆ ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ನವದೆಹಲಿಯ ಎಫ್‌ಎಸ್‌ಎಸ್‌ಎಐನ ವಿಜ್ಞಾನ ಮತ್ತು ಮಾನದಂಡಗಳ ನಿರ್ದೇಶಕ ಡಾ.ಅಮಿತ್ ಶರ್ಮಾ, ಬೆಂಗಳೂರು ಎಫ್‌ಎಸ್‌ಎಸ್‌ಎಐನ ಸಹಾಯಕ ನಿರ್ದೇಶಕ ಕುಮರೇಶನ್, ಸಿಎಫ್ ಟಿಆರ್ ಐನ ನಿರ್ದೇಶಕರಾದ ಡಾ.ಎನ್.ಭಾಸ್ಕರ್, ಡಾ.ಸುರೇಶ ಸಾಖರೆ, ಡಾ.ಎ.ಜಯದೀಪ್, ಡಾ.ನಿಲಾಬ್ ಸಿಂಗ್ ಪಾಲ್ಗೊಂಡಿದ್ದರು.

ಪಾದಯಾತ್ರೆ ಮೂಲಕ ಮಹದೇಶ್ವರ ಬೆಟ್ಟಕ್ಕೆ ದೊಡ್ಡ ಸತ್ತಿಗೆ



ಕೊಳ್ಳೇಗಾಲ, ಡಿ.10– ವಿವಿಧ ಗ್ರಾಮಗಳಲ್ಲಿ ಉತ್ಸವ ಜರುಗಿದ ಬಳಿಕ ದೊಡ್ಡ ಸತ್ತಿಗೆಯನ್ನು ಪಾದಯಾತ್ರೆ ಮೂಲಕ ಮಹದೇಶ್ವರಬೆಟ್ಟಕ್ಕೆ ಕೊಂಡೊಯ್ಯಲಾಯಿತು.

ತಾಲೂಕಿನ ಪಾಳ್ಯ ಗ್ರಾಮದಲ್ಲಿ ಭಾನುವಾರ ದೊಡ್ಡ ಸತ್ತಿಗೆ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು. ಗ್ರಾಮಕ್ಕೆ ಪ್ರವೇಶಿಸಿದ ಪಾಳ್ಯದ ದೊಡ್ಡ ಸತ್ತಿಯನ್ನು ಇಲ್ಲಿನ ಮಹದೇಶ್ವರ ದೇವಾಲಯದಲ್ಲಿ ಇರಿಸಿ, ಬಳಿಕ ಸಂಪ್ರದಾಯದಂತೆ ವಿವಿಧ ಹೂಗಳಿಂದ ಅಲಂಕರಿಸುವುದರೊಂದಿಗೆ ಪೂಜೆ ಸಲ್ಲಿಸಲಾಯಿತು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಗ್ರಾಮಸ್ಥರು ಭಕ್ತಿಭಾವದಿಂದ ದೊಡ್ಡ ಸತ್ತಿಗೆ ಪೂಜೆ ಸಲ್ಲಿಸಿದರು. ಮಕ್ಕಳು ಹಾಗೂ ಯುವಕರು ಮಹದೇಶ್ವರರ ಸ್ಮರಣೆಯೊಂದಿಗೆ ಕುಣಿತ ಹಾಕಿದರು.

ಮೆರವಣಿಗೆ ನಂತರ ದೇವಸ್ಥಾನದ ಪ್ರಧಾನ ಅರ್ಚಕ ಮಹಾದೇವಸ್ವಾಮಿ, ಆಗಮಿಕ ಸೋಮಣ್ಣ ನಂದೀಶ್, ಮುಖಂಡರು ಸೇರಿದಂತೆ ಹಲವು ಗ್ರಾಮಸ್ಥರು ದೊಡ್ಡ ಸತ್ತಿಗೆ ಪಾದಯಾತ್ರೆ ಆರಂಭಿಸಿದರು. ಸೋಮವಾರ ಮಹದೇಶ್ವರ ಬೆಟ್ಟಕ್ಕೆ ತಲುಪಿ, ದೊಡ್ಡ ಸತ್ತಿಗೆಯನ್ನು ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗುವುದು.

ಪಾಳ್ಯ ಗ್ರಾಮದಿಂದ ಮಲೆಮಹದೇಶ್ವರಬೆಟ್ಟಕ್ಕೆ ಈ ಹಿಂದೆ ಕೊಡಮಾಡಿರುವ ಸತ್ತಿಗೆಯನ್ನು 3, 5 ಅಥವಾ 7 ವರ್ಷಕೊಮ್ಮೆ ಗ್ರಾಮಕ್ಕೆ ತಂದು ಉತ್ಸವ ನಡೆಸಿದ ನಂತರ ವಾಪಸ್ಸು ನೀಡುವುದು ಪ್ರತೀತಿ. ಅದರಂತೆ ಸೆ.8ರಂದು ಮಲೆ ಮಹದೇಶ್ವರ ಬೆಟ್ಟದಿಂದ ಬರಮಾಡಿಕೊಂಡಿದ್ದ ದೊಡ್ಡ ಸತ್ತಿಗೆ ಕೌದಳ್ಳಿ ಹಾಗೂ ಚಿಕ್ಕಿಂದುವಾಡಿ ಗ್ರಾಮದಲ್ಲಿ ತಂಗಿತ್ತು. ಭಾನುವಾರ ಪಾಳ್ಯದಲ್ಲಿ ಉತ್ಸವ ನಡೆಸಲಾಯಿತು.

ಮೈಸೂರಲ್ಲಿ ರಾಷ್ಟ್ರೀಯ ಕರಾಟೆ ಪಂದ್ಯಾವಳಿ



ಮೈಸೂರು, ಡಿ.10(ಜಿಎ)–ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಒಕಿನವಾ ಶೋರಿನ್ ರಿಯೂ ಕರಾಟೆ ಡು ಆಫ್ ಇಂಡಿಯಾ ಸಂಸ್ಥೆ ಅಂತಾರಾಷ್ಟ್ರೀಯ ಮಬುನಿ–ಹ–ಶಿಟೋ–ರಿಯೂ ಕರಾಟೆ ಅಸೋಸಿಯೇಷನ್ ಸಹಯೋಗದೊಂದಿಗೆ 30ನೇ ರಾಷ್ಟ್ರೀಯ ಕರಾಟೆ ಪಂದ್ಯಾವಳಿಯನ್ನು ಭಾನುವಾರ ನಡೆಸಲಾಯಿತು.

ಈ ಪಂದ್ಯಾವಳಿಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಸೇರಿದಂತೆ ದೇಶದ ವಿವಿಧ ರಾಜ್ಯಗಳಿಂದ 800ಕ್ಕೂ ಅಧಿಕ ಕರಾಟೆ ಪಟುಗಳು ಭಾಗವಹಿಸಿ, ಕರಾಟೆಯ ಕಥಾ ಮತ್ತು ಕುಮಿಟೆ ಪ್ರಕಾರಗಳ ಮೂಲಕ ತಮ್ಮ ಸಮರ ಕಲೆ ಪ್ರದರ್ಶಿಸಿ ಎಲ್ಲರ ಗಮನ ಸೆಳೆದರು.

ಈ ವೇಳೆ ಹಿರಿಯ ಕರಾಟೆಪಟು ಮನೀಷ್ ಮಾತನಾಡಿ, ಪ್ರಸ್ತುತ ದಿನಮಾನಗಳಲ್ಲಿ ಆತ್ಮರಕ್ಷಣೆಗಾಗಿ ಹೆಣ್ಣು ಗಂಡೆಂಬ ಭೇದವಿಲ್ಲದೆ ಸಮರ ಕಲೆ ಕಲಿಯುವುದು ಅಗತ್ಯ. ಮಕ್ಕಳು ಸಣ್ಣ ವಯಸ್ಸಿನಲ್ಲಿ ಕರಾಟೆ ಅಥವಾ ಯಾವುದೇ ರೀತಿಯ ಸಮರ ಕಲೆಗಳನ್ನು ಕಲಿಯುವುದರಿಂದ ದೇಹ ದಾರ್ಢ್ಯತೆ ಸದೃಢವಾಗುವುದರ ಜತೆಗೆ ಮಾನಸಿಕತೆಯೂ ಉತ್ತಮವಾಗಿರುತ್ತದೆ. ಮಕ್ಕಳಲ್ಲಿ ಕ್ರೀಡಾಮನೋಭಾವ, ಸಂಯಮ, ಪ್ರೀತಿ, ಸ್ನೇಹ ಮುಂತಾದ ಮಾನವೀಯ ಗುಣಗಳು ರೂಪುಗೊಳ್ಳುತ್ತವೆ. ಇದು ಉತ್ತಮ ಸಮಾಜ ನಿರ್ಮಾಣಕ್ಕೆ ಸಹಾಯವಾಗುತ್ತದೆ. ಜತೆಗೆ ಸಮಾಜದಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗುತ್ತವೆ ಮಕ್ಕಳ ಜತೆಗೆ ಪೋಷಕರೂ ಸಹ ಆಗಮಿಸಿ ಕ್ರೀಡಾಕೂಟದ ಮೆರಗು ಹೆಚ್ಚಿಸಿ ತಮ್ಮ ಮಕ್ಕಳ ಕೌಶಲ್ಯವನ್ನು ಕಂಡು ಹೆಮ್ಮೆ ಪಡುತ್ತಿದ್ದಾರೆ ಎಂದರು.

ಮೈಸೂರು ಡಯಾಸೀಸ್ ಎಜುಕೇಷನ್ ಸೊಸೈಟಿ ಕಾರ್ಯದರ್ಶಿ ರೆವರೆಂಡ್ ಫಾದರ್ ವಿಜಯ್ ಕುಮಾರ್, ಮುಡಾ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್ ಕುಮಾರ್, 8ನೇ ಡಾನ್ ಬ್ಲಾಕ್ ಬೆಲ್ಟ್ ಚಾಂಪಿಯನ್ ಹಂಷಿ ಎನ್.ಜಿ.ಶಿವದಾಸ್, ಶಿಹಾನ್ ಸುರೇಶ್ ಕೆನಿಚಿರಾ, ಹಂಷಿ ಎನ್.ಶಂಕರ್, ರೆನ್ಷಿ ಸೋಸಲೆ ಸಿದ್ದರಾಜು ಉಪಸ್ಥಿತರಿದ್ದರು.

ವಿದುಷಿ ಲಲಿತಾ ಕೋರೆ ಎಂ.ರಾವ್‌ಗೆ ನೂಪುರ ಶ್ರೀ ಪ್ರಶಸ್ತಿ ಪ್ರದಾನ



ಮೈಸೂರು, ಡಿ.10(ಎಸ್‌ಪಿಎನ್)– ವಿದುಷಿ ಲಲಿತಾ ಕೋರೆ ಎಂ.ರಾವ್ ಅವರಿಗೆ ಈ ಸಾಲಿನ ನೂಪುರ ಶ್ರೀ ಪ್ರಶಸ್ತಿಯನ್ನು ಕೇಂದ್ರ ಸರ್ಕಾರದ ಕಾರ್ಮಿಕ ಸಚಿವಾಲಯದ ನಿವೃತ್ತ ನಿರ್ದೇಶಕ ಕೆ.ಕೃಷ್ಣಮೂರ್ತಿ ಪ್ರದಾನ ಮಾಡಿದರು.

ಮೈಸೂರು ಕುವೆಂಪುನಗರದ ಗಾನ ಭಾರತೀ ಸಭಾಂಗಣದಲ್ಲಿ ನೂಪುರ ಕಲಾವಿದರ ಸಾಂಸ್ಕೃತಿಕ ಟ್ರಸ್ಟ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀಮತಿ ಕೆ.ವನಜಾಕ್ಷಮ್ಮ ಸಂಸ್ಮರಣಾ ನೃತ್ಯ ಆರಾಧನಾ –2023 ಹಾಗೂ ವಿದುಷಿ ಲಲಿತಾ ಕೋರೆ ಎಂ. ರಾವ್ ಅವರಿಗೆ 'ನೂಪುರ ಶ್ರೀ' ಪ್ರದಾನ ಮಾಡಿ, ಮಾತನಾಡಿದರು.

ನೂಪುರ ಕಲಾವಿದರ ಸಾಂಸ್ಕೃತಿಕ ಟ್ರಸ್ಟ್ ಪದಾಧಿಕಾರಿಗಳು ಹಲವು ವರ್ಷಗಳಿಂದ ಸಾಧಕರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಉತ್ತಮ ಬೆಳವಣಿಗೆ. ಈ ಬಾರಿ ವಿದುಷಿ ಲಲಿತಾ ಕೋರೆ ಎಂ.ರಾವ್ ಅವರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿರುವುದು ಉತ್ತಮ ಎಂದರಲ್ಲದೆ, ನಾಟ್ಯಾಚಾರ್ಯ ಪ್ರೊ.ಕೆ. ರಾಮಮೂರ್ತಿ ಅವರು, ಜೆಎಸ್‌ಎಸ್ ವಿದ್ಯಾಸಂಸ್ಥೆಯ ವಾಣಿಜ್ಯ ವಿಭಾಗದಲ್ಲಿ ಕೆಲಸ ಮಾಡಿ, ನಿವೃತ್ತ ಹೊಂದಿದ್ದಾರೆ. ಇದರ ಜೊತೆಗೆ ನೃತ್ಯಾಭ್ಯಾಸ ಮೂಲಕ ಅನೇಕ ಕಲಾವಿದರನ್ನು ಬೆಳೆಸಿ, ಸಾಂಸ್ಕೃತಿಕ ಕೊಡುಗೆ ನೀಡಿದ್ದಾರೆ ಎಂದರು.

ಪ್ರೊ.ಕೆ.ರಾಮಮೂರ್ತಿರಾವ್ ಅವರ ಪುತ್ರ ಹಾಗೂ ಶಿಷ್ಯ ವಿದ್ವಾನ್ ಕೆ.ಆರ್.ವಿಶ್ವದೀಪ, ವಿದ್ವಾನ್ ರಾಧಾಕೃಷ್ಣ ತಂತ್ರಿ ಹಾಗೂ ವಿದುಷಿ ವೀಣ ಸಾಮಗ ಅವರ ಶಿಷ್ಯೆ ವಿದುಷಿ ರಮ್ಯಾ ಕಿರಣ್, ಬೆಂಗಳೂರಿನ ವಿದುಷಿ ಸಂಧ್ಯಾ ಕೇಶವರಾವ್ ಅವರ ಶಿಷ್ಯೆ ಮಂಜುಶ್ರೀ ಕಡಬ ಅವರಿಂದ ಭರತನಾಟ್ಯ ಪ್ರದರ್ಶಿಸಿದರು.

ಈ ವೇಳೆ ಹಾಸನದ ಎವಿಕೆ ಕಾಲೇಜು ನಿವೃತ್ತ ಪ್ರೊ.ಶಾರದಾ ಅಶೋಕ ರಾವ್, ಉಡುಪಿ ವೈಕುಂಠ ಬಾಳಿಗ ಕಾನೂನು ಕಾಲೇಜಿನ ನಿರ್ದೇಶಕಿ ಡಾ.ನಿರ್ಮಲ ಹರಿಕೃಷ್ಣ, ಲತಾ ಆರ್.ರಾವ್, ವಿದುಷಿ ಡಾ.ಕೃಪಾಫಡ್ಕೆ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ತರಕಾರಿಗೆ ಅಂತ ಸಾವಿರ ರೂಪಾಯಿ ತಗೊಂಡೆಯಲ್ಲ ಏನಾಯ್ತು?

ಹೆಂಡತಿ : ಅಯ್ಯೋ...ನಿಮ್ಮಮ್ಮ ಹೇಳಿದ್ದಾರೆ ಸಂಸಾರ ಅಂದ್ಮೇಲೆ ಸಾವಿರ ಬರುತ್ತೆ, ಹೋಗುತ್ತೆ ಅದಕ್ಕೆಲ್ಲ ಲೆಕ್ಕ ಇಡಬಾರದು ಅಂತ...!

ಮೈಸೂರು ಮಿತ್ರ

ಸೋಮವಾರ, 11 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ನಿಮ್ಮದಲ್ಲದಿದ್ದರೆ ತೆಗೆದುಕೊಳ್ಳಬೇಡಿ,
ಸತ್ಯವಿಲ್ಲದಿದ್ದರೆ ಹೇಳಬೇಡಿ,
ಸರಿಯಿಲ್ಲ ಎನಿಸಿದರೆ ಮಾಡಬೇಡಿ,
ಒಟ್ಟಾರೆ ಆತ್ಮಸಾಕ್ಷಿಯ ವಿರುದ್ಧ ನಡೆಯಬೇಡಿ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅತಿಯಾದರೆ ಅಮೃತವೂ ವಿಷ'

ನಿಮ್ಮ ಪತ್ರಗಳು

ನಗ್ನ ಚಿತ್ರಗಳನ್ನು ಸೃಷ್ಟಿಸುವ ಆ್ಯಪ್‌ಗಳಿಗೆ ಕಡಿವಾಣ ಅಗತ್ಯ

ಮಾನ್ಯರೆ,

ಪ್ರಸ್ತುತ ದಿನಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಿಕೊಂಡು ಹಲವಾರು ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಮನುಷ್ಯ ಎಲ್ಲಿ ಹೋಗಿ ಕಾರ್ಯಾಚರಣೆ ಮಾಡಲು ಸಾಧ್ಯವಿಲ್ಲವೊ ಅಂತಹ ಸ್ಥಳಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅನುಕೂಲಕರವಾಗಿದೆ. ಅದರೆ ಇಂದಿನ ಯುವಜನಾಂಗ ತಂತ್ರಜ್ಞಾನವನ್ನು ತಮ್ಮ ಅಭಿವೃದ್ದಿಗೆ ಬಳಸಿಕೊಳ್ಳುವುದನ್ನು ಬಿಟ್ಟು, ಸಮಾಜಕ್ಕೆ ಮಾರಕವಾಗುವ ಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು ದುರದೃಷ್ಟಕರವಾಗಿದೆ. ಸಾಮಾಜಿಕ ಜಾಲತಾಣಗಳನ್ನು ಜಗತ್ತಿನ ಅರ್ಧಕ್ಕಿಂತ ಹೆಚ್ಚು ಜನ ಬಳಸಿಕೊಳ್ಳುತ್ತಿದ್ದಾರೆ.

ಸಾಮಾಜಿಕ ಜಾಲತಾಣಗಳಾದ ರೆಡಿಟ್, ಎಕ್ಸ್ ಟ್ವಿಟರ್, ಯ್ಯೂಟ್ಯೂಬ್ ಮುಂತಾದ ಜನಪ್ರಿಯ ಮಾಧ್ಯಮಗಳನ್ನು ಬಳಸುವಾಗ ಮಹಿಳೆಯರ ನಗ್ನ ಫೋಟೋಗಳನ್ನು ಸೃಷ್ಟಿಸುವ ಟೂಲ್ ಗಳ ಲಿಂಕ್‌ಗಳನ್ನು ಜಾಹಿರಾತಿನ ರೂಪದಲ್ಲಿ ಪ್ರಕಟಿಸಲಾಗುತ್ತದೆ, ಇಂತಹ ಲಿಂಕ್‌ಗಳನ್ನು ಬಳಸಿಕೊಳ್ಳುವ ಸಾಮಾಜಘಾತುಕರು ಆ ಲಿಂಕ್‌ನ್ನು ಕ್ಲಿಕ್ ಮಾಡಿದ ಕೂಡಲೆ ಆದು ಅವರನ್ನು ಆ್ಯಪ್ ಅಥವಾ ವೆಬ್‌ಸೈಟ್‌ಗೆ ಕರೆದುಕೊಂಡು ಹೋಗುತ್ತದೆ. ಇಂತಹ ನ್ಯೂಡಿಫೈ ಆ್ಯಪ್‌ಗಳಲ್ಲಿ ಯಾವುದೇ ಮಹಿಳೆಯ ಫೋಟೋವನ್ನು ಅಪ್‌ಲೋಡ್ ಮಾಡಿದ ಕೂಡಲೆ ಆ್ಯಪ್ ಲೋಡ್ ಆದ ಮಹಿಳೆಯ ಮುಖಕ್ಕೆ ಲಭ್ಯವಿರುವ ಬೇರೆ ನಗ್ನ ದೇಹವನ್ನು ಸಂಯೋಜಿಸಿ ನಗ್ನ ಫೋಟೋವನ್ನು ಕ್ಷಣ ಮಾತ್ರದಲ್ಲಿ ಉಚಿತವಾಗಿ ಡೌನ್‌ಲೋಡ್ ಮಾಡಲಾಗುತ್ತದೆ ಮತ್ತು ಕೃತಕ ಬುದ್ಧಿಮತ್ತೆಯ ತಂತ್ರಾಂಶದಿಂದಾಗಿ ಆ ಫೋಟೋ ನೈಜ್ಯತೆಯಿಂದ ಕೂಡಿರುತ್ತದೆ, ಈ ಮೂಲಕ ಆ ಮಹಿಳೆಯರನ್ನು ಬ್ಲಾಕ್ ಮೇಲ್ ಮಾಡಲು, ಮೋಜಿಗೆ ಬಳಸಿಕೊಳ್ಳುವುದಕ್ಕೆ, ಪೋರ್ನ್‌ಗ್ರಫಿ ಮುಂತಾದ ಸಮಾಜ ಘಾತಕ ಕೃತ್ಯಗಳಿಗೆ ಬಳಸಿಕೊಳ್ಳಲಾಗುತ್ತದೆ. ನ್ಯೂಡಿಫೈ ಲಿಂಕ್‌ಗಳು ಬಹಳ ಸುಲಭವಾಗಿ ದೊರೆಯುತ್ತದೆ, ಗೂಗಲ್‌ನಲ್ಲಿ ಕೇವಲ ನ್ಯೂಡಿಫೈ ಎಂದೂ ಟೈಪ್ ಮಾಡಿದರೆ ಅದು ಹಲವಾರು ನ್ಯೂಡಿಫೈ ಫೋಟೋಗಳನ್ನು ಸೃಷ್ಟಿಸುವ ಆ್ಯಪ್‌ಗಳನ್ನು ತೆರದುಕೊಡುತ್ತದೆ. ಇವು ತುಂಬಾ ಅಪಾಯಕಾರಿಯಾಗಿದ್ದು ಇಂದಿನ ದಿನಗಳಲ್ಲಿ ಮಹಿಳೆಯರ ಚಾರಿತ್ರ್ಯಯ ಹರಣಕ್ಕೆ ಬಳಸಿಕೊಳ್ಳಲಾಗುತ್ತಿದೆ. ಸಾಮಾಜಿಕ ತಾಣಗಳನ್ನು ಬಳಸುವ ಮಹಿಳೆಯರು ಎಚ್ಚರಿಕೆ ವಹಿಸುವುದು ಅನಿವಾರ್ಯವಾಗಿದೆ. ಸಾಮಾಜಿಕ ಜಾಲತಾಣಗಳ ಪ್ರೊಫೈಲ್‌ನಲ್ಲಿ ಮಹಿಳೆಯರು ತಮ್ಮ ಫೋಟೋಗಳನ್ನು ಅಪ್ ಲೋಡ್ ಮಾಡದೆ ಇರುವುದು ಸೂಕ್ತ ಮತ್ತು ಸರ್ಕಾರ ಇಂತಹ ಲಿಂಕ್‌ಗಳನ್ನು ಫೈರ್ ವಾಲ್‌ಗಳ ಮೂಲಕ ಶಾಶ್ವತವಾಗಿ ನಿರ್ಬಂಧಿಸಬೇಕು ಹಾಗೂ ಯಾರೆ ಇಂತಹ ಕೃತ್ಯಗಳಲ್ಲಿ ಭಾಗವಹಿಸಿದರೆ ಅಂತಹವರಿಗೆ ಉಗ್ರ ಶಿಕ್ಷೆಯಾಗಬೇಕೆಂದು ಎಲ್ಲಾ ಮಹಿಳೆಯರ ಪರವಾಗಿ ಅಗ್ರಹಿಸೋಣ.

–ರಾಸುಮಭಟ್, ಸಂಶೋಧನಾ ವಿದ್ಯಾರ್ಥಿ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

ತಿರಸ್ಕಾರಕ್ಕೆ ಕಾರಣವೇನು...?

ಮಾನ್ಯರೆ,

ಹಾಮಾನಾ ಮತ್ತು ಅಂಕಣ ಬರಹ ಎಂಬ ಪತ್ರ ಮೈಸೂರು ಮಿತ್ರ ದಿ 10.12.23ರಲ್ಲಿ ಸಿಪಿಕೆಯವರು ಹಾಮಾನಾರವರಿಗೆ ಲಭಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಲ್ಲಿ ತಮ್ಮ"ಪಾತ್ರ"ದ ಬಗೆಗೆ ಹೇಳಿಕೊಂಡಿದ್ದಾರೆ. ರಾಜ್ಯ ಮಟ್ಟದ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಹಾಮಾನಾರ ಅಂಕಣ ಬರಹ ಗಳನ್ನು ನಾನೂ ಕೂಡ ಓದಿದ್ದೇನೆ. ಹರಿತ ಮಾತಿಗೆ ಖ್ಯಾತಿಯಾಗಿದ್ದ ಚಂಪಾ ಅವರು ಹಿಂದೊಮ್ಮೆ ಜ್ಞಾನ ಪೀಠ ಪ್ರಶಸ್ತಿಯ ಕುರಿತು" ಕೆಲವು ಅವರೇ ಕೊಟ್ಟದ್ದು (ಜ್ಞಾನ ಪೀಠ ಪ್ರಶಸ್ತಿ ಆಯ್ಕೆ ಸಮಿತಿ) ಕೆಲವು ಇವರೇ ಕೇಳಿ ಪಡೆದದ್ದು." ಎಂದು ಹೇಳುತ್ತಿದ್ದರು. ಅಂದ ಹಾಗೆ ಹಾಮಾನಾರವರ ಕೋರಿಕೆಯ ಮೇರೆಗೆ ಅವರಿಗೇ ಪ್ರಶಸ್ತಿ ಬಂದರೂ ಆಯ್ಕೆ ಮಾಡಿದ (ಸಿಪಿಕೆ)ವರನ್ನೇ ತಿರಸ್ಕಾರ ಮನೋಭಾವದಿಂದ ನೋಡಲು ಇಬ್ಬರ ನಡುವೆ ಏನು ವೈಮನಸ್ಸಿತ್ತು.

ಅಂದ ಹಾಗೆ ಪ್ರಶಸ್ತಿಗೆ ಲಾಬಿ ಮಾಡುವುದು ಹೊಸತೇನಲ್ಲ ಹಾಗೂ ಪ್ರಶಸ್ತಿ, ಪುರಸ್ಕಾರ ಕ್ಕೆ ಲಾಬಿ ಮಾಡುವುದಕ್ಕೆ ಪ್ರಸಿದ್ಧರೂ ಹೊರತಲ್ಲ ಎನ್ನುವುದು ಇದರಿಂದ ತಿಳಿಯುತ್ತದೆ. ಈಗ ಪ್ರಶಸ್ತಿ, ಪದವಿ, ಡಾಕ್ಟರೇಟ್‌ಗಳನ್ನು ಕೊಡಿಸಲು ಹಲವು ಸಂಸ್ಥೆಗಳೇ ಹುಟ್ಟಿಕೊಂಡಿವೆ.ಆದರೆ ಪ್ರಶಸ್ತಿಗಳ ಮೌಲ್ಯವೇ ಈಗ ವಿಮರ್ಶೆಯಲ್ಲಿದೆ!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.


ವೆಂಕಟರಮಣ ದೇವಸ್ಥಾನದ ವೃತ್ತಕ್ಕೆ ಡಾಂಬರೀಕರಣ ಬೇಕು

ಮಾನ್ಯರೆ,

ಮೈಸೂರು ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಶ್ರೀ ವೆಂಕಟರಮಣ ದೇವಾಲಯದ ಬಳಿಯ ವಿ.ವಿ.ಪುರಂ ಪೊಲೀಸ್ ಠಾಣೆಯ ಎದುರಿನ ವೃತ್ತವು ಹೊಸದಾಗಿ ಡಾಂಬರೀಕರಣಗೊಂಡು ಚೆನ್ನಾಗಿತ್ತು. ಆದರೆ ನಗರಪಾಲಿಕೆ ಅಧಿಕಾರಿಗಳು ಪೈಪ್ ಲೈನ್ ಅಳವಡಿಕೆಗಾಗಿ ಅಗೆದು ಜಲ್ಲಿಯಿಂದ ಮುಚ್ಚಿದ್ದಾರೆ ಇದರಿಂದಾಗಿ ಈ ಭಾಗದಲ್ಲಿ ಚಲಿಸುವಾಗ ದ್ವಿಚಕ್ರವಾಹನ ಸವಾರರು ಸರ್ಕಸ್ ಮಾಡುವಂತಾಗಿದೆ. ವಯಸ್ಸಾದವರಿಗೆ ಬೆನ್ನು ನೋವು ಫ್ರೀಯಾಗಿದೆ. ಈ ಮಾರ್ಗದಲ್ಲಿ ಕೆಆರ್‌ಎಸ್‌ಗೆ ಹೋಗುವ ಪ್ರವಾಸಿಗರು ಸೇರಿದಂತೆ ಸಾವಿರಾರು ವಾಹನಗಳ ನಿತ್ಯ ಸಂಚಾರವಿದೆ ನಗರಪಾಲಿಕೆ ಆಯುಕ್ತರು ಕೂಡಲೆ ಈ ವೃತ್ತಕ್ಕೆ ಡಾಂಬರೀಕರಣ ಮಾಡಿಸಿ ಐದು ಮಾರ್ಗಗಳು ಕೂಡುವ ಈ ವೃತ್ತದ ಅಂದ ಹೆಚ್ಚಿಸಲಿ.

–ಪಡುವಾರಹಳ್ಳಿ ಎಂ ರಾಮಕೃಷ್ಣ ವಕೀಲರು

ಜ್ಞಾನವಂತಿ ಲೀಲಾವತಿ ಲೀನಾವಾದರು...



ಮಾನ್ಯರೆ,

ಜೀವಂತ ಕಥೆಯಾಗಿ ತಾಯಿಯರಿಗೆ ಮಾದರಿಯಾದವರು, ಅಮ್ಮನಿಗೆ ಮಗ, ಮಗನಿಗೆ ಅಮ್ಮನೇ ಉಸಿರಿಗೆ ಉಸಿರಾಗಿ, ಸೇವೆಯಲಿ ಶ್ರವಣಕುಮಾರನ ಮೀರಿಸಿದ ಪುತ್ರ ವಿನೋದ, ಕಲೆಯೇ ಜೀವವಾದರೂ ಮಣ್ಣಿಗೂ ಜೀವತೇದವರಿವರು, ಜ್ಞಾನವಂತಿ ಚಿರನಿದ್ರೆಗೆ ಜಾರಿದಳು ಸೋಲದೇವನಹಳ್ಳಿಯಲಿ ಅಮ್ಮಾ.. ಅಮ್ಮಾ.. ನಿನ್ನಾ ಪ್ರೇಮಕೇ, ನಿನ್ನಾ ತ್ಯಾಗಕೇ ಸರಿಸಾಟಿ ಯಾರೂ ಇಲ್ಲಾ. ನಿನಗಿಂತ ದೇವರಿಲ್ಲವೆಂದು ಡ್ಯಾನ್ಸ್‌ಗೇ ಬ್ರಾಂಡ್ ಆಗಿ ಕರುನಾಡ ಮೆಚ್ಚಿನ ಮಗನಾದನು, ವಿಧಿ!, ಲೀಲಾವತಿ ಲೀನವಾದರು ಮುದ್ದಿನ ಮಗನನ್ನು ಬಿಟ್ಟು, ಇಲ್ಲಾ.. ಇಲ್ಲಾ... ಎಲ್ಲಿಯೂ ಹೋಗಿಲ್ಲ ಇದ್ದಾರೆ ಇಲ್ಲೇ, ನಮ್ಮೀ ಚಂದನವನದ ಚೆಲುವೆ ತಾನೇ ಬೆಳೆಸಿದ ತೋಟದಲಿ ಮಗ ಮೆಚ್ಚಿದ ತಾಯಿದೇವತೆಯಾಗಿ, ನಾಗಕನ್ನಿಕೆ ತಾನೇ ನೆಟ್ಟು ಪೋಷಿಸಿದ ಮರಗಿಡಗಳಲಿ, ಅಭಿಮಾನಿಗಳ ಹೃದಯದಲಿ!.–ಮಿರ್ಲೆ ಚಂದ್ರಶೇಖರ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಹೊಟ್ಟೆಯ ಹಸಿವ ನೀಗಿಸಬಹುದು... ಕಣ್ಣಿನ ಹಸಿವ ನೀಗಿಸಲಾಗದು...!

'ಹಸಿವು' ಎಂದೊಡನೆ ಅನೇಕರಿಗೆ ಹೊಟ್ಟೆ ಹಸಿವು ಎಂಬ ಅರ್ಥವೇ ಬರುತ್ತದೆ. ಆದರೆ ಜಗತ್ತಿನಲ್ಲಿ ಅನೇಕ ರೀತಿಯ ಹಸಿವುಗಳು ಇವೆ. ಜ್ಞಾನದ ಹಸಿವು, ಪ್ರಕೃತಿಯನ್ನು ಆಸ್ವಾಧಿಸುವ ಹಸಿವು, ಮಣ್ಣಿನ ಹಸಿವು, ಸಂಪತ್ತಿನ ಹಸಿವು, ಸಂಗೀತದ ಹಸಿವು, ಕಲೆಯ ಹಸಿವು.. ಹೀಗೆ ಅನೇಕ ಹಸಿವುಗಳಿವೆ. ಅವೆಲ್ಲವುಗಳಿಗಿಂತ ದೊಡ್ಡ ಹಸಿವು ಕಣ್ಣಿನ ಹಸಿವು. ಈ ಹಸಿವು ತಣಿಯದ ಹಸಿವು. ಉದರದ ಹಸಿವನ್ನು ಹೊಟ್ಟೆ ತುಂಬ ಊಟ–ತಿಂಡಿ ಮಾಡಿ ತಣಿಸಬಹುದು. ಕೆಲವು ಗಂಟೆಗಳ ಕಾಲವಾದರೂ ಅದರಿಂದ ಸಮಾಧಾನವಾಗಿರಬಹುದು. ಆದರೆ ಕಣ್ಣಿನ ಆಸೆ ಅಂತಹುದಲ್ಲ. ಅದು ನೋಡ ನೋಡುತ್ತಲೇ ಹಸಿವನ್ನು ವೃದ್ಧಿಸುವಂತಹದು. ಅದರಿಂದ ಸದಾ ಅಸಮಾಧಾನ, ಅತೃಪ್ತಿ, ಅಶಾಂತಿ ಪ್ರಾಪ್ತಿಯಾಗುತ್ತದೆಯೇ ಹೊರತು ನೆಮ್ಮದಿಯಂತೂ ಸಿಗುವುದೇ ಇಲ್ಲ.

ಉದಾಹರಣೆಗೆ ಯಾವುದಾದರೂ ಸಮಾರಂಭಕ್ಕೆ ಹೊರಟಾಗ ಆಕರ್ಷಕ ಧಿರಿಸು–ಒಡವೆಗಳನ್ನು ಧರಿಸಿ ಹೊರಡುವುದು ಸಹಜ. ಅಲ್ಲಿಗೆ ಹೋಗಿ ಬಂದ ನಂತರ ಊಟ–ತಿಂಡಿ ಮಾಡಿದ ಕಾರಣಕ್ಕೆ ಹೊಟ್ಟೆ ಹಸಿವು ಇರುವುದಿಲ್ಲ, ಆದರೆ ಕಣ್ಣಿನ ಹಸಿವು ಹೆಚ್ಚಾಗಿರುತ್ತದೆ. ಅಲ್ಲಿ ಬಂದಂತಹ ಜನಗಳ ಧಿರಿಸುಗಳು, ಒಡವೆ, ಕಾರುಬಾರು ಎಲ್ಲವನ್ನೂ ಕಣ್ಣಿನಲ್ಲಿ ನೋಡಿ ಹೊಟ್ಟೆ ತುಂಬಿದ್ದರೂ ಹೊಟ್ಟೆಯಲ್ಲಿ ಕಿಚ್ಚು ಹೆಚ್ಚಾಗಿ ಮಾನಸಿಕ ನೆಮ್ಮದಿ ಹಾಳಾಗುವುದಂತೂ ಸತ್ಯ. 'ಅವರ ಬದುಕು ಅವರಿಗೆ, ನಮ್ಮ ಬದುಕು ನಮಗೆ' ಎಂದು ಕೊಂಡವರಿಗೆ ಯಾವುದೇ ವ್ಯತ್ಯಾಸವಾಗದು. ಹೊಟ್ಟೆ ತುಂಬಿದ ಕಾರಣಕ್ಕೆ ಕಣ್ತುಂಬ ನಿದ್ರೆ ಮಾಡುತ್ತಾರೆ. ಆದರೆ ಹೊಟ್ಟೆ ಕಿಚ್ಚಿನವರು ಮಾತ್ರ ನಿದ್ರೆ ಕೆಡಿಸಿಕೊಳ್ಳುವ ಮೂಲಕ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಾರೆ.

ಇದು ನಿಸರ್ಗ ಪ್ರಿಯರಿಗೆ, ಕವಿಗಳಿಗೆ, ತತ್ವಜ್ಞಾನಿಗಳಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಅವರ ಬದುಕಿನ ಉದ್ದೇಶಗಳೇ ಬೇರೆ ಇರುತ್ತವೆ. ಅವರು ಪ್ರಕೃತಿಯಲ್ಲಿ ಕಂಡ ಸೊಬಗನ್ನು ಕಣ್ತುಂಬಿಕೊಂಡು ಆನಂದವನ್ನು ಅನುಭವಿಸುತ್ತಾರೆ. ಆದರೆ ವ್ಯವಹಾರಿಕವಾಗಿ ಇರುವವರಿಗೆ ಪ್ರಕೃತಿಯಲ್ಲಿ ಸೊಬಗನ್ನು ಅನುಭವಿಸುವ ಮನೋಭಾವ ಇರದು. ಎಲ್ಲವನ್ನು ಅವರು ಹಣಕಾಸಿನ ಅಂದಾಜಿನಲ್ಲಿಯೇ ಲೆಕ್ಕ ಹಾಕಿ ಇರುವ ನೆಮ್ಮದಿಯನ್ನು ಕಳೆದುಕೊಳ್ಳು ತ್ತಾರೆ. ಗುಲಾಬಿ ಗಿಡವೊಂದರಲ್ಲಿ ಹತ್ತಾರು ಹೂಗಳಿದ್ದರೆ ಕವಿಯೊಬ್ಬ ಅದರ ಸೊಬಗನ್ನು, ಅದರ ಬಣ್ಣ ಆಕಾರವನ್ನು ವೀಕ್ಷಿಸುತ್ತಾ, ಅದರ ಸುಗಂಧವನ್ನು ಸವಿಯುತ್ತಾ ಆನಂದ ಸಾಗರದಲ್ಲಿ ತೇಲಾಡುತ್ತಿರುತ್ತಾನೆ. ಆದರೆ ಅದೇ ಗಿಡವನ್ನು ನೋಡುವ ವ್ಯಾಪಾರಿಗೆ ತಕ್ಷಣ ಜಾಗೃತವಾಗುವುದು ವ್ಯಾಪಾರಿ ಮನೋಭಾವ. ಅವರು ಹೂವುಗಳನ್ನು ಕಿತ್ತು ಒಂಟಿಯಾಗಿ ಮಾರಿದರೆ ಹೇಗೆ? ಅವುಗಳನ್ನು ಹೂಹಾರ ಮಾಡಿ ಮಾರಿದರೆ ಎಷ್ಟು ಲಾಭ ಸಿಗುತ್ತದೆ ಎಂದು ಆಲೋಚಿಸುತ್ತಾನೆ.

ಮನುಷ್ಯನ ದೇಹವು ಅನೇಕ ವೈಶಿಷ್ಟತೆಗಳನ್ನು ಹೊಂದಿದೆ. ಅದರಲ್ಲೂ ಪಂಚೇಂದ್ರಿಯಗಳಂತೂ ಮನುಷ್ಯನ ವ್ಯಕ್ತಿತ್ವ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಅದರಲ್ಲೂ ಕಣ್ಣಿನ ಪಾತ್ರ ಮಾತ್ರ ಅನನ್ಯ ಹಾಗೂ ಅಮೂಲ್ಯ. ಕಣ್ಣು ಮನುಷ್ಯನಿಗೆ ವರವೂ ಹೌದು, ಶಾಪವೂ ಹೌದು. ಏಕೆಂದರೆ ಅನೇಕ ದುಷ್ಕೃತ್ಯಗಳು ಕಣ್ಣಿನಿಂದ ಪ್ರಚೋದನೆಗೊಂಡಿರುವುದರಿಂದಲೇ ಆಗಿರುತ್ತವೆ. ಹಾಗೆಯೇ



ಅನೇಕ ಸಾಧನೆಗಳಿಗೂ ಕಣ್ಣೇ ಮೂಲ. ಒಂದು ವಿಶಿಷ್ಟವಾದ ಉದಾಹರಣೆ ಇಲ್ಲಿ ಉಲ್ಲೇಖನೀಯ. ಸುಮಾರು 3 ದಶಕಗಳ ಹಿಂದಿನ ಸಂಗತಿ. ಪದವಿ ಕಾಲೇಜೊಂದರಲ್ಲಿ ಅಂತಿಮ ವರ್ಷದ ಬಿ.ಎ. ತರಗತಿಯಲ್ಲಿ ಸುಮಾರು 90 ವಿದ್ಯಾರ್ಥಿಗಳಿದ್ದರು. ಅವರಲ್ಲಿ ಸುಮಾರು 10 ಮಹಿಳೆಯರು, ಉಳಿದ 80 ಮಂದಿ ಪುರುಷರು. ಆ ತರಗತಿಯಲ್ಲಿ ವೀಣಾ ಎಂಬ ಅಂಧ ವಿದ್ಯಾರ್ಥಿನಿ ಯೊಬ್ಬರಿದ್ದರು. ಆಕೆ ತರಗತಿಯಲ್ಲಿ ಪಾಠ ಕೇಳುತ್ತಿದ್ದಷ್ಟೇ ಅವರ ಗ್ರಹಿಕೆ. ತಮ್ಮ ಕಿರಿಯ ಮಿತ್ರರಿಂದ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆಗಳಿಂದ ಪ್ರಶ್ನೆಗಳನ್ನು ಆಲಿಸಿ, ಇವರು ಉತ್ತರ ಹೇಳುತ್ತಿದ್ದುದನ್ನು ಅವರು ಬರೆಯುತ್ತಿದ್ದರು. ಆಶ್ಚರ್ಯವೆಂದರೆ ಅವರು ಇಡೀ ತರಗತಿಗೆ ಅತಿಹೆಚ್ಚು ಅಂಕಗಳನ್ನು ಗಳಿಸಿ ಮೊದಲಿಗರಾಗಿ ಸಾಧನೆ ಮಾಡಿದರು. ಇದನ್ನು ಕಂಡು ಎಲ್ಲರಿಗೂ ಆಶ್ಚರ್ಯ. ಉತ್ತಮ ಕಣ್ಣಿನ ದೃಷ್ಟಿ ಹೊಂದಿರುವ ಉಳಿದ 89 ಜನ ವಿದ್ಯಾರ್ಥಿಗಳಿಗಿಂತ ಈಕೆ ಸಾಧನೆ ಮಾಡಿದ್ದು ಎಲ್ಲರ ಹುಬ್ಬೇರಿಸುವಂತೆ ಮಾಡಿತ್ತು. ಕಣ್ಣಿದ್ದು ಸಾಧಿಸಲು ಆಗದ್ದನ್ನು ಕಣ್ಣಿನ ದೃಷ್ಟಿ ಇಲ್ಲದವರು ಸಾಧಿಸಿದ್ದು ಅಪೂರ್ವ ಎನಿಸಿತು. ಇದೇ ರೀತಿ ಕಣ್ಣಿನ ದೃಷ್ಟಿ ಇಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಅನೇಕರಿದ್ದಾರೆ. ಅವರು ದೈಹಿಕವಾಗಿ ಕುರುಡರಾದರೂ, ಅದನ್ನು ಅವರು ಸವಾಲಾಗಿ ಸ್ವೀಕರಿಸಿ ಬದುಕಿನ ದೃಷ್ಟಿಯನ್ನು ಸ್ಪಷ್ಟವಾಗಿ ಕಂಡು ಜೀವನದಲ್ಲಿ ಯಶಸ್ಸನ್ನು ಕಂಡಿರುತ್ತಾರೆ. ಆ ಕಾರಣಕ್ಕೆ ಇರಬಹುದು ವಚನಕಾರರಾದ ಬಸವೇಶ್ವರರು ಸಾಧಕರಿಗೆ ಒಂದೊಳ್ಳೆ ನೀತಿಯನ್ನು ಈ ವಚನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. 'ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ, ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ, ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ, ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷ್ಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವ' ಸಾಧಕನಾದವನು ಕೆಲವೊಮ್ಮೆ ಹೆಳವನೂ, ಕುರುಡನೂ, ಕಿವುಡನೂ ಆಗಬೇಕಾಗುತ್ತದೆ. ತನಗೆ ಸಂಬಂಧಪಡದ ವಿಷಯಗಳಿಗೆ ಕಣ್ಣಾಗಿ, ಕಿವಿಯಾಗಿ ಹೋದರೆ ಬದುಕಿನ ಪಥವೇ ಬದಲಾಗಿಬಿಡುವ ಸಾಧ್ಯತೆ ಇರುತ್ತದೆ.

ದೇಹಕ್ಕೆ ಅಗತ್ಯವಾದ ಆಹಾರವನ್ನು ಆಯ್ಕೆ ಮಾಡಬೇಕಾದುದು ಜಾಣತನ. ಹೊಟ್ಟೆ ತುಂಬ ದೇಹಕ್ಕೆ ಬೇಕಾದಷ್ಟು ತಿಂದಿದ್ದರೂ, ಕಣ್ಣಿನಲ್ಲಿ ಕಂಡದಕ್ಕೆ ಪ್ರಚೋಧನೆಗೊಂಡು ಅನಗತ್ಯವಾಗಿ ಹೆಚ್ಚು ಆಹಾರ ಸೇವಿಸಿ ಅನಾರೋಗ್ಯವನ್ನು ಆಹ್ವಾನಿಸುವವರು ಅನೇಕ. ಹಾಗೆಯೇ ಮತ್ತೊಂದು ವೈರುದ್ಯವೆಂದರೆ ಮನುಷ್ಯ ಹೊಟ್ಟೆ ಹಸಿವನ್ನು ಬೇಕಾದರೆ ಸಹಿಸಿಯಾನು, ಆದರೆ ಕಣ್ಣಿನ ಹಸಿವನ್ನು ಸಹಿಸಲಾರ. ಕಣ್ಣು ನಿತ್ಯವೂ ಹೊಸ ಆಹಾರ

> ಮನುಷ್ಯ ಮಿತಿ ಅರಿಯದೆ ಅತಿಯಾಸೆಗೆ ಬಿದ್ದು ಕೊಳ್ಳುಬಾಕ ಸಂಸ್ಕೃತಿಯಿಂದ ಅಮಿತವಾದ ದುಃಖವನ್ನು ಅನುಭವಿಸುವವರಿದ್ದಾನೆ. ಒಮ್ಮೆ ಗ್ರೀಕ್ ತತ್ವಜ್ಞಾನಿಯಾದ ಸಾಕ್ರಟೀಸ್ ಅವರನ್ನು ವ್ಯಾಪಾರಿಯೊಬ್ಬರು ತನ್ನ ಗೃಹೋಪಯೋಗ ವಸ್ತುಗಳ ದೊಡ್ಡ ಮಳಿಗೆಗೆ ಆಹ್ವಾನಿಸಿರುತ್ತಾರೆ. ಅವರು ಎಲ್ಲಾ ವಸ್ತುಗಳನ್ನು ಆಶ್ಚರ್ಯದಿಂದ ಮುಟ್ಟಿ, ಅದರ ಉಪಯೋಗ ತಿಳಿಯುತ್ತಿರುತ್ತಾರೆ. ಕೊನೆಗೆ ಒಂದೇ ಒಂದು ವಸ್ತುವನ್ನು ಸಹ ಅವರು ತಮಗಾಗಿ ತೆಗೆದುಕೊಳ್ಳುವುದಿಲ್ಲ. ವ್ಯಾಪಾರಿಗೆ ಆಶ್ಚರ್ಯವಾಗುತ್ತದೆ. ವ್ಯಾಪಾರಿಯು 'ಏಕೆ ನಿಮಗೆ ಇವುಗಳ ಅಗತ್ಯವಿಲ್ಲವೇ? ಎಂದು ಪ್ರಶ್ನಿಸಿದಾಗ, ಸಾಕ್ರಟೀಸ್ 'ಪ್ರಪಂಚದಲ್ಲಿ ಈ ರೀತಿಯ ವಸ್ತುಗಳು ಇವೆ ಎಂಬ ಅರಿವು ನನಗೆ ಇರಲಿಲ್ಲ. ಆದರೆ ಇವುಗಳು ಇಲ್ಲದೆಯೂ ನಾನು ಸಂತೋಷವಾಗಿ ಬದುಕುತ್ತಿದ್ದೇನೆ ಎಂಬ ಅರಿವು ಇಂದು ಉಂಟಾಯಿತು' ಎಂದು ಹೇಳಿದಾಗ ಅವನಿಗೆ ಆಶ್ಚರ್ಯವಾಗುತ್ತದೆ. ಕೊಳ್ಳುಬಾಕ ಸಂಸ್ಕೃತಿ ಉಳ್ಳವರಿಗೆ ಇದೊಂದು ದೊಡ್ಡ ಪಾಠ. ಕಡಿಮೆ ಲಗೇಜು ಇದ್ದಷ್ಟು ಪ್ರಯಾಣ ಸುಖಕರವಾಗಿರುತ್ತದೆ. ಅಂತೆಯೇ ಕಡಿಮೆ ಸಂಪತ್ತಿನಿಂದ ಬದುಕು ಹಗುರವಾಗಿರುತ್ತದೆ, ಅಲ್ಲವೇ?

ವನ್ನು ಹುಡುಕುತ್ತಲೇ ಇರುತ್ತದೆ, ಅದರಿಂದ ಅಸಮಾಧಾನ ಹೊಂದುವಂತೆ ಮಾಡುತ್ತಲೇ ಇರುತ್ತದೆ.

ಕಣ್ಣಿನ ಹಸಿವಿಗಿಂತ ಕೆಟ್ಟದಾದ ಹಸಿವು ಬೇರೊಂದಿಲ್ಲ. ಇದು ಬದುಕಿನಲ್ಲಿ ಸಕಾರಾತ್ಮಕವಾಗಿ ಚಿಂತಿಸುವ ಬದಲು ನಕಾರಾತ್ಮಕವಾಗಿ ಚಿಂತಿಸಲು ಒರೆ ಹಚ್ಚುತ್ತದೆ. ಅನೇಕರಿಗೆ ಕಣ್ಣಿನಲ್ಲಿ ಮೂಡುವ ಅಸಹಜ ಆಸೆಯು ಅನೇಕ ಅನರ್ಥ ಕೃತ್ಯಗಳನ್ನು ಮಾಡಿಸುತ್ತದೆ. ನೋಡಿದ ವಸ್ತು, ವಿಷಯಗಳಿಂದ ಪ್ರಚೋದನೆಗೊಂಡು ತಮಗೆ ಬೇಕಿಲ್ಲದಿದ್ದರೂ ಅದನ್ನು ಗಿಟ್ಟಿಸಿಕೊಳ್ಳಬೇಕೆಂಬ ದುರಾಸೆ ಹುಟ್ಟಿ ನಂತರ ಪಶ್ಚಾತ್ತಾಪಪಡುವಂತಾಗುತ್ತದೆ. ಅತ್ಯಾಚಾರ, ಅನಾಚಾರಗಳಂತಹ ಕೃತ್ಯಗಳಿಗೆ ಅವರು ಕಣ್ಣಿನಿಂದ ನೋಡಿದ ಸಂಗತಿಗಳೇ ದೊಡ್ಡ ಪ್ರಚೋದನೆ ಮಾಡಿರುತ್ತವೆ. ಕೆಲವರು ಪ್ರಚೋದನೆಯನ್ನು ಹತೋಟಿಗೆ ತಂದುಕೊಂಡರೆ ಮತ್ತೆ ಕೆಲವರು ಸ್ವಯಂ ನಿಯಂತ್ರಿಸಿಕೊಳ್ಳಲಾಗದೆ ಅಪರಾಧ ಕೃತ್ಯಗಳನ್ನು ಎಸಗಿಬಿಡುತ್ತಾರೆ. ಅವರ ಕಣ್ಣಿನ ಹಸಿವೇ ಅವರ ಭವಿಷ್ಯಕ್ಕೆ ಮುಳುವಾಗಿಬಿಡುತ್ತದೆ. ಒಮ್ಮೊಮ್ಮೆ ಕಣ್ಣಿಲ್ಲದವರು ಎಡುವುದಿಲ್ಲ, ಕಣ್ಣಿದ್ದವರೇ ಎಡವುದನ್ನು ಕಾಣಬಹುದು!

ಪ್ರತಿಯೊಬ್ಬರ ಬದುಕಿನಲ್ಲೂ ಬಣ್ಣ ಬಹುಮುಖ್ಯವಾದ ಪಾತ್ರ ವಹಿಸುತ್ತದೆ. ಬಣ್ಣದ ಅರಿವು ಉಂಟಾಗುವುದು ಕಣ್ಣಿನಿಂದ ಮಾತ್ರ ಸಾಧ್ಯ. ಚಿಟ್ಟೆಯೊಂದು ಬೆಳಕಿನ ಬಣ್ಣಕ್ಕೆ ಮರುಳಾಗಿ ಅದರ ಕಾವಿನ ಅರಿವಿಲ್ಲದೆ ಬೆಂಕಿ ಸನಿಹಕ್ಕೆ ಬಂದು ಆಹುತಿಯಾಗುವಂತೆ ಅನೇಕರು ಬಣ್ಣದ ಮೋಹಕ್ಕೆ ಒಳಗಾಗಿ ಬಹುವಿಧವಾದ ನೋವನ್ನು ಅನುಭವಿಸುತ್ತಾರೆ. ಕಣ್ಣು ಭಗವಂತ ಕೊಟ್ಟ ಒಂದು ದೊಡ್ಡದಾದವರ. ಅದನ್ನು ಸರಿಯಾಗಿ ಬಳಸಿಕೊಳ್ಳಬೇಕಾದುದು ಎಲ್ಲರ ಹೊಣೆ ಹಾಗೂ ಜವಾಬ್ದಾರಿಯಾಗಿರುತ್ತದೆ. ಕಣ್ಣು ಒಳ್ಳೆಯದರ ಕಡೆ ಹೊರಳುವುದಕ್ಕಿಂತ ಕೆಟ್ಟದರ ಕಡೆ ಹೊರಳುವುದೇ ಜಾಸ್ತಿ. ಉದಾಹರಣೆಗೆ ಪ್ರಸ್ತುತ ಇರುವ ಸಾವಿರಾರು ಟಿ.ವಿ. ಚಾನೆಲ್‌ಗಳ ಪೈಕಿ ನೂರಾರು ಚಾನೆಲ್‌ಗಳು ನಮ್ಮ ದೈಹಿಕ ಹಾಗು ಮಾನಸಿಕ ಆರೋಗ್ಯವನ್ನು ಕಾಪಾಡುವ ಕಾರ್ಯಕ್ರಮಗಳನ್ನು ಬಿತ್ತರಗೊಳಿಸಿದರೂ, ವೀಕ್ಷಕರು ಅವುಗಳಿಗೆ ಕಣ್ಣಾಗದೇ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವಾಗುವ ಪ್ರಚೋದನಕಾರಿ ವಿಷಯಗಳ ಕುರಿತು ಹೆಚ್ಚು ಆಕರ್ಷಿತರಾಗುತ್ತಾರೆ. ಅವುಗಳ ಕುರಿತೇ ಹೆಚ್ಚು ಚರ್ಚಿಸುತ್ತಾರೆ. ತಮ್ಮ ಮಾನಸಿಕ ಆರೋಗ್ಯವನ್ನು ಹಾಳುಮಾಡಿಕೊಳ್ಳುವುದರ ಜೊತೆಗೆ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುತ್ತಿದ್ದಾರೆ.

ಮನುಷ್ಯ ಮಿತಿ ಅರಿಯದೆ ಅತಿಯಾಸೆಗೆ ಬಿದ್ದು ಕೊಳ್ಳುಬಾಕ ಸಂಸ್ಕೃತಿಯಿಂದ ಅಮಿತವಾದ ದುಃಖವನ್ನು ಅನುಭವಿಸುವವರಿದ್ದಾನೆ. ಒಮ್ಮೆ ಗ್ರೀಕ್ ತತ್ವಜ್ಞಾನಿಯಾದ ಸಾಕ್ರಟೀಸ್ ಅವರನ್ನು ವ್ಯಾಪಾರಿಯೊಬ್ಬರು ತನ್ನ ಗೃಹೋಪಯೋಗಿ ವಸ್ತುಗಳ ದೊಡ್ಡ ಮಳಿಗೆಗೆ ಆಹ್ವಾನಿಸಿರುತ್ತಾರೆ. ಅವರು ಎಲ್ಲಾ ವಸ್ತುಗಳನ್ನು ಆಶ್ಚರ್ಯದಿಂದ ಮುಟ್ಟಿ, ಅದರ ಉಪಯೋಗ ತಿಳಿಯುತ್ತಿರುತ್ತಾರೆ. ಕೊನೆಗೆ ಒಂದೇ ಒಂದು ವಸ್ತುವನ್ನು ಸಹ ಅವರು ತಮಗಾಗಿ ತೆಗೆದುಕೊಳ್ಳುವುದಿಲ್ಲ. ವ್ಯಾಪಾರಿಗೆ ಆಶ್ಚರ್ಯವಾಗುತ್ತದೆ. ವ್ಯಾಪಾರಿಯು 'ಏಕೆ ನಿಮಗೆ ಇವುಗಳ ಅಗತ್ಯವಿಲ್ಲವೇ? ಎಂದು ಪ್ರಶ್ನಿಸಿದಾಗ, ಸಾಕ್ರಟೀಸ್ 'ಪ್ರಪಂಚದಲ್ಲಿ ಈ ರೀತಿಯ ವಸ್ತುಗಳು ಇವೆ ಎಂಬ ಅರಿವು ನನಗೆ ಇರಲಿಲ್ಲ. ಆದರೆ ಇವುಗಳು ಇಲ್ಲದೆಯೂ ನಾನು ಸಂತೋಷವಾಗಿ ಬದುಕುತ್ತಿದ್ದೇನೆ ಎಂಬ ಅರಿವು ಇಂದು ಉಂಟಾಯಿತು' ಎಂದು ಹೇಳಿದಾಗ ಅವನಿಗೆ ಆಶ್ಚರ್ಯವಾಗುತ್ತದೆ. ಕೊಳ್ಳುಬಾಕ ಸಂಸ್ಕೃತಿ ಉಳ್ಳವರಿಗೆ ಇದೊಂದು ದೊಡ್ಡ ಪಾಠ. ಕಡಿಮೆ ಲಗೇಜು ಇದ್ದಷ್ಟು ಪ್ರಯಾಣ ಸುಖಕರವಾಗಿರುತ್ತದೆ. ಅಂತೆಯೇ ಕಡಿಮೆ ಸಂಪತ್ತಿನಿಂದ ಬದುಕು ಹಗುರವಾಗಿರುತ್ತದೆ.

ಕಂಡದ್ದನ್ನು ಪಡೆದುಕೊಳ್ಳುವ ಶಕ್ತಿ ಬೇರೆಲ್ಲಾ ಪ್ರಾಣಿಪಕ್ಷಿಗಳಿಗಿಂತ ಮನುಷ್ಯನಿಗಿದೆ. ಆದರೆ ತನಗೆ ಯಾವುದು ಬೇಕು? ತನ್ನ ಯೋಗ್ಯತೆ ಏನು? ತನಗೆ ಶಕ್ತಿ ಇದೆಯೇ? ತನಗೆ ಅಗತ್ಯವಿದೆಯೇ? ತನ್ನದಲ್ಲದ್ದು ತನಗೆ ಬೇಕೆ? ಎಂಬ ವಿವೇಕ ಮನುಷ್ಯನಿಗೆ ಇರಬೇಕು. ಕಣ್ಣಿನ ಹಸಿವನ್ನು ನಿಯಂತ್ರಿಸಲು ಮಿದುಳಿಗೆ ಸಾಧ್ಯವಿರುತ್ತದೆ. ಮನುಷ್ಯ ಯಾವುದೋ ಒಂದು ಕ್ಷಣದ ಪ್ರಚೋದನೆಗೆ ಒಳಗಾಗಿ ತಪ್ಪು/ಅಪರಾಧ ಮಾಡಬಾರದು. ಒಂದು ನಿಮಿಷದ ದುಷ್ಕೃತ್ಯ/ಸುಖದಿಂದ ಇಡೀ ಜೀವಮಾನ ನರಳುವಂತೆ ಶಿಕ್ಷೆ ಪ್ರಾಪ್ತಿಯಾಗಿಬಿಡಬಹುದು. ಕಂಡದ್ದೆಲ್ಲವನ್ನು ತನ್ನದಾಗಿಸಿಕೊಳ್ಳಲು ಬಯಸಿದರೆ ಅದಕ್ಕೆ ಮಿತಿ ಇರುವುದಿಲ್ಲ. ಮಿತಿ ಇಲ್ಲದ ಬದುಕು ಅತಿಯಾದ ಯಾತನೆ ನೀಡುತ್ತದೆ. ಆದ್ದರಿಂದ ಮನುಷ್ಯ ತನ್ನ ಕುರಿತು ಅರಿವು ಹೊಂದುವುದು ಮುಖ್ಯ. ಮನುಷ್ಯ ಮನಸ್ಸು ಮಾಡಿದರೆ ಅಸಾಧ್ಯವಾದುದು ಯಾವುದೂ ಇಲ್ಲ. ಏನಂತೀರಿ?

ಪದ ತಾಂಬೂಲ :

ದೇಹಕ್ಕೆ ಬೇಕಾದ್ದು ತಿಂದರೆ ಆರೋಗ್ಯ ಹತ್ತಿರ
ಕಣ್ಣಿಗೆ ಬೇಕಾದ್ದು ತಿಂದರೆ ಆರೋಗ್ಯ ದೂರ

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ 10ನೇ ಪುಣ್ಯಸ್ಮರಣೆ

ಮೈಸೂರು ಅರಮನೆ ಮಂಡಳಿಯಲ್ಲಿ ಪುಷ್ಪ ನಮನ ಸಲ್ಲಿಕೆ, ಮನುವನದಲ್ಲಿ ಸಮಾಧಿಗೆ ಪೂಜೆ ಸಲ್ಲಿಸಿ, ಶ್ರದ್ಧಾಂಜಲಿ

ಮೈಸೂರು,ಡಿ.10(ಪಿಎಂ)– ಮೈಸೂರು ಅರಮನೆ ಮಂಡಳಿ ಕಚೇರಿಯಲ್ಲಿ ಭಾನುವಾರ ಮೈಸೂರು ರಾಜವಂಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ 10ನೇ ವರ್ಷದ ಪುಣ್ಯಸ್ಮರಣೆಯ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಶ್ರದ್ಧಾಂಜಲಿ ಅರ್ಪಿಸಲಾಯಿತು.

ಇದೇ ವೇಳೆ ಮಾತನಾಡಿದ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಆದರ್ಶಗಳು ಸಮಾಜಕ್ಕೆ ಅಗತ್ಯವಿದ್ದು, ಅವರನ್ನು ಸ್ಮರಿಸುವ ಮೂಲಕ ಅವರ ಆದರ್ಶಗಳನ್ನು ಸಮಾಜಕ್ಕೆ ತಲುಪಿಸುವ ಅಗತ್ಯವಿದೆ ಎಂದು ಹೇಳಿದರು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸಮಾಜಮುಖಿ ಚಿಂತನೆ ಹೊಂದಿದ್ದರು. ಅವರ ದಾರಿಯಲ್ಲೇ ಸಮಾಜ ಸೇವೆಯಲ್ಲಿ ಅವರ ಮಡದಿಯವರಾದ ಪ್ರಮೋದಾದೇವಿ ಒಡೆಯರ್ ತೊಡಗಿದ್ದಾರೆ. ಪ್ರಮೋದಾದೇವಿ ಒಡೆಯರ್




ಅವರಿಗೆ ತಾಯಿ ಚಾಮುಂಡೇಶ್ವರಿ ಆಯುರಾರೋಗ್ಯ ನೀಡಲಿ ಎಂದು ಪ್ರಾರ್ಥಿಸಿದರು. ಮಂಡಳಿಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಸೇರಿದಂತೆ ಮತ್ತಿತರರು ಹಾಜರಿದ್ದರು.

ಮನುವನದಲ್ಲಿ ಸಮಾಧಿಗೆ ಪೂಜೆ: ಮೈಸೂರಿನ ಮನುವನದಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಸಮಾಧಿಗೆ ಪೂಜೆ ಸಲ್ಲಿಸಲಾಯಿತು. ಅಲ್ಲದೆ, ಪುಷ್ಪ ನಮನ ಸಲ್ಲಿಸಿ ಶ್ರದ್ಧಾಂಜಲಿ ಸಮರ್ಪಿಸಲಾಯಿತು. ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮುಖಂಡರಾದ ರಾಘವೇಂದ್ರ, ಶಿವೇಂದ್ರ, ಯಮುನಾ, ಬಿ.ವಿ.ಮಂಜುನಾಥ್, ಪರಮೇಶ್, ಬಿ.ಎಸ್.ರವೀಶ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಶಾಲಾ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವ ಉತ್ತೇಜಿಸಲು ಹೊಸ ನೀತಿ

ಸಚಿವ ಭೋಸರಾಜು ಸೂಚನೆ



ಬೆಂಗಳೂರು: ವೈಜ್ಞಾನಿಕ ಮನೋಭಾವವನ್ನ ಪ್ರೋತ್ಸಾಹಿಸಲು ಹಾಗೂ 'ಎಲ್ಲರಿಗೂ ವಿಜ್ಞಾನ' ಎಂಬ ಉದ್ದೇಶವನ್ನು ಸಾಧಿಸುವ ನಿಟ್ಟಿನಲ್ಲಿ ಹೊಸ ನೀತಿಯನ್ನು ರೂಪಿಸುವಂತೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಚಂದ್ರಯಾನ–3ರ ಯಶಸ್ಸಿನ ನಂತರ ಮಕ್ಕಳಲ್ಲಿ ಬಾಹ್ಯಾ ಕಾಶದ ಬಗ್ಗೆ ಆಸಕ್ತಿ ಹೆಚ್ಚಾಗಿದೆ. ಇದಕ್ಕೆ ಪ್ರೋತ್ಸಾಹದ ಅಗತ್ಯವಿದೆ. ಈ ನಿಟ್ಟಿನಲ್ಲಿ ರಾಜ್ಯದ ಶಾಲಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ವಿಜ್ಞಾನದ ಕುತೂಹಲವನ್ನು ಉತ್ತೇಜಿಸುವ ಸಲುವಾಗಿ ದೂರದರ್ಶಕಗಳನ್ನು ಒದಗಿಸುವುದು ಸೂಕ್ತವಾಗಿದೆ. ಈ ನಿಟ್ಟಿನಲ್ಲಿ ಪ್ರತ್ಯೇಕ ನೀತಿ ರೂಪಿಸುವಂತೆ ಸೂಚನೆ ನೀಡಿರುವುದಾಗಿ ಸಚಿವರು ಹೇಳಿಕೆಯಲ್ಲಿ ಮಾಹಿತಿ ನೀಡಿದ್ದಾರೆ.

ವಕೀಲರ ರಕ್ಷಣೆ ಸಂಬಂಧ ಮಸೂದೆ ಸಿದ್ಧ

ಮೈಸೂರು, ಡಿ.10– ವಕೀಲರ ರಕ್ಷಣೆಗೆ ಸಂಬಂಧಿಸಿದಂತೆ ಮಸೂದೆ ಸಿದ್ಧಪಡಿಸಲಾಗಿದೆ ಎಂದು ಪ್ರವಾಸೋದ್ಯಮ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.



ಮೈಸೂರು ಜಿಲ್ಲಾ ಪಂಚಾಯ್ತಿ ಬಳಿ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, ನಮ್ಮ ಸರ್ಕಾರ ವಕೀಲರ ರಕ್ಷಣೆಗೆ ಬದ್ಧವಾಗಿದೆ. ಈ ಸಂಬಂಧ ಈಗಾಗಲೇ ಮಸೂದೆ ಸಿದ್ಧಪಡಿಸಲಾಗಿದ್ದು, ಈ ಬಗ್ಗೆ ವಾದ ಪ್ರತಿವಾದಗಳು ನಡೆಯುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮಾತನಾಡಿ ವಕೀಲರ ಸಂರಕ್ಷಣೆ ಕಾಯಿದೆ ಜಾರಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಲೋಕಸಭೆ ಚುನಾವಣೆ ಬಳಿಕ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವರು, ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದವರು.

ಈಗ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಇಂತಹ ಹೇಳಿಕೆ ನೀಡಿ ಸರ್ಕಾರವನ್ನು ಅಲುಗಾಡಿಸುವ ವಿಫಲ ಪ್ರಯತ್ನ ನಡೆಸಿದ್ದಾರೆ. ಆದರೆ, ನಾವು ಗಟ್ಟಿಯಾಗಿದ್ದೇವೆ. ಅವರು ಹೇಳಿದಂತೆ ಏನು ಆಗುವುದಿಲ್ಲ. ಸರ್ಕಾರ ಸುಭದ್ರವಾಗಿದೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಾನವ ಹಕ್ಕು ಉಲ್ಲಂಘನೆ ವಿರುದ್ಧ ಮೌನ ಪ್ರತಿಭಟನೆ




ಮೈಸೂರು,ಡಿ.10(ಎಸ್‌ಪಿಎನ್)– ವಿಶ್ವಾದ್ಯಂತ ಮಾನವ ಹಕ್ಕು ಉಲ್ಲಂಘನೆಯನ್ನು ವಿರೋಧಿಸಿ, ಜನಸಂಗ್ರಾಮ್ ಪರಿಷತ್‌ನ ವಿಕಲಚೇತನರ ವಿಭಾಗ, ಪ್ರಗತಿಪರ ಸಂಘಟನೆಗಳ ಮುಖಂಡರ ನೇತೃತ್ವದಲ್ಲಿ ಗಾಂಧಿ ಚೌಕದ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಭಾನುವಾರ ಸಂಜೆ ಮೊಂಬತ್ತಿ ಹಚ್ಚಿ ಮೌನ ಪ್ರತಿಭಟನೆ ನಡೆಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಜನ ಸಂಗ್ರಾಮ ಪರಿಷತ್ ಅಧ್ಯಕ್ಷ ನಗರ್ಲೆ ವಿಜಯ್‌ಕುಮಾರ್, ವಿಶ್ವಾದ್ಯಂತ ಮಹಿಳೆಯರು, ಮಕ್ಕಳು, ವಿಕಲಚೇತನ ಮೇಲೆ ನಾನಾ ರೀತಿ ದೌರ್ಜನ್ಯಗಳು ನಡೆಯುತ್ತಿದ್ದು, ಇದನ್ನು ತಡೆಗಟ್ಟಲು ಪ್ರಜ್ಞಾವಂತ ಸಮಾಜ ವಿಫಲವಾಗಿದೆ. ಅಲ್ಲದೆ, ನೊಂದ ಜೀವಿಗಳಿಗೆ ಪುನರ್ ಬದುಕು ರೂಪಿಸುವಲ್ಲಿ ವಿಶ್ವ ಸಮುದಾಯ ವಿಫಲವಾಗುತ್ತಿದೆ. ಮಾನವ ಹಕ್ಕುಗಳ ಉಳಿವಿಗಾಗಿ ಡಿ.10ರಂದು ವಿಶ್ವಾದ್ಯಂತ ಆಚರಿಸಲಾಗುತ್ತಿದೆ ಎಂದರು. ಈ ವೇಳೆ ರೈತ ಮುಖಂಡ ಹೊಸಕೋಟೆ ಬಸವರಾಜು, ಪ್ರಗತಿಪರ ಮುಖಂಡರಾದ ಪುರಿಗಾಲಿ ಮುರುಡೇಶ್ ಮೂರ್ತಿ, ಮಹೇಶ್ ನಂಜನಗೂಡು, ಜಯರಾಮ್ ಚಂದ್ರವಾಡಿ, ಕಪ್ಪಸೋಗೆ ಮಲ್ಲೇಶ್, ವಿಕಲಚೇತನರಾದ ಬಸವರಾಜ್, ವಿನೋದ್, ಗಿರೀಶ್, ಜನ ಸಂಗ್ರಾಮ್ ಪರಿಷತ್ ರಾಜ್ಯ ಕಾರ್ಯದರ್ಶಿ ಪಾಲನಹಳ್ಳಿ ಪ್ರಸನ್ನ, ಜನಸಂಗ್ರಾಮ ಪರಿಷತ್ (ವಿಕಲಚೇತನರ ವಿಭಾಗ) ಅಧ್ಯಕ್ಷ ಕಂದೇಗಾಲ ಗೋಪಾಲಕೃಷ್ಣ, ಡಾ.ಗಿರೀಶ್, ಮಹದೇವಸ್ವಾಮಿ, ಶಕುಂತಲ, ಚಂದ್ರ, ಚೌಡಯ್ಯ, ಮಲ್ಲೇಶ್ ಮತ್ತಿತರರಿದ್ದರು.

ಮದುವೆಗೆ ಹೋದವರು ಮಸಣ ಸೇರಿದ್ರು; ಭೀಕರ ಅಪಘಾತದಲ್ಲಿ 8 ಮಂದಿ ಸಜೀವ ದಹನ

ಬರೇಲಿ: ನಿನ್ನೆ ತಡರಾತ್ರಿ ಭೀಕರ ರಸ್ತೆ ಅಪಘಾತ ಸಂಭವಿಸಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ 8 ಮಂದಿ ಸಜೀವ ದಹನವಾದ ಆಘಾತಕಾರಿ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ. ಉತ್ತರ ಪ್ರದೇಶದ ಬರೇಲಿಯಲ್ಲಿ ಶನಿವಾರ ರಾತ್ರಿ 11 ಗಂಟೆಗೆ ಬರೇಲಿ–ನೈನಿತಾಲ್ ಹೆದ್ದಾರಿಯಲ್ಲಿ ಮಾರುತಿ ಎರ್ಟಿಗಾ ಕಾರಿನ ಟೈರ್ ಒಡೆದು ಇನ್ನೊಂದು ಬದಿಯ ಡಿವೈಡರ್ ದಾಟಿ



ಡಂಪರ್‌ಗೆ ಡಿಕ್ಕಿ ಹೊಡೆದಿದ್ದು, ಪರಿಣಾಮ ಕಾರು ಲಾಕ್ ಆಗಿ ಕಾರ್‌ನೊಳಗಿದ್ದ ಒಂದು ಮಗು ಸೇರಿದಂತೆ 7 ಮಂದಿ ಸುಟ್ಟು ಕರಕಲಾಗಿದ್ದಾರೆ. ಘಟನೆಯ ಬಗ್ಗೆ ಮಾಹಿತಿ ಪಡೆದ ಬರೇಲಿ ಐಜಿ ಡಾ. ರಾಕೇಶ್ ಕುಮಾರ್ ಸೇರಿದಂತೆ ಹಲವು ಪೊಲೀಸ್ ಠಾಣೆಗಳ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿದರು. ಅಗ್ನಿಶಾಮಕ ದಳದ ಸಿಬ್ಬಂದಿ ಸಾಕಷ್ಟು ಹರಸಾಹಸ ಮಾಡಿ ಬೆಂಕಿಯನ್ನು ಹತೋಟಿಗೆ ತಂದಿದ್ದಾರೆ. ಸದ್ಯ ಎಲ್ಲಾ ಶವಗಳನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಪೊಲೀಸರು ಮೂರು ಮೃತ ದೇಹಗಳನ್ನು ಗುರುತಿಸಿದ್ದಾರೆ ಎಂದು ತಿಳಿದುಬಂದಿದೆ.

ಒಂದನೇ ಪುಟದಿಂದ

ಬಿಜೆಪಿ ಸೇರಲು ತಯಾರಿ

ಸಂಕಷ್ಟದಿಂದ ದೂರ ಮಾಡಲು ಏನು ಮಾಡುತ್ತೀರಾ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸುದ್ದಿಗಾರರನ್ನು ಪ್ರಶ್ನಿಸಿದರು. ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಅನುಕೂಲವಾಗಿದೆ ಎಂಬುವುದು ಸತ್ಯ. ಆದರೆ ಈ ಯೋಜನೆಯಿಂದ ಸಾರಿಗೆ ಇಲಾಖೆ ಸಾಲದ ಸುಳಿಗೆ ಸಿಲುಕಿದೆ. ಇಂತಹ ಪರಿಸ್ಥಿತಿಯಲ್ಲಿ 5 ಸಾವಿರ ಹೊಸ ಬಸ್ ಖರೀದಿ ಮಾಡಲಾಗುವುದು ಎಂದು ಹೇಳಿದ್ದಾರೆ. ಇದಕ್ಕೆ ಹಣ ಎಲ್ಲಿಂದ ತರುತ್ತಾರೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಈ ಸರ್ಕಾರದಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಹೇಳಿದ್ದಾರೆ. ಇದರಿಂದ ಈ ಸರ್ಕಾರದ ಯೋಗ್ಯತೆ ಏನು ಎಂದು ಲೋಕಸಭಾ ಚುನಾವಣೆ ನಂತರ ತಿಳಿಯಲಿದೆ ಎಂದು ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಇಂದು ಸುಪ್ರೀಂ ಮಹತ್ವದ ತೀರ್ಪು

ಸಂವಿಧಾನ ಪೀಠಕ್ಕೆ ಕಳುಹಿಸಿತ್ತು. 2019ರ ಅಕ್ಟೋಬರ್ 1 ರಂದು ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್, ನ್ಯಾಯಮೂರ್ತಿ ಆರ್. ಸುಭಾಷ್ ರೆಡ್ಡಿ, ನ್ಯಾಯಮೂರ್ತಿ ಬಿಆರ್ ಗವಾಯಿ ಮತ್ತು ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನೊಳಗೊಂಡ ಐದು ನ್ಯಾಯಾಧೀಶರ ಸಂವಿಧಾನ ಪೀಠವು ನವೆಂಬರ್ 14, 2019 ರಿಂದ ಪ್ರಕರಣದ ವಿಚಾರಣೆ ನಡೆಸಲು ನಿರ್ಧರಿಸಿತ್ತು. ಈ ಅರ್ಜಿಗಳನ್ನು ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಮುಂದೆ ಇಡಲಾಗಿತ್ತು. ಮಾರ್ಚ್ 2, 2020 ರಂದು, ಈ ಅರ್ಜಿಗಳನ್ನು ದೊಡ್ಡ ಪೀಠಕ್ಕೆ ಹಸ್ತಾಂತರಿಸಲು ಪೀಠವು ನಿರಾಕರಿಸಿತು. ಇದರ ನಂತರ, ಜುಲೈ 11, 2023ರಂದು, ಸಿಜೆಐ ಡಿವೈ ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠವು ಆಗಸ್ಟ್ 2, 2023 ರಿಂದ ಪ್ರಕರಣವನ್ನು ಆಲಿಸಲು ನಿರ್ಧರಿಸಿತು. ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು 16 ದಿನಗಳ ಚರ್ಚೆಯಲ್ಲಿ 370 ನೇ ವಿಧಿಯನ್ನು ರದ್ದುಗೊಳಿಸುವ ಐತಿಹಾಸಿಕ, ಸಾಂವಿಧಾನಿಕ ಮತ್ತು ರಾಜಕೀಯ ಅಂಶಗಳನ್ನು ಪರಿಗಣಿಸಿತು.

ನಿವೃತ್ತ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆ

ಆನೆ ದಾಳಿಗೆ ಇಬ್ಬರು ಬಲಿಯಾದರು. ಹೀಗಾಗಿ ಆನೆ ಸೆರೆ ಹಿಡಿಯಲು ಸಾಕಷ್ಟು ಒತ್ತಡ ಇತ್ತು. ಈ ಸಂಬಂಧ ನವೆಂಬರ್ 24 ರಿಂದ ಕಾರ್ಯಾಚರಣೆ ಆರಂಭ ಆಗಿತ್ತು. ಕಾರ್ಯಾಚರಣೆಯಲ್ಲಿ ನಮ್ಮ ಅಧಿಕಾರಿಗಳು ಎಲ್ಲ ಮಾನದಂಡ ಅನುಸರಣೆ ಮಾಡಿದ್ದಾರೆ. ಪುಂಡಾನೆ ಏಕಾಏಕಿ ದಾಳಿ ಮಾಡಿದೆ. ಹೀಗಾಗಿ ಅವಘಡ ಸಂಭವಿಸಿದೆ ಎಂದು ಮಾಹಿತಿ ನೀಡಿದರು. ಆದರು ಕೆಲವರು ಘಟನೆ ಬಗ್ಗೆ ಸಾಕಷ್ಟು ಶಂಕೆ ವ್ಯಕ್ತಪಡಿಸಿದ್ದಾರೆ. ಪ್ರಶಾಂತ್‌ಗೆ ಅರವಳಿಕೆ ಮದ್ದು ಬಿದ್ದಿದೆ, ಅರ್ಜುನನಿಗೆ ಗುಂಡು ತಗುಲಿದೆ ಎಂಬ ಆರೋಪವಿದೆ. ಬಾಹ್ಯ ಮರಣೋತ್ತರ ಪರೀಕ್ಷೆ ಆಗಿದೆ. ಈ ವರದಿಯಲ್ಲಿ ಗುಂಡು ತಗುಲಿದ ಬಗ್ಗೆ ಮಾಹಿತಿ ಇಲ್ಲ. ಹೀಗಾಗಿ ಅರಣ್ಯ ಇಲಾಖೆಯ ನಿವೃತ್ತ ಹಿರಿಯ ಅಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು, ನಿಷ್ಪಕ್ಷಪಾತವಾಗಿ ತನಿಖೆ ನಡೆಯಲಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಮೈಸೂರು ಮಿತ್ರ ಸೋಮವಾರ 11 ಡಿಸೆಂಬರ್ 2023

ಮೋದಿ ಕಾರ್ಯಕ್ರಮ ತಿಳಿಸಲು ಭಾರತ ಸಂಕಲ್ಪ ಯಾತ್ರೆ

ಕೇಂದ್ರ ಸಚಿವ ಕ್ರಿಶನ್ ಪಾಲ್ ಗುರ್ಜರ್



ಮಂಡ್ಯ, ಡಿ.10– ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯಕ್ರಮಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ದೇಶಾದ್ಯಂತ ಭಾರತ ಸಂಕಲ್ಪ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರ ಸಚಿವ ಕ್ರಿಶನ್ ಪಾಲ್ ಗುರ್ಜರ್ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯಾತ್ರೆಯಲ್ಲಿ ಮೋದಿ ಸರ್ಕಾರ ಬಡವರ ಕಲ್ಯಾಣಕ್ಕಾಗಿ ಕೈಗೊಂಡಿರುವ ಕಾರ್ಯಕ್ರಮ ಹಾಗೂ ಯೋಜನೆಗಳ ಬಗ್ಗೆ ಜನರಿಗೆ ತಿಳಿಸಲಾಗುತ್ತಿದೆ ಎಂದರು.

ಇನ್ನು 2ನೇ ಉದ್ದೇಶ ಪ್ರಧಾನಿ ಮೋದಿ ಗ್ಯಾರಂಟಿ ಗಳನ್ನು ನೀಡುವ ವಿಚಾರವಾಗಿದ್ದು, ಆ ಗ್ಯಾರಂಟಿ ಬಗೆಗೂ ಜನರಿಗೆ ಮನವರಿಕೆ ಮಾಡಿಕೊಡಲಾಗುತ್ತದೆ. ಬಡವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ನರೇಂದ್ರ ಮೋದಿ ನೀಡುತ್ತಿರುವ ಗ್ಯಾರಂಟಿಗಳು ಪ್ರಮುಖ ಪಾತ್ರ ವಹಿಸಲಿವೆ ಎಂದರು.

ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಜಲಜೀವನ್, ಕಿಸಾನ್ ಸಮ್ಮಾನ್ ಯೋಜನೆ, ಪ್ರತಿ ಮನೆಗಳಿಗೆ ಶೌಚಾಲಯ ಸೇರಿದಂತೆ ಹಲವು ಜನಪರ ಯೋಜನೆ ಗಳನ್ನು ಜಾರಿಗೊಳಿಸಲಾಗುತ್ತಿದೆ. ಇದಕ್ಕಾಗಿ ಸಾವಿರಾರು ಕೋಟಿ ರೂ. ಅನುದಾನ ನೀಡಲಾಗಿದೆ. ಇದೆಲ್ಲವೂ ಮೋದಿ ಸರ್ಕಾರದ ಗ್ಯಾರಂಟಿಗಳಾಗಿವೆ ಎಂದರು.

ಭಾರತದ ಜಿಡಿಪಿ ದರದಲ್ಲೂ ಏರಿಕೆಯಾಗುತ್ತಿದ್ದು, ಭಾರತ ಆರ್ಥಿಕ ವಿಕಸನದತ್ತ ಸಾಗುತ್ತಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಪ್ರಾಬಲ್ಯ ಕಡಿಮೆಯಾಗುತ್ತಿಲ್ಲ. ಕರ್ನಾಟಕದಲ್ಲಿ ಹೆಚ್ಚು ಬಿಜೆಪಿ ಸಂಸದರಿದ್ದಾರೆ. ದಕ್ಷಿಣದ ಎಲ್ಲಾ ರಾಜ್ಯಗಳಲ್ಲೂ ಬಿಜೆಪಿ ಶೇಕಡವಾರು ಹೆಚ್ಚು ಮತಗಳನ್ನು ಪಡೆದುಕೊಳ್ಳುತ್ತಿದ್ದು, ದಿನೇ ದಿನೇ ಪ್ರಾಬಲ್ಯಗೊಳ್ಳುತ್ತಿದೆ ಎಂದು ವಿರೋಧ ಪಕ್ಷದ ನಾಯಕರ ಆರೋಪಕ್ಕೆ ತಿರುಗೇಟು ನೀಡಿದರು.

ದಕ್ಷಿಣ ಭಾರತದಲ್ಲಿ ಬಿಜೆಪಿ ನಿಧಾನವಾಗಿ ನೆಲೆ ವಿಸ್ತರಿಸಿಕೊಳ್ಳುತ್ತಿದೆ. ಕರ್ನಾಟಕ ಒಂದರಲ್ಲೇ 25 ಮಂದಿ ಸಂಸದರಿದ್ದಾರೆ. ತೆಲಂಗಾಣದಲ್ಲಿ 8 ಶಾಸಕರು ಗೆದ್ದಿದ್ದಾರೆ. ಕರ್ನಾಟಕ ಬಿಜೆಪಿಯಲ್ಲಿ ಯಾವುದೇ ಭಿನ್ನ ಮತ ಬಣ ರಾಜಕೀಯಕ್ಕೆ ಅವಕಾಶ ಇಲ್ಲ. ನಮ್ಮದು ಒಂದೇ ಪಕ್ಷವಾಗಿದ್ದು, ನಮಗೆ ಮೋದಿ ಒಬ್ಬರೇ ನಾಯಕರಾಗಿದ್ದಾರೆ. ಅವರ ಮಾತಿನಂತೆ ಎಲ್ಲರೂ ನಡೆದುಕೊಳ್ಳುತ್ತಾರೆ ಎಂದರು. ಕರ್ನಾಟಕದಲ್ಲಿ ಕಾಂಗ್ರೆಸ್ ಮಣಿಸಲು ಹಾಗೂ ದೇಶದಲ್ಲಿ ಎನ್‌ಡಿಎ ಪರಿವಾರ ವಿಸ್ತರಣೆಗೆ ಜೆಡಿಎಸ್ ಜೊತೆ ಬಿಜೆಪಿ ಮೈತ್ರಿ ಆಗಿದೆ. ಪ್ರತಿ ರಾಜ್ಯದಲ್ಲೂ ಅಲ್ಲಿನ ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ನಾಯಕರು ತೀರ್ಮಾನ ಕೈಗೊಳ್ಳುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಬಿಜೆಪಿ ಮುಖಂಡರಾದ ಸಿದ್ದರಾಮಯ್ಯ, ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಅಶೋಕ್ ಜಯರಾಂ ಇದ್ದರು.

ಕೇಂದ್ರ ಸಚಿವರ ನೇತೃತ್ವದಲ್ಲಿ ಬಿಜೆಪಿ ಪ್ರತಿಭಟನೆ

ಮಂಡ್ಯ: ಜಾರ್ಖಂಡ್ ಸಂಸದ ಧೀರಜ್ ಸಾಹು ಮನೆಯಲ್ಲಿ ಕೋಟಿ ಕೋಟಿ ಪತ್ತೆ ಪ್ರಕರಣ ವಿರೋಧಿಸಿ ನಗರದ ಜಯ ಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಕೇಂದ್ರ ಸಚಿವ ಕ್ರಿಶನ್ ಪಾಲ್ ಗುರ್ಜಲ್ ನೇತೃತ್ವದಲ್ಲಿ ಬಿಜೆಪಿ ಪ್ರತಿಭಟನೆ ನಡೆಸಿತು. ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಕಾಂಗ್ರೆಸ್ ಆಡಳಿತ ವಿರುವ ರಾಜ್ಯ ಸರ್ಕಾರಗಳು ಭ್ರಷ್ಟಾಚಾರದಿಂದ ಕೂಡಿದೆ. ನಿರಂತರವಾಗಿ ಸಾರ್ವಜನಿಕರ ಹಣ ಲೂಟಿ ಮಾಡುತ್ತಿದೆ. ಸಂಸದನ ಮನೆಯಲ್ಲಿ ಕೋಟಿ ಕೋಟಿ ಹಣ ಸಿಕ್ಕಿರುವುದು ಕಾಂಗ್ರೆಸ್‌ನ ಭ್ರಷ್ಟಾಚಾರ ತೋರಿಸುತ್ತಿದೆ. ಕಾಂಗ್ರೆಸ್ ಭ್ರಷ್ಟಾಚಾರಕ್ಕೆ ಮುಂದೆ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾರಕ್ಕೇರಿದ 'ಹಳ್ಳಿಕಾರ್' ಗೋವು ತಳಿ ಚರ್ಚಾಗೋಷ್ಠಿ

ವರ್ತೂರ್‌ಗೆ ಜೈಕಾರ ಕೂಗಿದ್ದನ್ನು ವಿರೋಧಿಸಿದ ಮತ್ತೊಂದು ಬಣ

ಮಂಡ್ಯ, ಡಿ.10– ನಿಜವಾದ ಹಳ್ಳಿಕಾರ್ ರೈತರಿಗೆ ಮೋಸ ಮಾಡಿ, ಬಾಡಿಗೆ ಎತ್ತು ತೆಗೆದುಕೊಂಡು ಜಾತ್ರೆಯಲ್ಲಿ ಭಾಗವಹಿಸಿದವನಿಗೆ ಬಿರುದು ಕೊಟ್ಟರು ಎಂಬ ವರ್ತೂರ್ ಸಂತೋಷ್ ವಿರುದ್ಧ ಹಾಗೂ ಪರ ಚರ್ಚೆ ತಾರಕ್ಕೇರಿತು.

ಹೌದು, ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಜಿಲ್ಲೆಯ ಹಳ್ಳಿಕಾರ್ ತಳಿ ಸಂರಕ್ಷಕ ರೈತರಿಂದ ಭಾನುವಾರ ಆಯೋಜಿಸಿದ್ದ ಹಳ್ಳಿಕಾರ್ ಗೋವು ತಳಿಯ ರಾಜ್ಯಮಟ್ಟದ ಚರ್ಚಾಗೋಷ್ಠಿಯಲ್ಲಿ ಪರ–ವಿರೋಧದ ನಡುವಿನ ಚರ್ಚೆಯು ಎರಡು ಬಣಗಳ ನಡುವೆ ಮಾತಿನ ಚಕಮಕಿ ನಡೆಯುತ್ತಿದ್ದಂತೆ ಮಧ್ಯೆ ಪ್ರವೇಶಿಸಿದ ಪೊಲೀಸರಿಂದ ಶಾಂತವಾಯಿತು.

ಹಳ್ಳಿಕಾರ್ ಗೋವು ಸಾಗಾಣಿಕೆ ರೈತ ಜಯರಾಂ ಮಾತನಾಡಿ, ರಾಜ್ಯದಲ್ಲಿ ಅಮೃತ್ ಮಹಲ್ ಮತ್ತು ಹಳ್ಳಿಕಾರ್ ಎಂಬ 2 ದೇಶಿ ತಳಿಗಳಿದ್ದು, ಅವುಗಳನ್ನು ರಕ್ಷಣೆ ಮಾಡಬೇಕು. ಹಳ್ಳಿಕಾರ್ ತಳಿ ಕೇವಲ ಜಾತ್ರೆಗೆ ಸೀಮಿತವಾಗಬಾರದು. ವರ್ಷದ 365 ದಿನಗಳ ಕಾಲ ಮನೆಯಲ್ಲಿ ತಮ್ಮ ಶಕ್ತಿ ಆಧಾರದಲ್ಲಿ ಹಳ್ಳಿಕಾರ್ ಎತ್ತು ಸಾಕಬೇಕು. ಈ ಹಳ್ಳಿಕಾರ್ ಸಂರಕ್ಷಣೆಯಲ್ಲಿ ಒಬ್ಬರು ಹೆಸರು ಪಡೆಯೋದು ಬೇಡ? ಇದರಲ್ಲಿ ಎಲ್ಲಾ ಯುವಕರು ಗುಂಪುಗಾರಿಕೆ ಬಿಟ್ಟು ತಳಿ ಸಂಕರಕ್ಷಣೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ವರ್ತೂರ್ ಸಂತೋಷ್ ವಿರುದ್ಧ ಅಸಮಾಧಾನ: ಹಳ್ಳಿಕಾರ್ ತಳಿ ಸಂರಕ್ಷಕ ಪಟೇಲ್ ರವಿ ಮಾತನಾಡಿ, ಹಳ್ಳಿಕಾರ್ ತಳಿಗೆ ನೂರಾರು ವರ್ಷಗಳ ಇತಿಹಾಸವಿದೆ. ರಾಜ ಮಹಾರಾಜರು ತಳಿ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇತ್ತೀಚೆಗೆ ಹಳ್ಳಿಕಾರ್ ತಳಿ ನಶಿಸುತ್ತಿದೆ. ಆದರೆ ವರ್ತೂರ್ ಸಂತೋಷ್ ತಾನೊಬ್ಬನೇ ಹಳ್ಳಿಕಾರ್ ತಳಿ ಸಂರಕ್ಷಕ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ಅವರಿಗವರೇ ಹಳ್ಳಿಕಾರ್ ಒಡೆಯ ಎಂದು ಬಿರುದು ಪಡೆದಿರುವುದು ಸರಿಯಲ್ಲ. ಇದರಲ್ಲಿ ಹಳ್ಳಿಕಾರ್ ಗೋವು ಸಾಕಾಣಿಕೆ ಹಾಗೂ ಇಂತಹ ಗೋವುಗಳನ್ನು ದಾನ ನೀಡಿದ ಮಹನೀಯರ ಶ್ರಮವಿದೆ ಎಂಬುದನ್ನು ಅರ್ಥ ಮಾಡಿಕೊಂಡು ಎಲ್ಲರೂ ಒಗ್ಗಟ್ಟಾಗಿ ಹಳ್ಳಿಕಾರ್ ಗೋವು ತಳಿ ಸಂರಕ್ಷಣೆ ಮಾಡೋಣ ಎಂದು ಮನವಿ ಮಾಡಿದರು.

ಹಳ್ಳಿಕಾರ್ ತಳಿಗೆ ರೈತರ ಕೊಡುಗೆ: ಹಳ್ಳಿಕಾರ್ ರೈತ ಸುಧಾಕರ್ ಮಾತನಾಡಿ, ಹಳ್ಳಿಕಾರ್ ತಳಿ ಅಭಿವೃದ್ಧಿಗೆ ಹಿಂದಿನಿಂದಲೂ ರೈತರ ಕೊಡುಗೆ ಇದೆ. ರಾಜ ಮಹಾರಾಜರು ಹಳ್ಳಿಕಾರ್ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಆದರೆ ಇಂದು ಅದನ್ನು ಬ್ಯಾಟರಿ ಹಾಕಿ ಹುಡುಕುವ ಪರಿಸ್ಥಿತಿ ಬಂದಿದೆ. ಇದರಲ್ಲಿ ವಾದ–ವಿವಾದ ಮಾಡುವುದು ಸರಿಯಲ್ಲ. ಎಲ್ಲರೂ ರೈತರೇ ಒಂದಾಗಿ ಈ ನಶಿಸುವ ತಳಿ ಸಂರಕ್ಷಿಸೋಣ ಎಂದು ಸಲಹೆ ನೀಡಿದರು.

ವರ್ಷವಲ್ಲ ಎತ್ತು ಸಾಕಿದವನಿಗೆ ಒಂದು ಲೆಕ್ಕನಾ?: ರೈತ ನಂದೀಪ್‌ಗೌಡ ಮಾತನಾಡಿ, ವರ್ಷವೆಲ್ಲ ಹಳ್ಳಿಕಾರ್ ಎತ್ತನ್ನು ಸಾಕಿದವನಿಗೆ ಒಂದು ಲೆಕ್ಕ. ಬಾಡಿಗೆಗೆ ಎತ್ತು ತಗೊಂಡು ಹೋಗಿ ಜಾತ್ರೆ ಮಾಡಿದವನಿಗೂ ಒಂದೇ ಲೆಕ್ಕನಾ, ಇದು ಸರಿಯಲ್ಲ. ಹಳ್ಳಿಕಾರ್ ಸಾಕೋರಿಗೆ ಮೊದಲು ಬೆಲೆ ಕೊಡಿ, ಗೊಂದಲ ಮಾಡಿ ರೈತರ ನಡುವೆ ವೈಮನಸ್ಸು ತರುವುದು ಬೇಡ. ಯಾವುದೋ ಒಂದು ಯೂಟ್ಯೂಬ್ ಚಾನೆಲ್ ಹೆಸರು ಹೇಳಿಕೊಂಡು ನಾವುಗಳು ಕಿತ್ತಾಡೋದು ಬೇಡ, ರೈತರು ಒಗ್ಗಟ್ಟಾಗಿ ಇರೋಣ ಒಗ್ಗಟ್ಟಾಗಿಯೇ ಬಾಳೋಣ ಎಂದರು.

ಪರ ವಿರೋಧಕ್ಕೆ ಸಾಕ್ಷಿಯಾದ ವೇದಿಕೆ: ಚರ್ಚಾಗೋಷ್ಠಿಗೆ ಬಹಿರಂಗ ಆಹ್ವಾನ ನೀಡಿದ ನಂತರ, ಮೈಕ್ ಹಿಡಿದು ವರ್ತೂರ್ ಸಂತೋಷ್ ಪರ ಮೈಸೂರಿನ ಪ್ರತಾಪ್, ಚರ್ಚೆ ಆಯೋಜಕ ರವಿ ಪಟೇಲ್ ಅವರೇ ಸಂತೋಷ್ ಅವರನ್ನು ಹಳ್ಳಿಕಾರ್ ಸಂಘದ ಅಧ್ಯಕ್ಷರಾಗಿ ಮಾಡಿದ್ದೀರಾ? ಆಗ ಅಧ್ಯಕ್ಷ ಮಾಡಿ ಈಗ ವಿರೋಧ ಮಾಡುತ್ತಿದ್ದೀರಾ, ಮಂಡ್ಯಕ್ಕೆ ಸಂತೋಷ್ ಬಂದಾಗ ಮೊದಲು ರವಿ ಮನೆಗೆ ಹೋಗಿದ್ದರು. ಇದು ನೆನಪಿಲ್ಲವೇ, ಸಂತೋಷ್‌ರಿಂದಲೇ ಹಳ್ಳಿಕಾರ್ ತಳಿ ಹೆಚ್ಚೆಚ್ಚು ಪ್ರಚಾರ ಪಡೆಯಿತು. ಅಭಿಮಾನಿಗಳು, ಸ್ನೇಹಿತರು ಸೇರಿ ಹಳ್ಳಿಕಾರ್ ಒಡೆಯ ಎಂದು ಬಿರುದು ಕೊಟ್ಟಿದ್ದೇವೆ. ಸಂತೋಷ್‌ರಿಂದ ಖಸಾಯಿಖಾನೆಗೆ ಹೋಗುವ ದನಗಳು ಉಳಿದವು ಎಂದು ಸಮರ್ಥನೆ ಕೊಟ್ಟರು.

ವರ್ತೂರ್ ಸಂತೋಷ್‌ಗೆ ಹಳ್ಳಿಕಾರ್ ಒಡೆಯ ಬಿರುದನ್ನು ಸಮರ್ಥಿಸಿಕೊಂಡ ಹಳ್ಳಿಕಾರ್ ರೈತ ಬನ್ನೂರು ಕೃಷ್ಣಪ್ಪ, ಹಳ್ಳಿಕಾರ್ ಒಡೆಯ ಎಂಬುದನ್ನು ಯೂನಿವರ್ಸಿಟಿಲೋ, ಸರ್ಕಾರದಲ್ಲೋ ಬಿರುದು ಕೊಟ್ಟಿಲ್ಲ. ಮಂಡ್ಯದ ಗಂಡು ಎಂದು ಬಿರುದು ಕೊಟ್ಟಿದಾರಲ್ಲ ಅದು ಯಾರು ಕೊಟ್ಟರು? ಅದು ಅಪಪ್ರಚಾರ ಮಾಡಿದ ಹಾಗೇ ಅಲ್ವಾ? ಅದೇ ರೀತಿಯೇ ಹಳ್ಳಿಕಾರ್ ನಮ್ಮಿಷ್ಟದಂತೆ ಕೊಟ್ಟಿದ್ದೇವೆ ಎಂದು ಉತ್ತರಿಸಿದರು.

ಮೈಸೂರಿನ ಇಬ್ಬರು ಯುವಕರು ನೀರು ಪಾಲು

ಮಂಡ್ಯ, ಡಿ.10– ಕೆರೆಯಲ್ಲಿ ಈಜಲು ಹೋದ ಮೈಸೂರಿನ ಇಬ್ಬರು ಯುವಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಎಲೆಚಾಕನಹಳ್ಳಿ ಗ್ರಾಮದಲ್ಲಿ ನಡೆದಿದೆ. ಮೈಸೂರಿನ ಶಾಂತಿ ನಗರದ ನಿವಾಸಿ ಮಕ್ಬುಲ್ ಪಾಷಾ ಅವರ ಪುತ್ರ ಮುಬಾರಕ್ ಪಾಷಾ(30), ಮಂಡ್ಯದ ಬೀಡಿ ಕಾರ್ಮಿಕರ ಕಾಲೋನಿ ನಿವಾಸಿ ಶಬ್ಬೀರ್ ಅಹಮ್ಮದ್(26) ಮೃತಪಟ್ಟವರು. ಗಾರೆ ಕೆಲಸ ಮಾಡುತ್ತಿದ್ದ ಇವರಿಬ್ಬರು, ಎಲೆಚಾಕನಹಳ್ಳಿ ಗ್ರಾಮದಲ್ಲಿ ನಾರಾಯಣ ಸ್ವಾಮಿ ಎಂಬುವರ ಮನೆ ನಿರ್ಮಾಣಕ್ಕೆ ಗ್ರಾಮಕ್ಕೆ ಹೋಗಿದ್ದರು. ಭಾನುವಾರ ಕೆಲಸಕ್ಕೆ ಬಿಡುವು ಇದ್ದ ಹಿನ್ನೆಲೆಯಲ್ಲಿ ಈಜಲೆಂದು ಇಬ್ಬರೂ ಗ್ರಾಮ ಕೆರೆಗೆ ಹೋಗಿದ್ದ ವೇಳೆ ನೀರಿನಲ್ಲಿ ಮುಳುಗಿ ಕೊನೆಯುಸಿರೆಳೆದಿದ್ದಾರೆ. ಶವಗಳನ್ನು ಕೆರೆಯಿಂದ ಹೊರತೆಗೆದು ಮಂಡ್ಯ ಜಿಲ್ಲಾಸ್ಪತ್ರೆ ಶವಾಗಾರದಲ್ಲಿ ಇರಿಸಲಾಗಿದೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಿಲಿಂಡರ್ ಸೋರಿಕೆ: ಮನೆಯಲ್ಲಿದ್ದ ವಸ್ತುಗಳು ಬೆಂಕಿಗೆ ಆಹುತಿ

ಮಂಡ್ಯ, ಡಿ.10– ಸಿಲಿಂಡರ್ ಸೋರಿಕೆಯಾಗಿ ಮನೆಯಲ್ಲಿದ್ದ ವಸ್ತುಗಳು ಬೆಂಕಿಗೆ ಆಹುತಿಯಾಗಿರುವ ಘಟನೆ ತಾಲೂಕಿನ ತುಂಬಕೆರೆ ಗ್ರಾಮದಲ್ಲಿ ಜರುಗಿದೆ.

ಹನಕೆರೆ ಗ್ರಾಪಂ ಸದಸ್ಯೆ ರಾಣಿ ಎಂಬುವರ ಮನೆಯಲ್ಲಿ ಈ ಘಟನೆ ನಡೆದಿದೆ. ಶನಿವಾರ ಬೆಳಗ್ಗೆ 8.30ರಲ್ಲಿ ಅಡುಗೆ ಮಾಡಲು ಗ್ಯಾಸ್ ಸ್ಟೌವ್‌ಗೆ ಬೆಂಕಿ ಹೊತ್ತಿಸಿದಾಗ ಸಿಲಿಂಡರ್‌ನಲ್ಲಿ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡಿದೆ. ಇದರಿಂದ ಮನೆ ಮುಂದಿನ ಬಾಗಿಲು, ಸ್ಕೂಟರ್, ಸೈಕಲ್, ನೀರಿನ ಟ್ಯಾಂಕ್ ಹಾಗೂ ಬಟ್ಟೆಗಳು ಭಾಗಶಃ ಬೆಂಕಿಗೆ ಆಹುತಿಯಾಗಿವೆ. ಘಟನೆಯಲ್ಲಿ ಗ್ರಾಪಂ ಸದಸ್ಯೆ ರಾಣಿ ಹಾಗೂ ಅವರ ಮಕ್ಕಳಿಗೆ ಬೆಂಕಿ ತಾಪ ತಗುಲಿ ಸುಟ್ಟ ಗಾಯಗಳಾಗಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಗ್ರಾಮಸ್ಥರು ಹೊತ್ತಿ ಉರಿಯುತ್ತಿದ್ದ ಸಿಲಿಂಡರ್ ಅನ್ನು ಮನೆಯಿಂದ ಹೊರ ತಂದು ನೀರಿಗೆ ಹಾಕಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಘಟನೆಯಿಂದ ಒಂದು ಲಕ್ಷ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ರಸ್ತೆ ಅಪಘಾತ: ಯುವಕ ಸಾವು



ಮಂಡ್ಯ, ಡಿ.10– ನಗರದ ಸ್ವರ್ಣಸಂದ್ರ ಬಳಿಯ ಅಗ್ನಿಶಾಮಕ ಠಾಣೆ ಸಮೀಪ ಶನಿವಾರ ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಯುವಕನೋರ್ವ ಸಾವನ್ನಪ್ಪಿದ್ದಾನೆ. ಮದ್ದೂರು ತಾಲೂಕು ಗೆಜ್ಜಲಗೆರೆ ಗ್ರಾಮದ ನಿವಾಸಿ ಲೇ.ಅಪ್ಪಾಜಿಚಾರಿ ಅವರ ಪುತ್ರ ಜಿ.ಎ.ಸಿದ್ದರಾಜಚಾರಿ ಉರುಫ್ ರಾಜು(29) ಮೃತಪಟ್ಟವರು. ವೃತ್ತಿಯಲ್ಲಿ ಮರಗೆಲಸ ಮಾಡುತ್ತಿದ್ದ ಸಿದ್ದರಾಜಚಾರಿ, ಮಂಡ್ಯದಲ್ಲಿ ಕೆಲಸ ಮುಗಿಸಿ ಸ್ವಗ್ರಾಮಕ್ಕೆ ತೆರಳುವ ವೇಳೆ ರಾತ್ರಿ 9.45ರಲ್ಲಿ ಬೈಕ್ ಸ್ಕಿಡ್ ಆಗಿ ರಸ್ತೆ ವಿಭಜಕದಲ್ಲಿನ ಜಾಹೀರಾತು ಫಲಕಕ್ಕೆ ಡಿಕ್ಕಿಯಾಗಿದೆ. ಈ ವೇಳೆ ತಲೆಗೆ ತೀವ್ರ ಪೆಟ್ಟಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಸಿದ್ದರಾಜಚಾರಿ ಅವರನ್ನು ಸಾರ್ವಜನಿಕರು ಆಂಬುಲೆನ್ಸ್‌ನಲ್ಲಿ ಜಿಲ್ಲಾಸ್ಪತ್ರೆಗೆ ರವಾನಿದ್ದಾರೆ. ಆದರೆ, ಆಸ್ಪತ್ರೆಯಲ್ಲಿ ತಪಾಸಣೆ ನಡೆಸಿದ ವೈದ್ಯರು ಸಿದ್ದರಾಜಚಾರಿ ಮೃತಪಟ್ಟಿರುವುದನ್ನು ಖಚಿತ ಪಡಿಸಿದ್ದಾರೆ. ಟ್ರಾಫಿಕ್ ಇನ್ಸ್‌ಪೆಕ್ಟರ್ ಕೆ.ಸಂತೋಷ್, ಎಸ್ಐ ಮಣಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತನ ಸಹೋದರಿ ಜಿ.ಎ.ಜ್ಯೋತಿ ನೀಡಿದ ದೂರಿನ ಮೇರೆಗೆ ಮಂಡ್ಯ ಸಂಚಾರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಾಲಬಾಧೆ: ರೈತ ಆತ್ಮಹತ್ಯೆ



ಮಳವಳ್ಳಿ, ಡಿ.10– ಸಾಲಬಾಧೆ ತಾಳಲಾರದೇ ರೈತನೋರ್ವ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ದೇವಿಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ವೆಂಕಟರಾಮು(55) ಆತ್ಮಹತ್ಯೆ ಮಾಡಿಕೊಂಡವರು. ಈತ ತಮ್ಮ 4 ಎಕರೆ ಜಮೀನಿನಲ್ಲಿ ಕಬ್ಬು, ತೆಂಗು ಸೇರಿದಂತೆ ಇತರೆ ಬೆಳೆಗಳನ್ನು ಬೆಳೆದಿದ್ದರು. ಬೋರ್‌ವೆಲ್ ಕೊರೆಸಲು ಹಾಗೂ ವ್ಯವಸಾಯಕ್ಕಾಗಿ ಕೆನರಾ ಬ್ಯಾಂಕ್‌ನಲ್ಲಿ 2 ಲಕ್ಷ ರೂ. ಹಾಗೂ ಚಿನ್ನದ ಮೇಲೆ 2.92 ಲಕ್ಷ ರೂ., ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 1.10 ಲಕ್ಷ ರೂ. ಅಲ್ಲದೇ 4 ಲಕ್ಷ ಕೈ ಸಾಲ ಮಾಡಿಕೊಂಡಿದ್ದರು. ಇದರಿಂದ ಮನನೊಂದಿದ್ದ ವೆಂಕಟರಾಮು ಶನಿವಾರ ದೇವಿಪುರ ಗ್ರಾಮದ ಹೊರ ವಲಯದ ತಮ್ಮ ಜಮೀನಿನಲ್ಲಿ ವಿಷಕುಡಿದು ಅಸ್ವಸ್ಥಗೊಂಡಿದ್ದರು. ಇದನ್ನು ಗಮನಿಸಿದ ಪಕ್ಕದ ಜಮೀನಿನ ಮಾಲೀಕರು ವೆಂಕಟರಾಮು ಅವರನ್ನು ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ಸೇರಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ

ಮೇಲುಕೋಟೆ, ಡಿ.10– ಇಲ್ಲಿನ ಅನ್ನದಾನ ಭವನದ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮತ್ತು ಜಿಲ್ಲಾಧಿಕಾರಿ ಡಾ.ಕುಮಾರ್ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮುಂಬರುವ ವೈರಮುಡಿ ಉತ್ಸವದ ವೇಳೆಗೆ ಅನ್ನದಾನ ಭವನವನ್ನು ವ್ಯವಸ್ಥಿತವಾಗಿ ಆರಂಭಿಸಲಾಗುತ್ತದೆ. ಅಲ್ಲದೇ ಮೇಲುಕೋಟೆಯಲ್ಲಿ ಭಕ್ತರಿಗೆ ಮೂಲ ಸೌಕರ್ಯ ಕಲ್ಪಿಸಲಾಗುವುದು. ಯೋಜನಾ ವರದಿಯಲ್ಲಿರುವಂತೆ, ಅಪರ ಜಿಲ್ಲಾಧಿಕಾರಿಗಳು ಪರಿಶೀಲಿಸಿ ನಿರ್ದೇಶಿಸಿರುವಂತೆ ಕಾಂಪೌಂಡ್ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಮೇಲುಕೋಟೆ ಸರ್ವಾಂಗೀಣ ಅಭಿವೃದ್ಧಿಗೆ ಜಿಲ್ಲಾಡಳಿತ ನೀಲನಕ್ಷೆ ತಯಾರಿಸುತ್ತಿದ್ದು, ದೇವಾಲಯದ ಆಸ್ತಿ ಸಂರಕ್ಷಣೆಗೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ. ಅನ್ನದಾನ ಭವನವನ್ನು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಪರಿಶೀಲಿಸಿ ಕಾಂಪೌಂಡ್ ನಿರ್ಮಿಸಲು ನೀಲನಕ್ಷೆ ತಯಾರಿಸಿದ್ದಾರೆ. ಅದರಂತೆ ಕಾಂಪೌಂಡ್ ನಿರ್ಮಿಸಿ ಎಂದು ಸೂಚಿಸಿದರು.



ರೋಟರಿ ಅಂತಾರಾಷ್ಟ್ರೀಯ 2025–26 ನಾಮನಿರ್ದೇಶನ ಅಧ್ಯಕ್ಷ ಆರ್‌ಟಿಎನ್ ಮಾರಿಯೋ ಸಿಸರ್ ಭಾನುವಾರ ಮೈಸೂರಿನ ಮೃಗಾಲಯಕ್ಕೆ ಭೇಟಿ ನೀಡಿದ್ದ ವೇಳೆ ಅವರನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರೂ ಆದ ರೊಟೇರಿಯನ್ ಎಲ್.ಆರ್.ಮಹದೇವಸ್ವಾಮಿ ಅಭಿನಂದಿಸಿದರು. ಈ ವೇಳೆ ರೋಟರಿ ಅಂತಾರಾಷ್ಟ್ರೀಯ ಡಿಸ್ಟ್ರಿಕ್ಟ್ ಗೌರ್ನರ್ (3181) ಕೇಶವ್, ರೊಟೇರಿಯನ್‌ಗಳಾದ ಚಿನ್ನಬಸವರಾಜು, ರವಿಶಂಕರ್, ಅಜಯ್ ಸಿಂಗ್, ರೋಟರೆಕ್ಟರ್‌ಗಳಾದ ಆರ್.ಕೆ.ನಿಖಿಲ್, ಜಸ್ವಂತ್ ಮತ್ತಿತರರಿದ್ದರು.

ಅರ್ಜುನನ ಸಾವಿನ ಪ್ರಕರಣ; ಸತ್ಯಾಸತ್ಯತೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಡಿ.10(ಪಿಎಂ)– ದಸರಾ ಆನೆ ಅರ್ಜುನನ ಸಾವಿನ ಪ್ರಕರಣ ಸಂಬಂಧ ಸತ್ಯಾಸತ್ಯತೆ ಹೊರಬರಬೇಕೆಂದು ಒತ್ತಾಯಿಸಿ ಮೈಸೂರು ಮೀಮ್ಸ್ ತಂಡ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತಲ್ಲದೆ, ಮೇಣದ ಬತ್ತಿ ಬೆಳಗಿಸಿ ಅಗಲಿದ ಅರ್ಜುನನಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅರ್ಜುನನ ಸಾವಿನ ಹಿಂದೆ ಸಾಕಷ್ಟು ಅನುಮಾನಗಳು ಹರಡಿವೆ. ಹಾಗಾಗಿ ಘಟನೆ ಸಂಬಂಧ ಸಂಪೂರ್ಣ ಮಾಹಿತಿಯನ್ನು ಜನರ ಮುಂದಿಡಬೇಕು. ಅರ್ಜುನ ಆನೆಯ ಮರಣದ ಕಾರಣ ಹಾಗೂ ಮರಣೋತ್ತರ ಪರೀಕ್ಷೆಯ ಮಾಹಿತಿಯನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ಅರ್ಜುನ ಆನೆ ಕೇವಲ ದಸರಾಗೆ ಮಾತ್ರ ಸೀಮಿತವಾಗಿರಲಿಲ್ಲ. ಕಾಡಿನ ಅಂಚಿನ ಪ್ರದೇಶಗಳಲ್ಲಿ ವನ್ಯಜೀವಿಗಳ ಉಪಟಳ ತಪ್ಪಿಸಲು ನಡೆಸುವ ಕಾರ್ಯಾಚರಣೆಗಳಲ್ಲಿ ಅರ್ಜುನ ಮಹತ್ವದ ಪಾತ್ರ ವಹಿಸುತ್ತಿದ್ದ. ಅರಣ್ಯ ಇಲಾಖೆ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದ ಅರ್ಜುನನ ಪ್ರಾಣಕ್ಕೆ ಅದೇ ಕೆಲಸ ಸಂಚಕಾರ ತಂದಿರುವುದು ವಿಪರ್ಯಾಸ. ಆದರೆ ಅರ್ಜುನನ ಸುರಕ್ಷತೆ ಬಗ್ಗೆ ನಿಗಾವಹಿಸದಿರುವುದು ಅಕ್ಷಮ್ಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪಿಎಫ್‌ಎ ಸಂಸ್ಥೆಯ ಸವಿತಾ ನಾಗಭೂಷಣ್, ಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ, ಗಂಧದ ಗುಡಿ ಸಂಘಟನೆಯ ಆರ್ಯನ್, ಮೀಮ್ಸ್ ತಂಡದ ಮನೋರಂಜನ್, ರವಿಕೀರ್ತಿ, ಸುಮಂತ್, ಅರ್ಜುನ್, ಅಪ್ಪಯ್ಯ, ಅನುರಾಗ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಅಕ್ರಮ ಮದ್ಯ ಸಾಗಾಟ: ಓರ್ವನ ಬಂಧನ

ಮೈಸೂರು, ಡಿ.10– ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ವ್ಯಕ್ತಿಯನ್ನು ಮೈಸೂರು ದಕ್ಷಿಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ತಾಲೂಕಿನ ಉದ್ಬೂರು ಗ್ರಾಮದ ಸಿ.ಚನ್ನಪ್ಪ ಬಂಧಿತ. ಈತ ತನ್ನ ಸ್ಕೂಟರ್‌ನಲ್ಲಿ ಅಕ್ರಮವಾಗಿ ಮದ್ಯ ಸಾಗಿಸುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿ, ಬಂಧಿಸಿದ್ದಾರೆ. ಈ ವೇಳೆ ಆತನಿಂದ 1,200 ರೂ. ಮೌಲ್ಯದ 38 ಟೆಟ್ರಾಪ್ಯಾಕ್ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮನೆ ಬಾಗಿಲು ಮೀಟಿ ನಗ, ನಾಣ್ಯ ಕಳವು

ಮೈಸೂರು, ಡಿ.10– ಮನೆ ಬಾಗಿಲು ಮೀಟಿ ಒಳ ನುಗ್ಗಿದ ಕಳ್ಳರು, 11.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ನಗದು ದೋಚಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಸಾತಗಳ್ಳಿ ಡಿಟಿಎಸ್ ರಾವ್ ಬಡಾವಣೆ ನಿವಾಸಿ ಸುನೀಲ್ ಎಸ್.ಶೆಟ್ಟಿ ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಕಾರ್ಯ ನಿಮಿತ್ತ ಬೇರೆ ಊರಿಗೆ ಹೋಗಿದ್ದ ಇವರು ಮನೆಗೆ ವಾಪಸ್ಸಾದಾಗ ಬಾಗಿಲು ಮೀಟಿರುವುದನ್ನು ಕಂಡು ಗಾಬರಿಯಿಂದ ಒಳಹೋಗಿ ಪರಿಶೀಲಿಸಿದಾಗ ಕೊಠಡಿಯ ಬೀರುವಿನದಲ್ಲಿದ್ದ 7.5 ಸಾವಿರ ರೂ. ನಗದು ಮತ್ತು 227 ಗ್ರಾಂ ಚಿನ್ನಾಭರಣ ಕಳುವಾಗಿರುವುದು ತಿಳಿದಿದೆ. ಈ ಸಂಬಂಧ ಸುನೀಲ್ ಶೆಟ್ಟಿ ನೀಡಿರುವ ದೂರಿನನ್ವಯ ಮೈಸೂರು ದಕ್ಷಿಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಿದ್ದಾರೆ.

ಭಾರೀ ಮಳೆ, ಭಾರತ–ದಕ್ಷಿಣ ಆಫ್ರಿಕಾ ನಡುವಿನ ಮೊದಲ ಟಿ20 ಪಂದ್ಯ ರದ್ದು

ಡರ್ಬನ್, ಡಿ.10–ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಮೂರು ಪಂದ್ಯಗಳ ಟಿ20 ಸರಣಿ ಭಾನುವಾರ ಪ್ರಾರಂಭವಾಗಲಿದೆ. ಉಭಯ ತಂಡಗಳ ನಡುವಿನ ಮೊದಲ ಪಂದ್ಯ ಡರ್ಬನ್‌ನ ಕಿಂಗ್ಸ್‌ಮೀಡ್ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದು ಮಳೆಯಿಂದಾಗಿ ಟಾಸ್ ತಡವಾಗುತ್ತಿದೆ. ಭಾರತ ತಂಡವನ್ನು ಸೂರ್ಯ ಕುಮಾರ್ ಯಾದವ್ ಮುನ್ನಡೆಸುತ್ತಿದ್ದು ಅದೇ ಸಮಯದಲ್ಲಿ, ದಕ್ಷಿಣ ಆಫ್ರಿಕಾದ ನಾಯಕತ್ವ ಏಡೆನ್ ಮಾರ್ಕ್ರಾಮ್ ಕೈಯಲ್ಲಿದೆ. ಆದರೆ ಮಳೆ ಎಡಬಿಡದೆ ಸುರಿಯುತ್ತಿದ್ದರಿಂದ ಪಂದ್ಯವನ್ನು ರದ್ದು ಮಾಡಲಾಗಿದೆ. ಆಸ್ಟ್ರೇಲಿಯಾ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಭಾರತ ನಾಲ್ಕು ಪಂದ್ಯಗಳಲ್ಲಿ ಗೆಲುವು ಸಾಧಿಸಿ ಸರಣಿ ಕೈವಶ ಮಾಡಿಕೊಂಡಿತ್ತು. ಎರಡನೇ ಟಿ20 ಪಂದ್ಯ ಡಿಸೆಂಬರ್ 12ರಂದು ಗ್ಕೆಬರ್ಹಾದಲ್ಲಿ ನಡೆಯಲಿದೆ.

ಲೋಕ ಅದಾಲತ್‌ನಲ್ಲಿ 5952 ಪ್ರಕರಣಕ್ಕೆ ಇತ್ಯರ್ಥ

ಎರಡು ವರ್ಷದ ನಂತರ ಮತ್ತೆ ಒಂದಾದ ದಂಪತಿ



ಹುಣಸೂರು,ಡಿ.10– ಹುಣಸೂರಿನ ನ್ಯಾಯಾಲಯದ ಆವರಣದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಐದು ನ್ಯಾಯಾಲಯಗಳ ಒಟ್ಟು 6119 ಪ್ರಕರಣಗಳ ಪೈಕಿ 5952 ಪ್ರಕರಣಗಳು ವಿಚಾರಣೆಗೆ ಒಳಪಟ್ಟು 4.08 ಕೋಟಿ ರೂ. ಹಣ ವಸೂಲಾತಿಗೆ ಆದೇಶಿಸಿದೆ.

ನಗರದ 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಸೇರಿದಂತೆ ಒಟ್ಟು 5 ನ್ಯಾಯಾಲಯದಲ್ಲಿ ನಡೆದ ವಿವಿಧ ಪ್ರಕರಣಗಳ ವಿಚಾರಣೆ ಮತ್ತು ಹಣ ವಸೂಲಾತಿ ಹಾಗೂ ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದ ವ್ಯಾಜ್ಯಗಳನ್ನು ವಿಚಾರಣೆ ನಡೆಸಿ 5952 ವ್ಯಾಜ್ಯಗಳಿಗೆ ನ್ಯಾಯಾಲಯ ತೀರ್ಪು ನೀಡಿ ಪ್ರಕರಣಗಳಿಗೆ ಅಂತ್ಯ ಹಾಡಿದೆ.

ಲೋಕ ಅದಾಲತ್ ಕಾರ್ಯಕ್ರಮದಲ್ಲಿ ಚೈತ್ರಾ ಮತ್ತು ಸಂತೋಷ್ ದಂಪತಿ ಕಳೆದ 2 ವರ್ಷದಿಂದ ಕೌಟುಂಬಿಕ ದೌರ್ಜನ್ಯ ಪ್ರಕರಣದಲ್ಲಿ ವಿಚಾರಣೆ ಎದುರಿಸಿ ಜೀವಾಂಶಕ್ಕೆ ಅರ್ಜಿ ಸಲ್ಲಿಸಿದ್ದು, ಶನಿವಾರ ನಡೆದ ಅದಾಲತ್‌ನಲ್ಲಿ ರಾಜಿ ಸಂಧಾನ ನಡೆದು ಎರಡು ವರ್ಷಗಳ ನಂತರ ಮತ್ತೆ ಸತಿ–ಪತಿಯಾಗಿ ಜೀವನ ನಡೆಸಲು ನ್ಯಾಯಾಲಯ ತಿಳುವಳಿಕೆ ಹೇಳಿ ಒಂದುಗೂಡಿಸಿತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ 6 ತಿಂಗಳಿಂದ ನ್ಯಾಯಾಲಯವು ನಿಗಾವಹಿಸಿ ಸಣ್ಣ ಪುಟ್ಟ ಸಮಸ್ಯೆಗಳಿಗೆ ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶಿರಿನ್ ಜಾವೀದ್ ಅನ್ಸಾರಿ ಪರಿಹರಿಸುವ ಪ್ರಯತ್ನ ನಡೆಸಿ ದಂಪತಿಯನ್ನು ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ ಎಂದು ವಕೀಲರಾದ ಶ್ರೀಮತಿ ಪವಿತ್ರ ತಿಳಿಸಿದರು.

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಪಾಟೀಲ ಮೋಹನ್ ಕುಮಾರ್ ಭೀಮಗೌಡ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿರಿನ್ ಜಾವೀದ್ ಅನ್ಸಾರಿ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಜೈಬುನ್ನಿಸಾ, ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಮನು ಪಟೇಲ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಪೂಜಾ ಬೆಳಕೇರಿ ಹಾಜರಿದ್ದರು.

ಅಪರಾಧ ತಡೆಯಲು ಪೊಲೀಸರೊಂದಿಗೆ ಸಾರ್ವಜನಿಕರ ಸಹಕಾರ ಅಗತ್ಯ



ಕೆ.ಆರ್.ನಗರ.ಡಿ.10– ಅಪರಾಧ ತಡೆಗಟ್ಟುವಲ್ಲಿ ಪೊಲೀಸರೊಂದಿಗೆ ಸಾರ್ವಜನಿಕರು ಸ್ಪಂದಿಸಿ, ಕಾನೂನುಗಳ ಅರಿವು ಹೊಂದಬೇಕಾದ ಅಗತ್ಯ ಇದೆ ಎಂದು ಪಟ್ಟಣದ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ತಿಳಿಸಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೆ.ಆರ್.ನಗರ ಪೊಲೀಸ್ ಠಾಣೆ ಮತ್ತು ರೋಟರಿ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಅಪರಾಧ ತಡೆ ಮಾಸಾಚರಣೆ ಹಾಗೂ ರಸ್ತೆ ಸಂಚಾರ ನಿಯಮ ಪಾಲಿಸಿ ಅಪಘಾತ ತಪ್ಪಿಸಿ ಅಭಿಯಾನದ ಜಾಥಗೆ ಚಾಲನೆ ನೀಡಿ ಅವರು ಮಾತನಾಡಿದರು.

ಅಪರಾಧ ತಡೆಗಟ್ಟುವಲ್ಲಿ ಎಲ್ಲರೂ ಸಹಕರಿಸಬೇಕು. ದೇಶದ ಜನಸಂಖ್ಯೆಗೆ ತಕ್ಕಂತೆ ಪೊಲೀಸ್ ವ್ಯವಸ್ಥೆ ಕಲ್ಪಿಸಲು ಸಾಧ್ಯವಿಲ್ಲ, ಹೀಗಿರುವಾಗ ಪೊಲೀಸ್ ಇಲಾಖೆನೇ ಎಲ್ಲಾ ಅಪರಾಧ ತಡೆಗಟ್ಟಲು ಸಾಧ್ಯವಿಲ್ಲ. ಸಾರ್ವಜನಿಕರ ಸಹಕಾರ ಬೇಕೆಂದು ಅವರು ಕೋರಿದರು.

ಬಹುತೇಕ ಅಪರಾಧಗಳಿಗೆ ಆಯಾ ಸಂದರ್ಭಗಳಲ್ಲಿ ಸೃಷ್ಟಿಯಾದ ಸನ್ನಿವೇಶಗಳು ಅಪರಾಧ ಮಾಡಲು ಅವಕಾಶ ನೀಡುತ್ತವೆ. ಬಲವಾದ ಅಪರಾಧಿ ಅಪರಾಧ ತಡೆ ನಿಮ್ಮಿಂದ ಆರಂಭಗೊಳ್ಳುತ್ತದೆ. ಸಾಮಾನ್ಯ ತಿಳುವಳಿಕೆಯಿಂದ ಮತ್ತು ಅಪರಾಧ ತಡೆಗಟ್ಟುವ ತಂತ್ರಗಳನ್ನು ರೂಢಿಸಿಕೊಳ್ಳುವುದರಿಂದ ಅಪರಾಧ ಮಾಡುವುದನ್ನು ಅತ್ಯಂತ ಕಡಿಮೆಗೊಳಿಸಬಹುದು ಎಂದು ಮಾಹಿತಿ ನೀಡಿದರು.

ವಾಹನದ ಹೊರಗೆ ಅಥವಾ ಒಳಗೆ ಅಪಘಾತದ ರಭಸಕ್ಕೆ ಸಿಲುಕಿ ಹಾಕಿಕೊಂಡು ನುಚ್ಚುನೂರಾಗುತ್ತಾರೆ. ಪ್ರಮಾಣಿಕವಾಗಿ ಹೇಳವುದಾದರೆ ಸೀಟ್ ಬೆಲ್ಟ್‌ಗಳ ಬಳಕೆ ಸಾವು ಮತ್ತು ಬದುಕಿನ ಅಂತರವನ್ನು ನಿರ್ಧರಿಸುತ್ತವೆ. ಎಂದರಲ್ಲದೆ ಎಲ್ಲಾ ಸಮಯದಲ್ಲೂ ಎಚ್ಚರಿಕೆಯಿಂದ ಚಾಲನೆ ಮಾಡಿ. ಅಪಾಯಕಾರಿ ಹವಾಮಾನ ಮತ್ತು ಅಥವಾ ರಸ್ತೆ ಪರಿಸ್ಥಿತಿಗಳು ಇದ್ದಾಗ ಹೆಚ್ಚುವರಿ ಎಚ್ಚರಿಕೆಯಿಂದ ಬಳಸಿ. ನೀವು ದಣಿದಿದ್ದರೆ ಅಥವಾ ನೀವು ದೈಹಿಕವಾಗಿ ಅಥವಾ ಮಾನಸಿಕವಾಗಿ ದುರ್ಬಲರಾಗಿದ್ದರೆ ವಾಹನ ಚಲಾಯಿಸಬೇಡಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಕಾಲೇಜು ಪ್ರಾಂಶುಪಾಲ ಜಯಕುಮಾರ್, ರೋಟರಿ ಅಧ್ಯಕ್ಷ ನಾಗರಾಜು ಬಾವಿಕಟ್ಟೆ, ಸಬ್ ಇನ್ಸ್‌ಪೆಕ್ಟರ್‌ಗಳಾದ ಧನರಾಜ್, ನಂಜಪ್ಪ ಅಚ್ಯುತ, ಮುಖ್ಯಪೇದೆ ಮಂಜು, ಕಾಲೇಜು ಉಪನ್ಯಾಸಕರು, ರೋಟರಿ ಕ್ಲಬ್ ಸದಸ್ಯರು ಸೇರಿ ನೂರಾರು ವಿದ್ಯಾರ್ಥಿಗಳು ಹಾಜರಿದ್ದರು.

ಸೋಮವಾರ ಪೂಜಾ ಮಹೋತ್ಸವ

ಕಂಪಲಾಪುರ: ಇಲ್ಲಿನ ಶ್ರೀ ಕರಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಕಾರ್ತಿಕ ಮಾಸದ ಕಡೇ ಸೋಮವಾರದ ಪ್ರಯುಕ್ತ ಪೂಜಾ ಮಹೋತ್ಸವ ನಾಳೆ (ಡಿ.11) ನೆರವೇರಲಿದೆ. ಅಂದು ಬೆಳಗಿನ ಜಾವ 5 ರಿಂದ ದೇವರಿಗೆ ಅಭಿಷೇಕ, ನೈವೇದ್ಯ, 11ಕ್ಕೆ ಮಹಾಮಂಗಳಾರತಿ, ಮದ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ನಡೆಯಲಿದೆ. ಸಂಜೆ 4 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಮೈಸೂರಿನ 'ಮಂಜು ಮ್ಯೂಸಿಕ್' ತಂಡದವರಿಂದ ಭಕ್ತಿಗೀತೆ ಕಾರ್ಯಕ್ರಮ. ರಾತ್ರಿ ದೇವಸ್ಥಾನದ ಒಳಗೆ, ಹೊರಗೆ ದೀಪೋತ್ಸವವಿದ್ದು ದೀಪಗಳನ್ನು ತಂದು ಹಚ್ಚಬಹುದು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತನಕೃಪೆಗೆ ಪಾತ್ರರಾಗಬೇಕೆಂದು ಸಮಿತಿ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ ಸೋಮವಾರ 11 ಡಿಸೆಂಬರ್ 2023

ಕೊಡವ ಪ್ರಾಂತ್ಯಕ್ಕೆ ಕೊಡವರು ಮಾತ್ರ ಸ್ಥಳೀಯರು

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಪ್ರತಿಪಾದನೆ



ಮಡಿಕೇರಿ, ಡಿ.10–ಕಾಶ್ಮೀರಿ ಪಂಡಿತರು ಕಾಶ್ಮೀರಕ್ಕೆ ಹೇಗೆ ಮೂಲ ನಿವಾಸಿಗಳೋ, ಹಾಗೇ ಕೊಡವ ಪ್ರಾಂತ್ಯಕ್ಕೆ ಕೊಡವರು ಮಾತ್ರ ಆದಿಮಸಂಜಾತರಾಗಿದ್ದಾರೆ. ಇಲ್ಲಿಗೆ ಬಂದು ನೆಲೆಸಿದವರು ಈ ನೆಲದ ನಾಗರಿಕರೇ ಹೊರತು, ಸ್ಥಳೀಯರಲ್ಲ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಪ್ರತಿಪಾದಿಸಿದರು.

ಅರೆಕಾಡು ಹೊಸ್ಕೇರಿ ಕೊಡವ ಕಲ್ಚರಲ್ ಮತ್ತು ರಿಕ್ರಿಯೇಷನ್ ಕ್ಲಬ್‌ನಲ್ಲಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂವಿಧಾನದ ಆರ್ಟಿಕಲ್ 244ಆರ್/ಡಬ್ಲ್ಯೂ 6ನೇ ಮತ್ತು 8ನೇ ಶೆಡ್ಯೂಲ್ ಅಡಿಯಲ್ಲಿ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಪಡೆದುಕೊಳ್ಳುವುದು ಹಾಗೂ ನಮ್ಮ ಪ್ರಾಚೀನ ಭೂಮಿಯನ್ನು ರಕ್ಷಿಸಲು ಸಹಕಾರಿಯಾಗಿದೆ ಎಂದರು.

ಕೊಡವರು ಕೊಡವ ಪ್ರದೇಶದ ಸ್ಥಳೀಯರು, ಕೊಡವರನ್ನು ಹೊರತುಪಡಿಸಿ ಇಲ್ಲಿಗೆ ಬಂದು ನೆಲೆಸಿದವರು ಈ ನೆಲದ ನಾಗರಿಕರೇ ಹೊರತು ಸ್ಥಳೀಯರಲ್ಲ. ಮತದಾರರ ಪಟ್ಟಿಯಲ್ಲಿ ನಮೂದಿಸಿದವರನ್ನು ನಾಗರಿಕರೆಂದು ಪರಿಗಣಿಸಲಾಗುತ್ತದೆ. ಆದರೆ, ಅವರು ಕೊಡವ ನೆಲದ ಮೂಲ ನಿವಾಸಿಗಳಾಗಲು ಸಾಧ್ಯವಿಲ್ಲ. ಕಾಶ್ಮೀರಿ ಪಂಡಿತರು ಕಾಶ್ಮೀರಕ್ಕೆ ಹೇಗೆ ಸ್ಥಳೀಯರೋ ಹಾಗೇ ಕೊಡವರು ಕೊಡವ ಪ್ರಾಂತ್ಯಕ್ಕೆ ಸ್ಥಳೀಯರು. ಕೊಡವರಿಗೆ ಯಾವುದೇ ಪ್ರತ್ಯೇಕ ಸಾಂಸ್ಕೃತಿಕ ಮೂಲ ಅಥವಾ ಕೊಡವ ನೆಲವಿಲ್ಲ ಎಂದು ತಿಳಿಸಿದರು.

ಆರಂಭದಲ್ಲಿ ಇಡೀ ಕೊಡವ ಭೂಮಿ ಕೊಡವರಿಗೆ ಸೇರಿತ್ತು. ಆದರೆ, ನಮ್ಮನ್ನು ಆಳಿದ ಹೊರಗಿನ ವಿಜಯಶಾಲಿಗಳು ನಮ್ಮ ಪೂರ್ವಜರ ಭೂಮಿಯನ್ನು ವಶಪಡಿಸಿಕೊಂಡು ವಲಸಿಗರಿಗೆ ಹಂಚಿಕೆ ಹಾಗೂ ಗುತ್ತಿಗೆಗೆ ನೀಡಿ, ಹೊರಗಿನ ಶ್ರೀಮಂತರಿಗೆ ಮಾರಾಟ ಮಾಡಿದರು. ಬ್ರಿಟಿಷರು ಕೂಡ ಇದನ್ನೇ ಅನುಸರಿಸಿದರು. ಆದರೆ, ಈ ಕೊಡವ ನೆಲದ ಪೂರ್ವಿಕರ ಆನುವಂಶಿಕ ಸಾಮುದಾಯಿಕ ಭೂಮಿ, ದೇವಕಾಡ್, ಮಂದ್‌ಗಳು, ದೇವಾಲಯದ ಭೂಮಿ, ಗೋಮಾಳಗಳ (ಬಾಣೆ) ಭೌಗೋಳಿಕ, ಭೌತಿಕ ಮತ್ತು ಪರಿಸರ ಸಮತೋಲನವನ್ನು ಕೊಡವರು ಕಾಪಾಡಿಕೊಂಡು ಬಂದಿದ್ದಾರೆ ಎಂದು ಹೇಳಿದರು.

ಸ್ವಾತಂತ್ರ್ಯ ಪಡೆದ ನಂತರ ಮತ್ತು ತರುವಾಯ 1956ರಲ್ಲಿ ರಾಜ್ಯ ಮರು–ಸಂಘಟನೆ ಕಾಯ್ದೆಯಡಿ ನಮ್ಮ ಕೊಡವ ರಾಜ್ಯವನ್ನು ಕರ್ನಾಟಕದಲ್ಲಿ ವಿಲೀನಗೊಳಿಸಿದ ನಂತರ ದೊಡ್ಡ ಪ್ರಮಾಣದ ಒಳಹರಿವು ಸಂಭವಿಸಿತು. ಇದರಿಂದ ಇಡೀ ಕೊಡವ ಜನಸಂಖ್ಯಾಶಾಸ್ತ್ರ ಅಪಾಯಕ್ಕೆ ಸಿಲುಕಿದೆ. ಸ್ಥಳೀಯ ಕೊಡವರನ್ನು ನಿಯಂತ್ರಿಸಲು ಅವರು ಕಠಿಣ ಕಾನೂನುಗಳನ್ನು ಪರಿಚಯಿಸಿದರು. ನಮ್ಮ ನೆಲ, ಜಲ ಸಂಪನ್ಮೂಲ, ಖನಿಜ ಮತ್ತು ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುವ ಜನರು ಇದ್ದಾರೆ. ಇವರಿಂದ ಮೂಲ ನಿವಾಸಿ ಕೊಡವರ ಜೀವನ ಶೋಚನೀಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಿಎನ್‌ಸಿ ಸಂಘಟನೆ ಕಳೆದ 33 ವರ್ಷಗಳಿಂದ ಕೊಡವರ ಸಾಂವಿಧಾನಿಕ ಭದ್ರತೆಗಾಗಿ ಹೋರಾಟ ನಡೆಸಿಕೊಂಡು ಬಂದಿದೆ. ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಪಡೆಯುವುದು ನಮ್ಮ ಏಕೈಕ ಗುರಿಯಾಗಿದೆ. ಸಿಎನ್‌ಸಿಯ ಈ ಬೇಡಿಕೆ ಯನ್ನು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಮಾಜಿ ಕೇಂದ್ರ ಸಚಿವ ಡಾ.ಸುಬ್ರಮಣಿಯನ್‌ಸ್ವಾಮಿ ಅವರು ಬೆಂಬಲಿಸಿದ್ದಾರೆ. ಶಾಂತಿ ಮತ್ತು ಕೊಡವ ಬುಡಕಟ್ಟು ಜನರ ರಕ್ಷಣೆಯೇ ಸಿಎನ್‌ಸಿಯ ಉದ್ದೇಶವಾಗಿದೆ. ಕೊಡವರು ತಮ್ಮದೇ ಆದ ಸ್ವಯಂ ಆಡಳಿತವನ್ನು ಹೊಂದುವ ಮೂಲಕ ತಮ್ಮ ಹಕ್ಕುಗಳನ್ನು ನಿರ್ಧರಿಸಬೇಕು ಎಂದರು. ಕೊಡವ ಕಲ್ಚರಲ್ ಮತ್ತು ರಿಕ್ರಿಯೇಷನ್ ಕ್ಲಬ್‌ನ ಅಧ್ಯಕ್ಷ ಕುಕ್ಕೇರ ಜಯ ಚಿಣ್ಣಪ್ಪ ಮಾತನಾಡಿ, ಸಿಎನ್‌ಸಿಯ ಹೋರಾಟ ಮತ್ತು ಎನ್.ಯು.ನಾಚಪ್ಪ ಅವರ ಕೊಡವರ ಪರ ವಾದವನ್ನು ಶ್ಲಾಘನೀಯ ಎಂದು ತಿಳಿಸಿದರು.

ಸನ್ಮಾನ: ಕಾರ್ಯಕ್ರಮದಲ್ಲಿ ಕ್ಲಬ್ ವತಿಯಿಂದ ಎನ್.ಯು.ನಾಚಪ್ಪ ಹಾಗೂ ಹಿರಿಯ ಸಹಕಾರಿ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ಅವರನ್ನು ಸನ್ಮಾನಿಸಲಾಯಿತು. ಕ್ಲಬ್‌ನ ಹಿರಿಯ ಸದಸ್ಯ ಕುಕ್ಕೇರ ಕೇಶು ಉತ್ತಪ್ಪ, ನೆಲ್ಲಮಕ್ಕಡ ಪವನ್ ಮತ್ತಿತರ ಪ್ರಮುಖರು ಹಾಗೂ ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

ಹನಿಟ್ರ್ಯಾಪ್: ಮಾಜಿ ಯೋಧನಿಂದ 10 ಲಕ್ಷ ಸುಲಿಗೆ ಮಾಡಿದ್ದ ಇಬ್ಬರ ಬಂಧನ

ಚಾಲಕನಾಗಿದ್ದವನೇ ಖೆಡ್ಡಾಕ್ಕೆ ಕೆಡವಿದ್ದ





ಮಡಿಕೇರಿ, ಡಿ.10– ಮಾಜಿ ಯೋಧರೊಬ್ಬರನ್ನು ಹನಿಟ್ರ್ಯಾಪ್‌ಗೆ ಕೆಡವಿ 10 ಲಕ್ಷ ರೂ. ಸುಲಿಗೆ ಮಾಡಿದ್ದ ಇಬ್ಬರನ್ನು ಕೊಡಗು ಪೊಲೀಸರು ಬಂಧಿಸಿದ್ದಾರೆ.

ಕೇರಳದ ಎರ್ನಾಕುಲಂ ಜಿಲ್ಲೆಯ ನಿವಾಸಿಯಾಗಿರುವ ಮಾಜಿ ಯೋಧ ಜಾನ್‌ಮ್ಯಾಥ್ಯು ಎಂಬುವವರೇ ವಂಚನೆಗೊಳಗಾಗಿದ್ದು, ಈ ಪ್ರಕರಣ ಸಂಬಂಧ ಬಂಟ್ವಾಳದ ನಿವಾಸಿ ಅಬ್ದುಲ್ ಬಷೀರ್ (29), ಕಡಬದ ನಿವಾಸಿ ಸಾದೀಕ್ (30)ನನ್ನು ಕೊಡಗು ಪೊಲೀಸರು ಬಂಧಿಸಿದ್ದು,

ಜಾನ್‌ಮ್ಯಾಥ್ಯು ಅವರ ಬಳಿ ಚಾಲಕನಾಗಿದ್ದು ಮಾಲೀಕನನ್ನೇ ಖೆಡ್ಡಾಗೆ ಕೆಡವಿದ್ದ ಫೈಝುಲ್ ಎಂಬಾತ ಈಗಾಗಲೇ ಮೈಸೂರು ನಗರದಲ್ಲಿ ನಡೆದ ಅಪರಾಧ ಪ್ರಕರಣ ವೊಂದರಲ್ಲಿ ಬಂಧಿಯಾಗಿದ್ದು, ತಲೆ ಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಅಮೀರ್ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಬಂಧಿತರಿಂದ 3 ಮೊಬೈಲ್, ಒಂದೂವರೆ ಸಾವಿರ ರೂ. ನಗದು ಮತ್ತು 2.10 ಲಕ್ಷ ರೂ.ನ ಚೆಕ್ ಅನ್ನು ವಶಪಡಿಸಿಕೊಂಡಿದ್ದಾರೆ.

ಮದುವೆ ನಾಟಕ: ಅವಿವಾಹಿತರಾಗಿದ್ದ ನಿವೃತ್ತ ಯೋಧ ಜಾನ್‌ಮ್ಯಾಥ್ಯು ಅವರ ಬಳಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ ಫೈಝುಲ್, ಜಾನ್‌ಮ್ಯಾಥ್ಯು ಅವರಿಗೆ 18 ವರ್ಷದ ಯುವತಿಯನ್ನು ಮದುವೆ ಮಾಡಿಸುವುದಾಗಿ ನಂಬಿಸಿ ನ.26ರಂದು ಅವರನ್ನು ಮಡಿಕೇರಿ ನಗರದ ಹೋಂಸ್ಟೇವೊಂದಕ್ಕೆ ಕರೆಸಿದ್ದಾನೆ. ಅಲ್ಲಿ ಫೈಝುಲ್, ಅಬ್ದುಲ್ ಬಷೀರ್, ಸಾದೀಕ್ ಹಾಗೂ ಅಮೀರ್ ಸೇರಿ ಯುವತಿಯನ್ನು ತೋರಿಸಿ ಈಕೆಯನ್ನು ಜಾನ್‌ಮ್ಯಾಥ್ಯು ಅವರಿಗೆ ಹೋಂಸ್ಟೇನಲ್ಲೇ ಮದುವೆ ಮಾಡಿಸಿ, ನಂತರ ಅಲ್ಲೇ ತಂಗಲು ಅವಕಾಶ ಮಾಡಿಕೊಟ್ಟಿದ್ದಾರೆ.

ಅದೇ ದಿನ ಸಂಜೆ ಮತ್ತೆ ಈ ನಾಲ್ವರು ಆರೋಪಿಗಳು, ಮದುವೆಯ ಫೋಟೋಗಳನ್ನು ತೋರಿಸಿ ಇದನ್ನು ನಿಮ್ಮ ಕುಟುಂಬದವರಿಗೆ ನೀಡುವುದಾಗಿ ಜಾನ್‌ಮ್ಯಾಥ್ಯು ಅವರನ್ನು ಬ್ಲಾಕ್‌ಮೇಲ್ ಮಾಡಿ, 8 ಲಕ್ಷ ರೂ. ನಗದು ಹಾಗೂ 2 ಲಕ್ಷ ರೂ. ಚೆಕ್ ಅನ್ನು ಸುಲಿಗೆ ಮಾಡಿದ್ದರು.

ನಂತರ ವಂಚನೆಗೊಳಗಾದ ಜಾನ್‌ಮ್ಯಾಥ್ಯು ನೀಡಿದ ದೂರಿನ ಹಿನ್ನೆಲೆ ಪೊಲೀಸರು, ಡಿ.7ರಂದು ಆರೋಪಿಗಳನ್ನು ಬಂಧಿಸಿ ನಗದು ಮತ್ತು ಚೆಕ್ ವಶಪಡಿಸಿಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಮಡಿಕೇರಿ ಉಪವಿಭಾಗದ ಡಿವೈಎಸ್‌ಪಿ ಎಂ.ಜಗದೀಶ್, ಸಿಪಿಐ ಅನೂಪ್ ಮಾದಪ್ಪ, ಡಿಸಿಆರ್‌ಬಿ ವೃತ್ತ ನಿರೀಕ್ಷಕ ಐ.ಪಿ.ಮೇದಪ್ಪ, ಮಡಿಕೇರಿ ನಗರ ಪೊಲೀಸ್ ಠಾಣಾಧಿಕಾರಿ ಲೋಕೇಶ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಪೊನ್ನಂಪೇಟೆ ಬಳಿಯ ದರೋಡೆ ಪ್ರಕರಣದ ತನಿಖೆ ಚುರುಕು

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮಾಹಿತಿ



ಮಡಿಕೇರಿ, ಡಿ.10–ಪೊನ್ನಂಪೇಟೆ ತಾಲೂಕಿನ ದೇವರಪುರದಲ್ಲಿ ಕೇರಳದ ವ್ಯಕ್ತಿಗಳ ವಾಹನ ಅಡ್ಡಗಟ್ಟಿ ಸುಮಾರು 50 ಲಕ್ಷ ರೂ. ನಗದು ಹಾಗೂ ವಾಹನ ಅಪಹರಿಸಿದ ಪ್ರಕರಣದ ಸಂಬಂಧ ತನಿಖೆಯನ್ನು ಚುರುಕುಗೊಳಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದರು.

ದರೋಡೆಕೋರರ ಮಾಹಿತಿ ಕಲೆ ಹಾಕಲಾಗುತ್ತಿದ್ದು, ಹಣ ಕಳೆದುಕೊಂಡಿರುವುದಾಗಿ ದೂರು ನೀಡಿರುವ ಕೇರಳದ ಮಲಪ್ಪುರಂ ಜಿಲ್ಲೆಯ ತಿರುವರಾಂಗದಿ ತಾಲೂಕಿನ ಕೊಡಕಾಡ್ ನಿವಾಸಿ ಗುತ್ತಿಗೆದಾರ ಕೆ.ಶಮ್ಜದ್ ಅವರನ್ನು ಕೂಡ ವಿಚಾರಣೆಗೊಳಪಡಿಸಲಾಗಿದೆ. ಮಾರಾಟಕ್ಕೆ ಚಿನ್ನಾಭರಣ ಎಲ್ಲಿಂದ ಬಂತು? ಮೈಸೂರಿನಲ್ಲಿ ಯಾರಿಗೆ ಮಾರಾಟ ಮಾಡಲಾಗಿದೆ? 50 ಲಕ್ಷ ರೂ. ದೊಡ್ಡ ಮೊತ್ತವನ್ನು ರಾತ್ರಿ ಕಾರಿನಲ್ಲಿ ತೆಗೆದುಕೊಂಡು ಹೋಗಲು ಕಾರಣವೇನು? ಎಂಬಿತ್ಯಾದಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಚಿನ್ನಾಭರಣ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ದೂರುದಾರರ ಬಳಿ ತೆರಿಗೆ ಪಾವತಿ ಸೇರಿದಂತೆ ಯಾವುದೇ ದಾಖಲೆಗಳಿಲ್ಲ. ಆದ್ದರಿಂದ ಆದಾಯ ತೆರಿಗೆ ಹಾಗೂ ಜಿಎಸ್‌ಟಿ ಇಲಾಖೆಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಲಾಗಿದೆ. ದರೋಡೆಕೋರರ ಪತ್ತೆಗೆ ವಿಶೇಷ ತಂಡ ರಚಿಸಿ, ತನಿಖೆ ಕೈಗೊಳ್ಳಲಾಗಿದೆ. ಮತ್ತೊಂದೆಡೆ ದೂರು ನೀಡಿದವರ ವಿರುದ್ಧವೂ ತನಿಖೆ ನಡೆಯುತ್ತಿದೆ ಎಂದರು.

ಸಾಲದಿಂದ ಸಾವಿನ ಶಂಕೆ: ಕಗ್ಗೋಡ್ಲು ಹೋಂಸ್ಟೇಯಲ್ಲಿ ಮಗುವನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡ ದಂಪತಿಗಳ ಶವ ಪರೀಕ್ಷೆ ನಡೆಸಲಾಗಿದೆ. ಅವರ ಸಂಬಂಧಿಗಳು ಕೇರಳದಿಂದ ಆಗಮಿಸಿದ್ದು, ಮೃತದೇಹವನ್ನು ಅವರಿಗೆ ಹಸ್ತಾಂತರಿಸಲಾಗುವುದು. ಡೆತ್‌ನೋಟ್‌ನಲ್ಲಿ ಬರೆದಂತೆ ಅವರಿಗೆ ಹಣಕಾಸಿನ ತೊಂದರೆ ಇರುವುದರಿಂದ ಆತ್ಮಹತ್ಯೆ ಮಾಡಿಕೊಳ್ಳಲಾಗಿದೆ ಎಂದು ಹೇಳಲಾಗಿದೆ.

ಕೇರಳದ ಪತ್ತಾಂತಿಟ್ಟು ಠಾಣೆಯಲ್ಲಿ ಸಾಲದ ವಿಚಾರವಾಗಿ ಒಂದು ಮೊಕದ್ದಮೆ ದಾಖಲಾಗಿದ್ದು, ಇದರಿಂದ ಆತ್ಮಹತ್ಯೆ ಮಾಡಿಕೊಳ್ಳಲಾಗಿದೆ ಎಂದು ಪ್ರಾಥಮಿಕವಾಗಿ ಅಂದಾಜಿಸಲಾಗಿದೆ. ಈ ಕುರಿತು ಮತ್ತಷ್ಟು ಮಾಹಿತಿ ಕಲೆ ಹಾಕಿ ಘಟನೆಗೆ ಕಾರಣ ತಿಳಿಯಬೇಕಾಗಿದೆ ಎಂದು ತಿಳಿಸಿದರು.

ಲುಕ್‌ಔಟ್ ನೋಟಿಸ್: ಮಡಿಕೇರಿಯಲ್ಲಿ ಇತ್ತೀಚೆಗೆ ಪಂಪ್‌ಕೆರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಯೋಧ ಸಂದೇಶ್ ಪ್ರಕರಣ ಸಂಬಂಧ ಡೆತ್‌ನೋಟ್‌ನಲ್ಲಿದ್ದ ವ್ಯಕ್ತಿಗಳನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಳಪಡಿಸಲಾಗಿದೆ. ಉಳಿದಂತೆ ಸತ್ಯ ಹಾಗೂ ಸತೀಶ ಎಂಬ ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದ್ದು, ಇವರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಆರೋಪಿ ಸತ್ಯ ವಿದೇಶಕ್ಕೆ ತೆರಳಿದ್ದಾರೆ ಎಂದು ಮಾಹಿತಿ ಇದೆ ಎಂದರು.

ಮುತ್ತಪ್ಪ ದೇವಸ್ಥಾನದಲ್ಲಿ ಪೂಜಾ ಕಾರ್ಯ



ವಿರಾಜಪೇಟೆ, ಡಿ.10–ವಿರಾಜಪೇಟೆಯ ಅರಸು ನಗರದ ಶ್ರೀ ಮುತ್ತಪ್ಪ ದೇವಸ್ಥಾನದಲ್ಲಿ ಮುತ್ತಪ್ಪನ ಪುತ್ತರಿ ವೆಳ್ಳಾಟಂ ಪೂಜಾ ಕಾರ್ಯಕ್ರಮವನ್ನು ಭಕ್ತಿಯಿಂದ ಆಚರಿಸಲಾಯಿತು. ಪುತ್ತರಿ ವೆಳ್ಳಾಟಂ ಅಂಗವಾಗಿ ಗುಳಿಗ ಮತ್ತು ಶ್ರೀ ಮುತ್ತಪ್ಪ ದೇವರಿಗೆ ವಿಶೇಷ ಪೂಜಾ ಕಾಯ ನಡೆಸಲಾಯಿತು. ಬಳಿಕ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಪೂಜಾ ಕಾರ್ಯದಲ್ಲಿ ಮುತ್ತಪ್ಪ ಸೇವಾ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿದ್ದರು.

ಗ್ರಾಹಕನಿಗೆ 30 ಸಾವಿರ ಪರಿಹಾರ ನೀಡಲು ತೀರ್ಪು

ಮಡಿಕೇರಿ, ಡಿ.10– ಅನುಚಿತ ವ್ಯಾಪಾರ ಪದ್ಧತಿ ಅನುಸರಿಸಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಗ್ರಾಹಕನೊಬ್ಬನಿಗೆ ಬ್ರಿಟಾನಿಯ ಇಂಡಸ್ಟ್ರೀಸ್ ಸಂಸ್ಥೆ 30 ಸಾವಿರ ರೂ. ಪರಿಹಾರ ನೀಡುವಂತೆ ಕೊಡಗು ಜಿಲ್ಲಾ ಗ್ರಾಹಕರ ಆಯೋಗ ತೀರ್ಪು ನೀಡಿದೆ.

ಗೋಣಿಕೊಪ್ಪಲಿನ ಎಂ.ಇ.ಆಲಿ ಎಂಬುವರು ಗೋಣಿಕೊಪ್ಪದಲ್ಲಿ ಮ್ಯಾರಿ ಗೋಲ್ಡ್ ಬಿಸ್ಕೆಟ್ ಖರೀದಿಸಿದ್ದರು. ಬಿಸ್ಕೆಟ್ ಪ್ಯಾಕ್‌ನಲ್ಲಿ 100 ಗ್ರಾಂ ಎಂದು ನಮೂದಿಸಲಾಗಿತ್ತು. ಆದರೆ, ಪ್ಯಾಕೆಟ್‌ನಲ್ಲಿ ಬಿಸ್ಕೆಟ್ ಕಡಿಮೆ ಇರುವುದನ್ನು ಗಮನಿಸಿದ ಆಲಿ ಅವರು ಅದನ್ನು ತೂಕ ಮಾಡಿದಾಗ 82 ಗ್ರಾಂ ಮಾತ್ರ ಇರುವುದು ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ಬ್ರಿಟಾನಿಯಾ ಕಂಪನಿ ವಿರುದ್ಧ ಆಲಿ ಅವರು, ಕೊಡಗು ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿದ್ದರು. ಸಂಸ್ಥೆ ಮತ್ತು ಗ್ರಾಹಕರ ಎರಡು ಕಡೆ ವಾದ ಪ್ರತಿವಾದ ಆಲಿಸಿದ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ತೀರ್ಪಿನ ಪ್ರಕಾರ ಅನುಚಿತ ವ್ಯಾಪಾರ ಪದ್ಧತಿ ಅನುಸರಿಸಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಬ್ರಿಟಾನಿಯಾ ಇಂಡಸ್ಟ್ರೀಸ್ ದೂರುದಾರರಿಗೆ 10 ಸಾವಿರ ರೂ. ಪರಿಹಾರ ಮೊತ್ತ ಮತ್ತು ಮಾನಸಿಕ ವೇದನೆ ಹಾಗೂ ಖರ್ಚು ವೆಚ್ಚಗಳಿಗಾಗಿ 20 ಸಾವಿರ ರೂ. ಪಾವತಿಸಲು ಆದೇಶ ನೀಡಿದೆ.

ಡಿ.27ರಿಂದ ಕ್ರೀಡಾಪಟುಗಳ ಆಯ್ಕೆ

ಮಡಿಕೇರಿ, ಡಿ.10–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಡೆಯುವ ರಾಜ್ಯ ವಲಯದ ಕ್ರೀಡಾಶಾಲೆ ಹಾಗೂ ವಸತಿ ನಿಲಯಗಳ 2024–25ನೇ ಸಾಲಿನ 8ನೇ ತರಗತಿ ಹಾಗೂ ಪ್ರಥಮ ಪಿಯುಸಿಯ ಪ್ರತಿಭಾನ್ವಿತ ಕ್ರೀಡಾಪಟುಗಳ ಆಯ್ಕೆ ಡಿ.27 ರಿಂದ 29ರವರೆಗೆ ನಡೆಯಲಿದೆ. ಡಿ.27ರಂದು ಪೊನ್ನಂಪೇಟೆ ತಾಲೂಕಿನ ಮಿನಿಕ್ರೀಡಾಂಗಣದಲ್ಲಿ ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕಿನ ಕ್ರೀಡಾಪಟುಗಳ ಆಯ್ಕೆ, ಡಿ.28ರಂದು ಮಡಿಕೇರಿ ತಾಲೂಕಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣ ಹಾಗೂ ಡಿ.29ರಂದು ಕೂಡಿಗೆ ಸರ್ಕಾರಿ ಕ್ರೀಡಾಶಾಲಾ ಕ್ರೀಡಾಂಗಣದಲ್ಲಿ ಸೋಮವಾರಪೇಟೆ ಮತ್ತು ಕುಶಾಲನಗರ ತಾಲೂಕಿನ ವಿದ್ಯಾರ್ಥಿಗಳ ಆಯ್ಕೆ ನಡೆಯಲಿದೆ. ಮಾಹಿತಿಗೆ ಮೊ.ಸಂ: 9902911353 ಅಥವಾ 9480032712 ಅನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 5ರಿಂದ ಗುಂಡಿಕೆರೆ ಮಖಾಂ ಉರೂಸ್

ಪೊನ್ನಂಪೇಟೆ, ಡಿ.10–ಪ್ರತಿವರ್ಷ ನಡೆಯುವ ವಿರಾಜಪೇಟೆ ಸಮೀಪದ ಗುಂಡಿಕೆರೆ ಮಖಾಂ ಉರೂಸ್ ಕಾರ್ಯಕ್ರಮವನ್ನು ಮೇ 5 ರಿಂದ 7ರ ವರೆಗೆ ಹಮ್ಮಿಕೊಳ್ಳಲಾಗಿದೆ. ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಮೂರು ದಿನ ನಡೆಯುವ ಗುಂಡಿಕೆರೆ ಉರೂಸ್ ಅನ್ನು ಅದ್ದೂರಿಯಾಗಿ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಗುಂಡಿಕೆರೆ ಮುಸ್ಲಿಂ ಜಮಾಅತ್ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ..

ಕನ್ನಡಿಗರ ಪರ ಧ್ವನಿ ಎತ್ತಲು ಒಬ್ಬ ಶಾಸಕರೂ ಇಲ್ಲ



ಚಾಮರಾಜನಗರ, ಡಿ.10– ಸದನದೊಳಗೆ ಕನ್ನಡಿಗರ ಪರ ಧ್ವನಿ ಎತ್ತಲು ಒಬ್ಬ ಶಾಸಕರೂ ಇಲ್ಲದಿರುವುದು ಅತ್ಯಂತ ವಿಷಾಧಕರ ಸಂಗತಿಯಾಗಿದೆ ಎಂದು ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷ ಕೆರೆ ಚಳವಳಿ ರಮೇಶಗೌಡ ಬೇಸರ ವ್ಯಕ್ತಪಡಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಭಾನುವಾರ ನಡೆದ ಕರ್ನಾಟಕ ಜನಪರ ವೇದಿಕೆಯ 10ನೇ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ, ನಿವೃತ್ತ ಸೈನಿಕರಿಗೆ ಗೌರವ ಸಮರ್ಪಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಚಳವಳಿ ಹೋರಾಟಗಾರ ವಾಟಾಳ್ ನಾಗರಾಜ್ ಅವರು ಶಾಸಕರಾಗಿದ್ದಾಗ ಮಾತ್ರ ಸದನದೊಳಗೆ ಕನ್ನಡಿಗರ ಪರ ಹೋರಾಟ ಮಾಡುವ ಮೂಲಕ ಕನ್ನಡಪ್ರೇಮ ಮೆರೆದರು. ಪ್ರಸ್ತುತ ದಿನಗಳಲ್ಲಿ ಕನ್ನಡಕ್ಕೆ ಧಕ್ಕೆ ಉಂಟಾದರೆ ಸದನದೊಳಗೆ ಪ್ರಶ್ನೆ ಮಾಡುತ್ತಿಲ್ಲ. ಧ್ವನಿ ಎತ್ತಲು ಒಬ್ಬ ಶಾಸಕನಿಲ್ಲದಿರುವುದು ಅತ್ಯಂತ ನೋವಿನ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ನಮ್ಮ ವೇದಿಕೆಯು ಕಾವೇರಿ, ಮೇಕೆದಾಟು, ಕಳಸಾಬಂಡೂರಿ, ಮಹಾದಾಯಿ ಸೇರಿದಂತೆ 8 ಅಂಶಗಳನ್ನಿಟ್ಟುಕೊಂಡು ಹೋರಾಟ ಮಾಡುತ್ತಿದೆ. ನಮ್ಮ ಹೋರಾಟಕ್ಕೆ ಚಾಮರಾಜನಗರ ಜಿಲ್ಲಾ ಘಟಕ ಸಂಪೂರ್ಣವಾಗಿ ಬೆಂಬಲಕ್ಕೆ ನಿಂತು ಶಕ್ತಿ ತುಂಬುವ ಕೆಲಸ ಮಾಡಿದೆ. ವೇದಿಕೆಯ ಹೋರಾಟ ನಾಡಿನಪರವಾಗಿದ್ದು, ನಾಡು, ನುಡಿ, ಜಲಕ್ಕಾಗಿ ನಿರಂತರ ಹೋರಾಟ ಮಾಡಲಾಗುವುದು ಎಂದರು.

ಭುವನೇಶ್ವರಿ ಭಾವಚಿತ್ರ ಮೆರವಣಿಗೆ: ಚಾಮರಾಜೇಶ್ವರ ದೇವಾಲಯದ ಆವರಣದಿಂದ ಭುವನೇಶ್ವರಿ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು. ಇದೇ ವೇಳೆ ಪರಿಸರಪ್ರೇಮಿ ಸಿ.ಎಂ.ವೆಂಕಟೇಶ್, ಯಳಂದೂರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಯರಿಯೂರು ನಾಗೇಂದ್ರ ಅವರಿಗೆ 'ಕರುನಾಡ ಸಿರಿಗಂಧ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವೇದಿಕೆ ಗೌರವಾಧ್ಯಕ್ಷ ಪಿ.ಲಿಂಗರಾಜು, ವೆಂಕಟರಮಣಸ್ವಾಮಿ, ಜಿಲ್ಲಾಧ್ಯಕ್ಷ ಮಲ್ಲು ಯರಗಂಬಳ್ಳಿ, ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ, ರಾಜ್ಯ ಉಪಾಧ್ಯಕ್ಷರಾದ ಬೆಂಕಿಶ್ರೀಧರ್, ಯೋಗೇಶ್‌ಗೌಡ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರಾಣಿ ಲಿಂಗರಾಜು, ಸತೀಶ್, ಎಚ್.ಎಂ.ಬಸವಣ್ಣ, ನಗರಸಭಾ ಮಾಜಿ ಸದಸ್ಯ ಸೈಯದ್ ಅತೀಕ್, ಪುಟ್ಟಸ್ವಾಮಿ, ಅಶೋಕ್, ಸೋಮಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಶೆಟ್ಟಿ, ರುದ್ರಯ್ಯ, ಕುಮಾರ್, ನಾರಾಯಣ, ಜಿಲ್ಲಾ ಉಪಾಧ್ಯಕ್ಷರಾದ ನಾಗರಾಜು, ಅಶೋಕ, ಸೋಮಣ್ಣ, ಮೋಹನ್ ಕುಮಾರ್ ಹಾಜರಿದ್ದರು.

ಚಂದಕವಾಡಿ ಹೋಬಳಿಯನ್ನು ಚಾ.ನಗರಕ್ಕೆ ಸೇರಿಸಿ

ಸೆಸ್ಕ್ ಜನಸಂಪರ್ಕ ಸಭೆಯಲ್ಲಿ ವಿದ್ಯುತ್ ಗ್ರಾಹಕರ ಮನವಿ



ಚಾಮರಾಜನಗರ, ಡಿ.10– ವಿದ್ಯುತ್ ಸಮಸ್ಯೆ ಹಾಗೂ ಬಿಲ್ ಸಂಬಂಧಿಸಿದಂತೆ ವ್ಯವಹರಿಸಲು ಚಂದಕವಾಡಿ ಹೋಬಳಿಯನ್ನು ಚಾಮರಾಜನಗರ ಸೆಸ್ಕ್ ಉಪವಿಭಾಗಕ್ಕೆ ಸೇರಿಸುವಂತೆ ಸಭೆಯಲ್ಲಿ ವಿದ್ಯುತ್ ಗ್ರಾಹಕರ ಮನವಿ ಮಾಡಿದರು.

ಜಗರದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಉಪವಿಭಾಗದ ಕಚೇರಿಯ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ವಿದ್ಯುತ್ ಗ್ರಾಹಕರಾದ ಗ್ರಾಮ ಪಂಚಾಯಿ ಉಪಾಧ್ಯಕ್ಷ ಮರಿಸ್ವಾಮಿ ಮಾತನಾಡಿ, ವಿದ್ಯುತ್ ಸರಬರಾಜು ಹಾಗೂ ಬಿಲ್ ಪಾವತಿ ಸೇರಿದಂತೆ ಇತರ ಸಮಸ್ಯೆಗಳ ಪರಿಹಾರಕ್ಕೆ ಚಂದಕವಾಡಿ ಸುತ್ತಮುತ್ತಲಿನ ಗ್ರಾಹಕರು 10–15 ಕಿ.ಮೀ. ದೂರದ ಸಂತೇಮರಹಳ್ಳಿ ಉಪವಿಭಾಗಕ್ಕೆ ಹೋಗಬೇಕು. ಇದರಿಂದ ಹೆಚ್ಚು ಸಮಯ ಹಾಗೂ ಹಣ ಖರ್ಚಾಗುತ್ತಿದೆ. ಹೀಗಾಗಿ ಗ್ರಾಹಕರ ಅನುಕೂಲಕ್ಕಾಗಿ ಚಾ.ನಗರಕ್ಕೆ ಸೇರಿಸಬೇಕೆಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕೊಡಗು ಮತ್ತು ಚಾಮರಾಜನಗರ ಸೆಸ್ಕ್ ವೃತ್ತದ ಅಧೀಕ್ಷಕ ಇಂಜನಿಯರ್ ಸೋಮಶೇಖರ್, ಈ ಸಂಬಂಧ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಉಡಿಗಾಲದ ಮಂಜುನಾಥ್ ಮಾತನಾಡಿ, ಈ ಭಾಗದಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ಆಗುತ್ತಿಲ್ಲ. ರಾತ್ರಿ ಸಂಪೂರ್ಣವಾಗಿ ವಿದ್ಯುತ್ ಕಡಿತವಾಗುತ್ತದೆ. 7 ಗಂಟೆ ವಿದ್ಯುತ್ ನೀಡುವುದಾಗಿ ಹೇಳಿ ಮೂರ್ನಾಲ್ಕು ಗಂಟೆ ಮಾತ್ರ ಪೂರೈಸಲಾಗುತ್ತಿದೆ ಇದರಿಂದ ರೈತರ ಫಸಲು ಹಾಳಾಗುತ್ತಿದೆ. ಹೀಗಾಗಿ ಸಮರ್ಪಕ ವಿದ್ಯುತ್ ಪೂರೈಸಬೇಕು ಎಂದು ಮನವಿ ಮಾಡಿದರು.

ರೈತ ಸಂಘದ ಮುಖಂಡ ನಾಗರಾಜು ಮಾತನಾಡಿ, ಜನಸಂಪರ್ಕ ಸಭೆಗೆ ಹೆಚ್ಚಿನ ಗ್ರಾಹಕರು ಹಾಜರಾಗಿಲ್ಲ. ಇದಕ್ಕೆ ಪ್ರಚಾರದ ಕೊರತೆಯೇ ಕಾರಣ. ಗ್ರಾಮೀಣ ಪ್ರದೇಶದಲ್ಲಿ ಕರಪತ್ರ ಹಂಚಿಸಿ ಹೆಚ್ಚು ಪ್ರಚಾರ ಮಾಡಬೇಕು ಹಾಗೂ ಹೋಬಳಿ ಮಟ್ಟದಲ್ಲೂ ಜನಸಂಪರ್ಕ ಸಭೆ ನಡೆಸಬೇಕೆಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ವಸಂತ್ ಕುಮಾರ್, ಈಗಾಗಲೇ ಎಲ್ಲಾ ಪತ್ರಿಕೆಗಳಲ್ಲೂ ಸುದ್ದಿ ಪ್ರಕಟಿಸಲಾಗಿದೆ. ನಮ್ಮ ಕಾರ್ಯಗಳನ್ನು ನಿರ್ವಹಿಸಲಾಗಿದೆ. ಜೊತೆಗೆ ಹರದನಹಳ್ಳಿ ಹಾಗೂ ಸಂತೆಮರಹಳ್ಳಿ ಉಪವಿಭಾಗದಲ್ಲಿ ಜನಸಂಪರ್ಕ ಸಭೆ ನಡೆಸಲಾಗಿದೆ. ಗ್ರಾಹಕರ ಸಮಸ್ಯೆಗಳನ್ನು ಆಲಿಸಿ ಅಗತ್ಯ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಅಲ್ಲದೇ ಐಪಿ ಸೆಟ್ ಹೊಂದಿರುವ ರೈತರು ಸೋಲಾರ್ ಸಂಪರ್ಕ ಪಡೆಯಲು ಸರ್ಕಾರ ಯೋಜನೆ ರೂಪಿಸಿದ್ದು, ಇದಕ್ಕೆ ಕೇಂದ್ರ ಸರ್ಕಾರ ಶೇ.50 ಹಾಗೂ ರಾಜ್ಯ ಸರ್ಕಾರ ಶೇ.30ರಷ್ಟು ಸಬ್ಸಿಡಿ ನೀಡಲಿದೆ. ಈಗಾಗಲೇ ಆಸಕ್ತಿ ಹೊಂದಿರುವ ರೈತರ ಹೆಸರನ್ನು ನೋಂದಾಯಿಸಲಾಗುತ್ತಿದೆ. ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಸಭೆಯಲ್ಲಿ ಲೆಕ್ಕಾಧಿಕಾರಿ ಭಾಸ್ಕರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸುರೇಶ್, ಎಲ್ಲಾ ಶಾಖಾಧಿಕಾರಿಗಳು, ಲೆಕ್ಕಾಧಿಕಾರಿಗಳು ಇದ್ದರು.

ಮಾನವ ಹಕ್ಕುಗಳ ಅರಿವು ಅವಶ್ಯಕ: ಶ್ರೀಕಾಂತ್



ಚಾಮರಾಜನಗರ, ಡಿ.10– ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಮಾನವ ಹಕ್ಕುಗಳ ಕುರಿತು ಅರಿವು ಮೂಡಿಸುವುದು ಅವಶ್ಯಕವಾಗಿದೆ ಎಂದು ರಾಮಸಮುದ್ರ ಪೂರ್ವ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಶ್ರೀಕಾಂತ್ ಹೇಳಿದರು.

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹಿಂಭಾಗದ ಸರ್ಕಾರಿ ವರ್ಗೀಕೃತ ಕಾಲೇಜಿನ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ದಕ್ಷಿಣ ಭಾರತದ ಮಾನವ ಹಕ್ಕುಗಳ ಶಿಕ್ಷಣ ಮತ್ತು ಸಂರಕ್ಷಣಾ ಘಟಕ ಹಾಗೂ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಇಡೀ ವಿಶ್ವಕ್ಕೆ ಮಾದರಯಾಗಿದೆ. ಅದರಲ್ಲಿ ಮಾನವ ಹಕ್ಕುಗಳನ್ನು ಕೊಟ್ಟಿದ್ದಾರೆ. ಭಾರತದ ಪ್ರಜೆಗಳು ಈ ಭೂಮಿಯಲ್ಲಿ ಸಮಾನತೆ, ಸ್ವಾತಂತ್ರ್ಯದಿಂದ ಗೌರಯುತವಾಗಿ ಬದುಕಬೇಕಾದರೆ ಮಾನವ ಹಕ್ಕುಗಳು ಅವಶ್ಯಕವಾಗಿದೆ. ಸಂವಿಧಾನದಡಿ ದೇಶದ ಆಡಳಿತ ನಡೆಯುವುದು ಹಾಗೂ ಎಲ್ಲಾ ಕಾನೂನುಗಳು ರೂಪಿತವಾಗಿದೆ ಎಂದರು.

1948ರ ಡಿ.10ರಂದು ವಿಶ್ವ ಮಾನವಹಕ್ಕುಗಳ ಬಗ್ಗೆ ಒಳಂಬಡಿಕೆ ಮಾಡಿ, ಮಾನವ ಹಕ್ಕು ದಿನ ಆಚರಿಸಲಾಗುತ್ತಿದೆ. ಸಿಕ್ರಂ ಸಂಸ್ಥೆ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿರುವುದು ಸಂತಸದ ವಿಚಾರ. ಸಿಕ್ರಂ ಸಂಸ್ಥೆ ಮಾನವಹಕ್ಕುಗಳ ಉಲ್ಲಂಘನೆಯಾದಂತಹ ಸಂದರ್ಭದಲ್ಲಿ ಪೊಲೀಸ್ ಠಾಣೆವರೆಗೂ ಹೋರಾಟ ಮಾಡಿ, ಪರಿಹಾರ ಕೊಡಿಸುವ ಒಂದು ಉತ್ತಮ ಸೇವಾ ಕೆಲಸ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಿಕ್ರಂ ಸಂಸ್ಥೆಯ ಜಿಲ್ಲಾ ಸಂಯೋಜಕ ಕೆ.ಸಿ.ರೇವಣ್ಣ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಚಿಕ್ಕಬಸವಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜನಹಿತಾಶಕ್ತಿ ಹೋರಾಟ ವೇದಿಕೆಯ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್, ವಕೀಲರಾದ ಎಂ.ಮಹೇಶ್, ಸವಿತಾ, ನಿಲಯಪಾಲಕಿ ಶಿವಮ್ಮ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಒಲೆ ಮಹದೇವುಗೆ ಅಂಬೇಡ್ಕರ್ ಸೇವಾ ಪ್ರಶಸ್ತಿ



ಕೊಳ್ಳೇಗಾಲ, ಡಿ.10–ಭಾರತ ದಲಿತ ಅಕಾಡೆಮಿ ವತಿಯಿಂದ ಗಣ್ಯರಿಗೆ ನೀಡುವ ಪ್ರತಿಷ್ಠಿತ ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಪ್ರಶಸ್ತಿಯನ್ನು ಭಾನುವಾರ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಾತೃಕ ಒಲೆ ಮಹದೇವು ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಹದೇವು ಅವರು ಕೊಳ್ಳೇಗಾಲದ ಹೃದಯ ಭಾಗದಲ್ಲಿ ಒಂದೂವರೆ ಕೋಟಿಗೂ ಅಧಿಕ ಹಣ ವ್ಯಯಿಸಿ ಅಂಬೇಡ್ಕರ್ ಪ್ರತಿಮೆ ನಿರ್ಮಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಮಹದೇವಪ್ಪ, ಕೆ.ಶಿವರಾಂ, ಮಾಜಿ ಸಚಿವ ಎನ್.ಮಹೇಶ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಮಂಜುನಾಥ್, ಕೆಪಿಸಿಸಿ ರಾಜ್ಯ ಕಾರ್ಮಿಕ ಘಟಕದ ಕಾರ್ಯದರ್ಶಿ ಕಿರಣ್ ಸೇರಿದಂತೆ ಅನೇಕ ಗಣ್ಯರು ಒಲೆ ಮಹದೇವು ಕಾರ್ಯಕ್ಕೆ ಶ್ಲಾಘಿಸಿದ್ದರು. ಈ ಸೇವಾ ಕಾರ್ಯ ಗುರುತಿಸಿ ಭಾರತೀಯ ದಲಿತ ಅಕಾಡೆಮಿ ನವದೆಹಲಿಯಲ್ಲಿ ನಡೆಯುವ 39ನೇ ಸಮ್ಮೇಳನದಲ್ಲಿ ಪ್ರಶಸ್ತಿ ಮಾಡಲಾಗಿದೆ.

96 ದಿನ ಪೂರೈಸಿದ ಪ್ರತಿಭಟನೆ



ಚಾಮರಾಜನಗರ, ಡಿ.10–ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ನಡೆಸುತ್ತಿರುವ ಪ್ರತಿಭಟನೆ ಭಾನುವಾರಕ್ಕೆ 96 ದಿನ ಪೂರೈಸಿದೆ. ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಭುವನೇಶ್ವರಿ ವೃತ್ತಕ್ಕೆ ತೆರಳಿ, ಅಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೇಂದ್ರ ಮತ್ತು ರಾಜ್ಯ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ನೀರು ನಿರ್ವಹಣಾ ಮಂಡಳಿ ರದ್ದಾಗುವ ತನಕ ಕರ್ನಾಟಕಕ್ಕೆ ನ್ಯಾಯ ಸಿಗೋಲ್ಲ. ಆಗಾಗಿ ಅದನ್ನು ರದ್ದುಪಡಿಸಬೇಕು. ರಾಜ್ಯ ಸರ್ಕಾರ ಕಾವೇರಿ ನದಿ ನೀರನ್ನು ತಕ್ಷಣ ನಿಲ್ಲಿಸಬೇಕು. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ರಾಜ್ಯಕ್ಕೆ ನ್ಯಾಯ ಒದಗಿಸಿಕೊಡಬೇಕು. ಇಲ್ಲದಿದ್ದರೆ ಹೋರಾಟ ಮುಂದುವರೆಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ.ರಾಜ್ ಗೋಪಾಲ್, ಮಹೇಶ್‌ಗೌಡ, ವೀರಭದ್ರ ತಾಂಡವಮೂರ್ತಿ, ಪ್ರಕಾಶ್, ರಾಜಪ್ಪ, ನಾಗೇಂದ್ರಗೌಡ ಇತರರು ಭಾಗವಹಿಸಿದ್ದರು.

ಚಾಮರಾಜೇಶ್ವರ ದೇವಾಲಯದಲ್ಲಿ ಇಂದು ಅಭಿಷೇಕ

ಚಾಮರಾಜನಗರ, ಡಿ.10– ಕಾರ್ತಿಕ ಮಾಸದ ಕೊನೆಯ ಸೋಮವಾರದ ಪ್ರಯುಕ್ತ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಸಹಸ್ರ ಲಿಂಗಕ್ಕೆ ಸೋಮವಾರ (ಡಿ.11) ಬೆಳಗ್ಗೆ 10 ಗಂಟೆಗೆ ಅಭಿಷೇಕ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ ನಂತರ ಪ್ರಸಾದ ವ್ಯವಸ್ಥೆ ಏರ್ಪಡಿಸಲಾಗಿದೆ. ಬೆಂಗಳೂರಿನ ವಾಸನ್ ಹಾಗೂ ಸಹೋದರರು ಪೂಜಾ ಸೇವಾರ್ಥದಾರರಾಗಿದ್ದು, ಹೆಚ್ಚಿನ ಭಕ್ತರು ಆಗಮಿಸುವಂತೆ ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಹಂಡರಕಳ್ಳಿಯಲ್ಲಿ ಇಂದು ಪೂಜೆ

ಚಾಮರಾಜನಗರ, ಡಿ.10– ತಾಲೂಕಿನ ಹಂಡರಕಳ್ಳಿ ಗ್ರಾಮದ ಸೂರ್ಯಸಿಂಹಾಸನ ಮಠದಲ್ಲಿ ಡಿ.11 ರಂದು ಕಡೆ ಕಾರ್ತಿಕ ಸೋಮವಾರದ ಪೂಜಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 6 ಗಂಟೆಗೆ ಧ್ವಜಾರೋಹಣ, ಸಂಜೆ 5 ಗಂಟೆಗೆ ಮಹಾರುದ್ರಾಭಿಷೇಕ, ರಾತ್ರಿ ದೀಪಾರಾಧನೆ ಹಾಗೂ ಶಿವಭಜನೆ ಏರ್ಪಡಿಸಲಾಗಿದೆ. ಹೆಚ್ಚಿನ ಭಕ್ತರು ಆಗಮಿಸುವಂತೆ ಶ್ರೀ ಮಠದ ವಿದ್ವಾನ್ ಪಟ್ಟದ ಪಂಚಾಕ್ಷರಿಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಬ್ರ್ಯಾಂಡ್ ಮೈಸೂರು ಲೋಗೋ ಬಿಡುಗಡೆ

ಅಂಬಾವಿಲಾಸ ಅರಮನೆ ವಿಶ್ವವಿಖ್ಯಾತಿ ಪಡೆದಿರುವ ಕಾರಣ ಮೈಸೂರು ಎಂದಾಕ್ಷಣ ಇದೇ ಕಣ್ಮುಂದೆ ಬರುತ್ತದೆ. ಜೊತೆಗೆ ಮೈಸೂರು ಸಮೀಪದ ಸೋಮನಾಥಪುರ, ಬೇಲೂರು, ಹಳೇಬೀಡು ಕೂಡ ನಮ್ಮದೇ. ಹೀಗೆ ಸುತ್ತಮುತ್ತಲ ಎಲ್ಲಾ ಪ್ರವಾಸಿ ತಾಣಗಳನ್ನೂ ಪ್ರವಾಸಿಗರಿಗೆ ಪರಿಚಯಿಸುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಮೈಸೂರು ಲೋಗೋ ರೂಪಿಸಿರುವುದು ಒಂದು ಮಹತ್ವದ ಹೆಜ್ಜೆಯಾಗಿದೆ. ಇದನ್ನು ನಾನು ಅತ್ಯಂತ ಸಂತೋಷದಿಂದ ಅನಾವರಣಗೊಳಿಸಿದ್ದೇನೆ. 'ನಮ್ಮ ಪರಂಪರೆ ನಿಮ್ಮ ತಾಣ' ಟ್ಯಾಗ್‌ಲೈನ್ ಕೂಡ ಅತ್ಯಾಕರ್ಷಕವಾಗಿದೆ. ಈ ಉತ್ತಮ ಪ್ರಯತ್ನ ಯಶಸ್ವಿಯಾಗಿ ಪ್ರವಾಸಿಗರು 'ನಿಮ್ಮ ಪರಂಪರೆ ನಮ್ಮ ತಾಣ' ಎಂದು ಪುನರುಚ್ಚರಿಸುವಂತಾಗಲಿ ಎಂದು ಸಚಿವ ಹೆಚ್.ಕೆ.ಪಾಟೀಲ್ ಆಶಿಸಿದರು.

ಪ್ರವಾಸ ದೊಡ್ಡ ಹಬ್ಬ: ಗದಗ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬೀದರ್ ಸೇರಿದಂತೆ ಉತ್ತರ ಕರ್ನಾಟಕ ಭಾಗದಿಂದ ಮೈಸೂರಿಗೆ ಬರುವ ಪ್ರವಾಸಿಗರು, ಪ್ರಯಾಣದ ನಡುವೆಯೇ ಅರ್ಧ ರಾಜ್ಯ ಸುತ್ತಿಕೊಂಡು ಅಲ್ಲಿನ ಪ್ರೇಕ್ಷಣೀಯ ಹಾಗೂ ಪುಣ್ಯ ಕ್ಷೇತ್ರಗಳನ್ನು ನೋಡಿಕೊಂಡು ಬರುತ್ತಾರೆ. ಈ ಸುಧೀರ್ಘ ಪ್ರಯಾಣ, ಪ್ರವಾಸಿಗರಿಗೆ ದೊಡ್ಡ ಹಬ್ಬವೆನಿಸುತ್ತದೆ. ಇದರಲ್ಲಿ ಮೈಸೂರಿನ ಕೊಡುಗೆ ಬಹಳಷ್ಟಿದೆ. ಮೈಸೂರಿನ ಪರಿಸರವಷ್ಟೇ ಅಲ್ಲ, ಇಲ್ಲಿನವರ ಮನಸ್ಸು, ಸತ್ಕಾರ, ಸಂಸ್ಕಾರ, ನಗು ಎಲ್ಲರನ್ನೂ ಆಕರ್ಷಿಸುತ್ತದೆ. ಕುಟುಂಬದೊಂದಿಗೆ ಪ್ರವಾಸಕ್ಕೆ ಬಂದಿದ್ದಾಗ ನನಗೂ ಈ ಅನುಭವವಾಗಿದೆ ಎಂದು ಬಣ್ಣಿಸಿದರು.

ಮೂರ್ತಿಗಳ ತರಲು ಪ್ರಯತ್ನ: ಬೇಲೂರು, ಹಳೇಬೀಡಿನ ಶಿಲ್ಪಕಲೆ ವೈಭವ ಎಲ್ಲರನ್ನೂ ಆಕರ್ಷಿಸುತ್ತದೆ. ಆದರೆ ಅಲ್ಲಿದ್ದ ಅತ್ಯಂತ ಸುಂದರವಾದ ಸುಮಾರು 72 ಮೂರ್ತಿಗಳು ಬ್ರಿಟನ್ ಮ್ಯೂಸಿಯಂನಲ್ಲಿವೆ ಎಂಬ ಮಾಹಿತಿ ಬಂದಿದೆ. ಅವುಗಳನ್ನು ವಾಪಸ್ ತರುವ ನಿಟ್ಟಿನಲ್ಲಿ ಈವರೆಗೆ ಏನೆಲ್ಲಾ ಪ್ರಯತ್ನ ನಡೆದಿದೆ ಅಥವಾ ಪ್ರಯತ್ನವನ್ನೇ ಮಾಡಿಲ್ಲವೋ ಗೊತ್ತಿಲ್ಲ. ಆದರೆ ಕೂಡಲೇ ಪುರಾತತ್ವ ಇಲಾಖೆ ಆಯುಕ್ತರೊಂದಿಗೆ ಈ ಸಂಬಂಧ ಚರ್ಚೆ ನಡೆಸುತ್ತೇನೆ. ಆ ಸುಂದರ ಮೂರ್ತಿಗಳನ್ನು ರಾಜ್ಯಕ್ಕೆ ತರಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಲಿದೆ ಎಂದು ಭರವಸೆ ನೀಡಿದರು.

ಮೂಲ ಸೌಕರ್ಯ ಕಲ್ಪಿಸಿ: ಶಕ್ತಿ ಯೋಜನೆಯ ಮೂಲಕ ಮಹಿಳೆಯರಿಗೆ ಪ್ರವಾಸಕ್ಕೆ ಒಳ್ಳೆಯ ಅವಕಾಶ ಕಲ್ಪಿತವಾಗಿದೆ. ಪ್ರವಾಸಿ ಕ್ಷೇತ್ರಗಳಿಗೆ ಮೂಲ ಸೌಕರ್ಯ ಒದಗಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದ್ದೇವೆ. ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಪ್ರವಾಸೋದ್ಯಮವನ್ನು ಆದ್ಯತಾ ವಲಯವೆಂದು ಪರಿಗಣಿಸಬೇಕು. ಇದು ನಮ್ಮ ನಾಡಿನ ಗೌರವ ಹಾಗೂ ಅಭಿಮಾನದ ಪ್ರಶ್ನೆ. ಇತಿಹಾಸವನ್ನು ಅರಿತವರಿಗೆ ಮಾತ್ರ ಈ ನೆಲದ ಬಗ್ಗೆ ಅಭಿಮಾನ ಮೂಡಲು ಸಾಧ್ಯ. ಪ್ರವಾಸೋದ್ಯಮ ಅಭಿವೃದ್ಧಿಗೆ ಎಲ್ಲರೂ ಜೊತೆಗೂಡಿ ಪ್ರಯತ್ನಿಸೋಣ ಎಂದು ಸಚಿವ ಹೆಚ್.ಕೆ.ಪಾಟೀಲ್ ಮನವಿ ಮಾಡಿದರು.

ಸಮಾರಂಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶಾಸಕರಾದ ರವಿಶಂಕರ್, ದರ್ಶನ್ ಧ್ರುವನಾರಾಯಣ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಓ ಗಾಯತ್ರಿ, ಮೈಸೂರು ನಗರ ಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಪುರಾತತ್ವ ಇಲಾಖೆ ಆಯುಕ್ತ ದೇವರಾಜು, ಡಿಸಿಪಿ ಜಾಹ್ನವಿ, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಹೋಟೆಲ್ಸ್, ಟ್ರಾವೆಲ್ಸ್, ಕೈಗಾರಿಕೆ, ವಾಣಿಜ್ಯ, ಯೋಗ ಸೇರಿದಂತೆ ಪ್ರವಾಸೋದ್ಯಮ ಪಾಲುದಾರ ಕ್ಷೇತ್ರದ ಪ್ರತಿನಿಧಿಗಳು ಭಾಗವಹಿಸಿದ್ದರು.

ಪಾರಂಪರಿಕ ಸ್ಮಾರಕಗಳ ದತ್ತು ನೀಡಲು ಕ್ರಮ

ಪಾರಂಪರಿಕ ಕಟ್ಟಡಗಳಿವೆ. ಆದರೆ ಸರ್ಕಾರವೇ ಅನುದಾನ ನೀಡಿ, ಎಲ್ಲವನ್ನೂ ಸಂರಕ್ಷಣೆ ಮಾಡುತ್ತದೆ ಎನ್ನುವ ತಪ್ಪು ತಿಳುವಳಿಕೆ ಬೇಡ. ಪಾರಂಪರಿಕ ನಿರ್ಮಾಣಗಳ ಸಂರಕ್ಷಣೆಯಲ್ಲಿ ಸಾರ್ವಜನಿಕರ ಆಸಕ್ತಿ ಹಾಗೂ ಪಾಲ್ಗೊಳ್ಳುವಿಕೆ ಅತ್ಯಗತ್ಯ. ರಾಜ್ಯದಲ್ಲಿ 25 ಸಾವಿರಕ್ಕೂ ಹೆಚ್ಚು ಪಾರಂಪರಿಕ ಸ್ಮಾರಕಗಳಿವೆ. ಆದರೆ ಈವರೆಗೆ ಪಾರಂಪರಿಕ ನಿರ್ಮಾಣ ಎಂದು ಘೋಷಿಸಿರುವುದು 880 ಮಾತ್ರ. ಮೈಸೂರಿನಲ್ಲೂ ಘೋಷಿಸದ ಕಟ್ಟಡಗಳೂ ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ರಾಜ್ಯದ 500 ಕಟ್ಟಡಗಳನ್ನು ಪಾರಂಪರಿಕ ನಿರ್ಮಾಣ ಎಂದು ಘೋಷಿಸಿ, ಅವುಗಳ ರಕ್ಷಣೆಗೆ ಸರ್ಕಾರ ಮುಂದಾಗಲಿದೆ ಎಂದರು.

ದತ್ತು ನೀಡಲಾಗುವುದು: ಪಾರಂಪರಿಕ ಸ್ಮಾರಕಗಳನ್ನು ದತ್ತು ನೀಡುವ ಕಾರ್ಯಕ್ರಮ ಆರಂಭಿಸಲಾಗುತ್ತದೆ. ಈ ಸಂಬಂಧ ಚರ್ಚೆ ಹಂತದಲ್ಲೇ ಹಲವರು ಆಸಕ್ತಿ ವ್ಯಕ್ತಪಡಿಸಿದ್ದಾರೆ. ಅಮೆರಿಕಾದಲ್ಲಿ ನೆಲೆಸಿರುವ ಭಾರತೀಯ ಮೂಲದ ಸುಮಾರು 25 ಮಂದಿ ಕರೆ ಮಾಡಿ, ನಮ್ಮ ಊರಿನ ಗುಡಿ, ನಮ್ಮ ಜಿಲ್ಲೆಯ ಕಟ್ಟಡ ನೀಡುವಿರಾ? ಎಂದು ವಿಚಾರಿಸಿದ್ದಾರೆ. ವಿದೇಶದಲ್ಲಿದ್ದರೂ ತಮ್ಮ ಗ್ರಾಮ, ಜಿಲ್ಲೆ, ರಾಜ್ಯ, ದೇಶದ ಬಗ್ಗೆ ಅಪಾರ ಅಭಿಮಾನ ಅವರಲ್ಲಿದೆ. ಸೂಕ್ತ ನಿರ್ವಹಣೆ ಇಲ್ಲದೆ ಹಲವು ಸ್ಮಾರಕಗಳು ದುಸ್ಥಿತಿಯಲ್ಲಿವೆ. ಅವುಗಳ ಸಂರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ದತ್ತು ತೆಗೆದುಕೊಳ್ಳುವವರಿಗೆ ಪ್ರೋತ್ಸಾಹ ನೀಡಲಾಗುವುದು ಎಂದು ತಿಳಿಸಿದರು.

ಈಡಿಗರ ಒಗ್ಗಟ್ಟು ಪ್ರದರ್ಶನ

ಸ್ಥಾಪಿಸಬೇಕು ಸೇರಿದಂತೆ ಹಲವು ಬೇಡಿಕೆಗಳನ್ನು ಸಂಘವು ಇಟ್ಟಿದೆ. ವಿಧಾನಸಭೆ ಅಧಿವೇಶನ ನಡೆಯುತ್ತಿರುವುದರಿಂದ ಬೇಡಿಕೆಗಳ ಕುರಿತು ಘೋಷಣೆ ಮಾಡಲು ಸಾಧ್ಯವಿಲ್ಲ. ಸೆಷನ್ ಮುಗಿದ ಮೇಲೆ ಸಂಘದ ಪದಾಧಿಕಾರಿಗಳು ನನ್ನನ್ನು ಭೇಟಿ ಯಾಗಲಿ. ಭರವಸೆಗಳನ್ನು ಈಡೇರಿಸಲು ಸಿದ್ಧ ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

ವರ್ಣರಂಜಿತ ರಾಜಕಾರಣಿ ಮತ್ತು ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ, ವರನಟ ಡಾ.ರಾಜ್‌ಕುಮಾರ್, ಕರ್ನಾಟಕ ರತ್ನ ಪುನೀತ್ ರಾಜ್‌ಕುಮಾರ್, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತಂದ ಜನಾರ್ದನ ಪೂಜಾರಿ, ಭೂ ಸುಧಾರಣೆಗಳಿಗಾಗಿ ಹೋರಾಟಗಳನ್ನು ನಡೆಸಿದ ಹಿರಿಯ ರಾಜಕಾರಣಿ ಕಾಗೋಡು ತಿಮ್ಮಪ್ಪ ಸೇರಿದಂತೆ ಸಮುದಾಯದ ಅನೇಕ ಧುರೀಣರ ಸಾಧನೆಗಳನ್ನು ಮೆಲುಕು ಹಾಕಲಾಗಿತು.

ಸೋಲೂರಿನ ವಿಖ್ಯಾತನಂದ ಸ್ವಾಮೀಜಿಯವರು ಮಾತನಾಡಿ, 1995ರಲ್ಲಿ ಇದೇ ಮೈದಾನದಲ್ಲಿ ನಡೆದ ಈಡಿಗ ಸಮಾವೇಶದಲ್ಲಿ ಅಂದು ಭಾಗಿಯಾಗಿದ್ದೆ. ಇಂದು ನಮ್ಮದೇ ನೇತೃತ್ವದಲ್ಲಿ ಕಾರ್ಯಕ್ರಮ ಆಗುತ್ತಿರುವುದು ತುಂಬಾ ಸಂತೋಷ ತಂದಿದೆ. ಈ ಸಮಾವೇಶದ ಮೂಲಕ ಸಮಾಜದ ಅಭ್ಯುದಯ ಆರಂಭವಾಗಬೇಕು ಎಂದು ಆಶಿಸಿದರು. ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ಮಾತನಾಡಿ, ಈ ಸಮಾಜ ಹಿಂದುಳಿದಿದೆ. ನಮ್ಮದೇ ಆದ ಸರ್ಕಾರ ಬಂದಿದೆ. ನಮ್ಮದೇ ಮುಖ್ಯಮಂತ್ರಿಗಳಿದ್ದಾರೆ. ಈ ಸರ್ಕಾರ ನಮ್ಮ ಪರವಾಗಿದೆ. ನಮ್ಮ ಸಮಾಜವನ್ನು ಎತ್ತರಕ್ಕೆ ಕೊಂಡೊಯ್ಯಬೇಕು ಎಂದರು. ಮಾಜಿ ಸಚಿವ ಎಚ್.ಹಾಲಪ್ಪ ಮಾತನಾಡಿ, ಹಕ್ಕೊತ್ತಾಯ ಮಾಡಲು ಅಧಿಕಾರದಲ್ಲಿ ಇರುವವರನ್ನು ಕರೆದಿದ್ದೇವೆ. ಇದು ಭಿಕ್ಷೆಯಲ್ಲ; ನಮ್ಮ ಹಕ್ಕು. ನಮ್ಮ ಸಮಾಜದಲ್ಲಿ ಮೂಲಭೂತ ಸಮಸ್ಯೆಗಳಿವೆ. ಡಿ.ಕೆ.ಶಿವಕುಮಾರ್ ಅವರನ್ನು ಟ್ರಬಲ್ ಶೂಟರ್ ಎನ್ನುತ್ತಾರೆ. ನಮ್ಮ ಸಮಸ್ಯೆಗಳನ್ನು ಹೋಗಲಾಡಿಸಬೇಕು ಎಂದರು.

ಮಾಜಿ ಸಚಿವ ಮಾಲಿಕಯ್ಯ ಗುತ್ತೇದಾರ್ ಮಾತನಾಡಿ, ಕಾಂತರಾಜ ಆಯೋಗದ ವರದಿಯನ್ನು ಬೇಗನೇ ಬಹಿರಂಗಪಡಿಸಬೇಕು. ಆಗ ಹಿಂದುಳಿದ ಸಮುದಾಯದ ಸಮಸ್ಯೆಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಯಾವ ಪಕ್ಷ ನಮಗೆ ಸ್ಪಂದಿಸುತ್ತದೆಯೋ ಅದಕ್ಕೆ ಸಮುದಾಯ ಚಿರ ಋಣಿಯಾಗಿರಬೇಕಾಗುತ್ತದೆ ಎಂದು ಘೋಷಿಸಿದರು.

ಮಾಜಿ ಸಂಸದ ವಿನಯ್‌ಕುಮಾರ್ ಸೊರಕೆ ಮಾತನಾಡಿ, ದೇವಾಲಯಕ್ಕೆ ಪ್ರವೇಶ ಇಲ್ಲದೆ ಇರುವಾಗ ಬ್ರಹ್ಮಶ್ರೀ ನಾರಾಯಣ ಗುರುಗಳು ದೇವಸ್ಥಾನವನ್ನು ನಿರ್ಮಿಸಿ, ಇಡೀ ಸಮಾಜಕ್ಕೆ ಬೆಳಕು ಕೊಡುವ ಕೆಲಸವನ್ನು ಮಾಡಿದರು. ಈಡಿಗರು ಮತ್ತು ಬಿಲ್ಲವರು ಅಣ್ಣತಮ್ಮಂದಿರಾಗಿದ್ದೇವೆ. ನಾವೆಲ್ಲ ಒಂದಾಗಿ ಸಾಗುತ್ತಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷರಾದ ಡಾ.ಎಂ.ತಿಮ್ಮೇಗೌಡ ಅವರು ಅಧ್ಯಕ್ಷತೆ ವಹಿಸಿ ತಮ್ಮ ಬೇಡಿಕೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಲ್ಲಿಸಿದರು. 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ನಿರ್ದೇಶಕರಾದ ತಿಲಕ್‌ಕುಮಾರ್, ಹೊಸಪೇಟೆ ಶಾಸಕ ಗವಿಯಪ್ಪ, ಚಲನಚಿತ್ರ ಕ್ಷೇತ್ರದ ಚಿನ್ನೇಗೌಡ, ಸೋಲೂರಿನ ವಿಖ್ಯಾತಾನಂದ ಸ್ವಾಮೀಜಿ, ಧರ್ಮಸ್ಥಳ ಶ್ರೀರಾಮ ಕ್ಷೇತ್ರದ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ನಿಟ್ಟೂರಿನ ರೇಣುಕಾನಂದ ಸ್ವಾಮೀಜಿ, ಕಾರ್ತಿಕೇಯ ಮಠದ ಯೋಗೇಂದ್ರ ಅವಧೂತರು, ನಿಪ್ಪಾಣಿಯ ಅರುಣಾನಂದ ಸ್ವಾಮೀಜಿ, ಸಿಗಂದೂರು ಶ್ರೀಕ್ಷೇತ್ರದ ಧರ್ಮದರ್ಶಿ ರಾಮಪ್ಪ, ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಟಿ.ಮೋಹನ್ ದಾಸ್, ನಟ ಸಾಧುಕೋಕಿಲ ಸೇರಿದಂತೆ ನೂರಾರು ಮುಖಂಡರು, ರಾಜಕಾರಣಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು. ಸಾಗರೋಪಾದಿಯಲ್ಲಿ ಜನ ಭಾಗಿಯಾಗಿದ್ದರು.

ಟಿಕೆಟ್ ಆಫರ್ ನೀಡಿದ ಡಿಕೆಶಿ

ಎಲ್ಲರಿಗೂ ಸಿಗಲ್ಲ ಎಂದು ಹೇಳಿದ್ದೇನೆ. ಅವರ ನಿರ್ಧಾರಕ್ಕೆ ಎದುರು ನೋಡುತ್ತಿದ್ದೇನೆ ಎಂದರು. ನಂತರ ಮಾತನಾಡಿದ ಶಿವರಾಜ್‌ಕುಮಾರ್, ನಮ್ಮದೇನಿದ್ದರೂ ಮೇಕಪ್ ಹಾಕೋದು ಸಿನಿಮಾ ಮಾಡೋದು. ನಾನು ಎಂದಿಗೂ ರಾಜಕೀಯಕ್ಕೆ ಬರೋಲ್ಲ. ನಮ್ಮ ತಂದೆ ಬಣ್ಣ ಹಚ್ಚಿ ನಟನೆ ಮಾಡುವುದನ್ನು ಕೇಳಿ ಕೊಟ್ಟಿದ್ದಾರೆ. ಅದೇ ಸಾಕು ನಮಗೆ. ನಮ್ಮ ತಂದೆ ಕೊಟ್ಟಿರುವ ಬಳುವಳಿ ಬಣ್ಣ ಹಚ್ಚೋದನ್ನು ಮುಂದುವರಿಸಿಕೊಂಡು ಹೋಗುತ್ತೇನೆ. ರಾಜಕೀಯ ನಮಗೆ ಬೇಡ ಎಂದರು. ಆದರೆ ಮಾಜಿ ಮುಖ್ಯಮಂತ್ರಿ ದಿವಂಗತ ಬಂಗಾರಪ್ಪ ಅವರ ಮಗಳು ನಮ್ಮನೆ ಸೊಸೆಯಾಗಿದ್ದಾರೆ. ಗೀತಾ ಬೇಕಾದರೆ ರಾಜಕೀಯಕ್ಕೆ ಹೋಗಲಿ, ಹೆಂಡತಿ ಇಷ್ಟಪಟ್ಟರೆ ಅವರಿಗೆ ಸಪೋರ್ಟ್ ಮಾಡೋದು ಗಂಡನ ಕೆಲಸ. ಅವರು ಚುನಾವಣೆಗೆ ನಿಲ್ಲುತ್ತಾರೆಂದರೆ ಅವರ ಹಿಂದೆ ನಿಂತು ಬೆಂಬಲ ಕೊಡುತ್ತೇನೆ ಎಂದು ಶಿವಣ್ಣ ಹೇಳಿದರು.

ಮೈಸೂರಲ್ಲಿ ಕ್ಯಾರಲ್ ಗೀತ ಗಾಯನ ಸ್ಪರ್ಧೆ

ನಾಲ್ಕು ಸಾವಿರ ಮಕ್ಕಳಿಂದ ಗಾಯನ





ಮೈಸೂರಿನ ಸಿದ್ಧಾರ್ಥನಗರದ ಟೆರೇಷಿಯನ್ ಕಾಲೇಜು ಸಭಾಂಗಣದಲ್ಲಿ ಭಾನುವಾರ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಕ್ಯಾರಲ್ ಗೀತ ಗಾಯನ ಸ್ಪರ್ಧೆಯನ್ನು ಧರ್ಮಸಭೆಯ ರೆ. ಡಾ.ಬರ್ನಾರ್ಡ್ ಮೊರಾಸ್ ಉದ್ಘಾಟಿಸಿದರು. 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಈ ವೇಳೆ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಕ್ಯಾರಲ್ ಗೀತ ಗಾಯನದಲ್ಲಿ ಪಾಲ್ಗೊಂಡಿರುವ ಮಕ್ಕಳನ್ನು ಕಾಣಬಹುದು.

ಮೈಸೂರು,ಡಿ.10(ಎಂಟಿವೈ)– ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಮೈಸೂರಿನ ಸಿದ್ಧಾರ್ಥನಗರದ ಟೆರೆಷಿಯನ್ ಕಾಲೇಜು ಸಭಾಂಗಣದಲ್ಲಿ ಭಾನುವಾರ ಕಾರ್ಮೆಲ್ ಕ್ಯಾಥೊಲಿಕ್ ಅಸೋಸಿಯೇಷನ್ ಆಯೋಜಿಸಿದ್ದ ಕ್ಯಾರಲ್ ಗೀತ ಗಾಯನ ಸ್ಪರ್ಧೆಯಲ್ಲಿ ವಿವಿಧ ಶಾಲಾ–ಕಾಲೇಜುಗಳ 4 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿ ಕ್ರಿಸ್‌ಮಸ್ ಗೀತೆ ಹಾಡುವ ಮೂಲಕ ಗಮನ ಸೆಳೆದರು.

ಕ್ಯಾರಲ್ ಗೀತೆಗಳ ಗಾಯನ ಸ್ಪರ್ಧೆಯನ್ನು ಧರ್ಮಸಭೆಯ ರೆ. ಡಾ.ಬರ್ನಾರ್ಡ್ ಮೊರಾಸ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಕ್ರಿಸ್‌ಮಸ್ ಅಂಗವಾಗಿ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಸಂಸ್ಥೆಯ ಆಯೋಜಿಸಿರುವ ಕ್ಯಾರಲ್ ಗೀತ ಗಾಯನದಿಂದ ಏಸುಕ್ರಿಸ್ತನ ಆಶೀರ್ವಾದಕ್ಕೆ ಪಾತ್ರವಾಗುತ್ತಾರೆ. ಕ್ರಿಸ್‌ಮಸ್ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲೆಡೆ ಸಂಭ್ರಮ ಮನೆ ಮಾಡಿದೆ. ಮುಂಬರುವ ವರ್ಷಗಳಲ್ಲಿ ಕ್ಯಾರಲ್ ಗೀತ ಗಾಯನ ಇನ್ನಷ್ಟು ಸಂಭ್ರಮದಿಂದ ಆಯೋಜಿಸಲಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಮಾತನಾಡಿ, ಕ್ಯಾರಲ್ ಗೀತ ಗಾಯನ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಮಕ್ಕಳ ಪೋಷಕರು ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ನೀಡಲು ಬಂದಿರುವುದು ಶ್ಲಾಘನೀಯ. ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ನಡೆಸುತ್ತಿರುವ ಕ್ಯಾರಲ್ ಗೀತ ಗಾಯನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಮಕ್ಕಳು ಸಂಭ್ರಮದಿಂದ ಕ್ರಿಸ್‌ಮಸ್ ಗೀತೆ ಹಾಡಲು ಸಜ್ಜಾಗಿರುವುದು ಕಂಡರೆ ಸಂತೋಷವಾಗುತ್ತದೆ. ಕಳೆದ 30 ವರ್ಷದಿಂದ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಕ್ಯಾರಲ್ ಗೀತ ಗಾಯನ ಸ್ಪರ್ಧೆ ನಡೆಸುತ್ತಾ ಬಂದಿರುವುದು ಶ್ಲಾಘನೀಯ ಎಂದರು.

ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಕ್ಯಾರಲ್ ಗೀತ ಗಾಯನ ಸ್ಪರ್ಧೆಯಲ್ಲಿ ಈ ಬಾರಿ 102 ತಂಡ ಪಾಲ್ಗೊಂಡಿದ್ದವು. ಒಂದು ತಂಡದಲ್ಲಿ 30 ರಿಂದ 40 ಮಂದಿ ಗಾಯಕರಿದ್ದರು. ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳು ವಿದ್ಯಾರ್ಥಿಗಳು ಪ್ರತ್ಯೇಕ ವಿಭಾಗದಲ್ಲಿ ನಡೆದ ಸ್ಪರ್ಧೆಯಲ್ಲಿ ಕ್ರಿಸ್‌ಮಸ್ ಗೀತೆಗಳನ್ನು ಹಾಡಿ ಗಮನ ಸೆಳೆದರು. ಪ್ರತಿಯೊಂದು ತಂಡದ ಸದಸ್ಯರು ಪ್ರತ್ಯೇಕ ಬಣ್ಣದ ಸಮವಸ್ತ್ರ ಹಾಗೂ ಸಾಂತಾಕ್ಲಾಸನ ಟೋಪಿ ಧರಿಸಿ ಗೀತೆ ಹಾಡುವ ಮೂಲಕ ಎಲ್ಲರ ಮನಸೂರೆಗೊಂಡರು. ಕಾರ್ಯಕ್ರಮದಲ್ಲಿ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಸಲಹೆಗಾರ ರೆಫಾ.ರಿಜೊ ಥಾಮಸ್ ಹಾಗೂ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಪ್ರೊಜೋಸೆಫ್ ಮ್ಯಾಥ್ಯೂ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕ್ಯಾರಲ್ ಗೀತ ಗಾಯನದಲ್ಲಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಚಾಂಪಿಯನ್

ಮೈಸೂರು, ಡಿ.10(ಎಂಕೆ)– 31ನೇ ಕ್ಯಾರಲ್ ಗೀತೆಗಳ ಗಾಯನ ಸ್ಪರ್ಧೆಯಲ್ಲಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಇಂಟರ್‌ನ್ಯಾಷನಲ್ ಚಾಂಪಿಯನ್ ಆಯಿತು.

ನಗರದ ಟೆರೇಷಿಯನ್ ಕಾಲೇಜು ಸಭಾಂಗಣದಲ್ಲಿ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಕ್ಯಾರಲ್ ಗೀತೆಗಳ ಗಾಯನ ಸ್ಪರ್ಧೆಯಲ್ಲಿ ಉತ್ತಮ ಕ್ಯಾರಲ್ ಗಾಯನ ಮೂಲಕ ಪ್ರಮುಖ ಮೂರು ವಿಭಾಗದಲ್ಲಿ ಬಹುಮಾನ ಗೆದ್ದ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಇಂಟರ್‌ನ್ಯಾಷನಲ್ ಚಾಂಪಿಯನ್ ಪ್ರಶಸ್ತಿ ಪಡೆಯಿತು.



12 ವಿಭಾಗಗಳಲ್ಲಿ ನಡೆದ ಸ್ಪರ್ಧೆಗಳಲ್ಲಿ ಮೊದಲ **ಕಿಂಡರ್ ಗಾರ್ಡನ್ ವಿಭಾಗ** (ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಗಾಯನ)ದಲ್ಲಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಇಂಟರ್‌ನ್ಯಾಷನಲ್ ಪ್ರಥಮ, ಗುಡ್‌ಶೆಫರ್ಡ್ ಕಾನ್ವೆಂಟ್ ಇಂಗ್ಲಿಷ್ ನರ್ಸರಿ ವಿಭಾಗ ದ್ವಿತೀಯ, ಜಯಲಕ್ಷ್ಮಿಪುರಂ ಸೆಂಟ್ ಜೋಸೆಫ್ ಸ್ಕೂಲ್ (ಸಿಬಿಎಸ್‌ಸಿ) ತೃತೀಯ ಬಹು ಮಾನ ಗೆದ್ದರೆ, **1 ರಿಂದ 4ನೇ ತರಗತಿ ವಿಭಾಗ**(ಕನ್ನಡ ಮತ್ತು ಇಂಗ್ಲಿಷ್)ದಲ್ಲಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಇಂಟರ್‌ನ್ಯಾಷನಲ್ ಪ್ರಥಮ, ಎಕ್ಸೆಲ್ ಪಬ್ಲಿಕ್ ಸ್ಕೂಲ್ ದ್ವಿತೀಯ ಹಾಗೂ ಪ್ರೆಸೆಂಟೇಷನ್ ಪಬ್ಲಿಕ್ ಸ್ಕೂಲ್ ತೃತೀಯ ಬಹುಮಾನ ಪಡೆಯಿತು.

5 ರಿಂದ 7ನೇ ತರಗತಿ ವಿಭಾಗ(ಇಂಗ್ಲಿಷ್)ದಲ್ಲಿ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಪ್ರಥಮ, ಫ್ಲೋಸ್ ಕಾರ್ಮೆಲ್ ಕಾನ್ವೆಂಟ್ ಸ್ಕೂಲ್ ದ್ವಿತೀಯ, ಐಡಿಯಲ್ ಜಾವಾ ರೋಟರಿ ಸ್ಕೂಲ್ ತೃತೀಯ ಬಹುಮಾನ ಗೆದ್ದರೆ, **5 ರಿಂದ 7ನೇ ತರಗತಿ ವಿಭಾಗ(ಕನ್ನಡ)**ದಲ್ಲಿ ಪ್ರೆಸೆಂಟೇಷನ್ ಪಬ್ಲಿಕ್ ಸ್ಕೂಲ್ ಪ್ರಥಮ, ಜಯಲಕ್ಷ್ಮಿಪುರಂ ಸೆಂಟ್ ಜೋಸೆಫ್ ಸ್ಕೂಲ್(ಸಿಬಿಎಸ್‌ಇ) ದ್ವಿತೀಯ ಹಾಗೂ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್(ಮಥಿಯಾಸ್ ಕ್ಯಾಂಪಸ್) ತೃತೀಯ ಬಹುಮಾನ ಗೆದ್ದಿತು.

8 ರಿಂದ 10ನೇ ತರಗತಿ ವಿಭಾಗ(ಇಂಗ್ಲಿಷ್)ದಲ್ಲಿ ಗುಡ್‌ಶೆಫರ್ಡ್ ಕಾನ್ವೆಂಟ್ ಹೈಸ್ಕೂಲ್ ಪ್ರಥಮ, ವಿಜಯನಗರದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ದ್ವಿತೀಯ, ನ್ಯಾಷನಲ್ ಪಬ್ಲಿಕ್ ಸ್ಕೂಲ್ ಇಂಟರ್‌ನ್ಯಾಷನಲ್ ತೃತೀಯ ಸ್ಥಾನ ಪಡೆದರೆ, **8 ರಿಂದ 10ನೇ ತರಗತಿ ವಿಭಾಗ(ಕನ್ನಡ)**ದಲ್ಲಿ ಇಲವಾಲದ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಪ್ರಥಮ, ಗುಡ್‌ಶೆಫರ್ಡ್ ಕಾನ್ವೆಂಟ್ ಸ್ಕೂಲ್ ದ್ವಿತೀಯ ಹಾಗೂ ಪ್ರೆಸೆಂಟೇಷನ್ ಪಬ್ಲಿಕ್ ಸ್ಕೂಲ್ ತೃತೀಯ ಸ್ಥಾನ ಪಡೆಯಿತು.

ಪಿಯು ಕಾಲೇಜು ವಿಭಾಗ(ಕನ್ನಡ ಮತ್ತು ಇಂಗ್ಲಿಷ್)ದಲ್ಲಿ ಸೆಂಟ್ ಫಿಲೋಮಿನಾ ಪಿಯು ಕಾಲೇಜ್ ಪ್ರಥಮ, ಜಯಲಕ್ಷ್ಮಿಪುರಂ ಸೆಂಟ್ ಜೋಸೆಫ್ ಪಿಯು ಕಾಲೇಜು ದ್ವಿತೀಯ, ಟೆರೆಷಿಯನ್ ಪಿಯು ಕಾಲೇಜು ತೃತೀಯ ಬಹುಮಾನ ಪಡೆದರೆ, **ಯುಜಿ, ಪಿಜಿ ವಿಭಾಗ(ಇಂಗ್ಲಿಷ್)**ದಲ್ಲಿ ಕೃಪಾಲಯ ಇನ್ಸ್ಟಿಟ್ಯೂಟ್ ಆಫ್ ಫಿಲಾಸಫಿ ಅಂಡ್ ರಿಲಿಜನ್ ಪ್ರಥಮ, ಪುಷ್ಪಾಶ್ರಮ ದ್ವಿತೀಯ ಹಾಗೂ ಜಯಲಕ್ಷ್ಮಿಪುರಂ ಸೆಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು ತೃತೀಯ ಬಹುಮಾನ ಪಡೆಯಿತು. ಹಾಗೆಯೇ **ಯುಜಿ, ಪಿಜಿ ವಿಭಾಗ(ಕನ್ನಡ)**ದಲ್ಲಿ ಕೃಪಾಲಯ ಇನ್ಸ್ಟಿಟ್ಯೂಟ್ ಆಫ್ ಫಿಲಾಸಫಿ ಅಂಡ್ ರಿಲಿಜನ್ ಪ್ರಥಮ, ಸೆಂಟ್ ಫಿಲೋಮಿನಾ ಡಿಗ್ರಿ ಕಾಲೇಜ್ ದ್ವಿತೀಯ, ಪುಷ್ಪಾಶ್ರಮ ತೃತೀಯ ಬಹುಮಾನ ಪಡೆಯಿತು.

ಚರ್ಚ್‌ಗಳ ವಿಭಾಗ(ಇಂಗ್ಲಿಷ್)ದಲ್ಲಿ ಬಾರ್ತಲೋಮಿಯಾ ಚರ್ಚ್ ಪ್ರಥಮ, ಸೆಂಟ್ ಜಾನ್‌ಪೌನ್ ಸೆಕೆಂಡ್ ಚರ್ಚ್ ದ್ವಿತೀಯ, ಬೆಳವಾಡಿ ಚರ್ಚ್ ತೃತೀಯ, **ಚರ್ಚ್‌ಗಳ ವಿಭಾಗ(ಕನ್ನಡ)**ದಲ್ಲಿ ಜಯಲಕ್ಷ್ಮಿಪುರಂ ಸೆಂಟ್ ಜೋಸೆಫ್ ಚರ್ಚ್ ಪ್ರಥಮ, ಸಿಎಸ್‌ಐ ಏಸು ಕೃಪಾಲಯ ಚರ್ಚ್ ದ್ವಿತೀಯ ಹಾಗೂ ಪುಷ್ಪಗಿರಿ ಇನ್‌ಫಾಂಟ್ ಜೀಸಸ್ ಚರ್ಚ್ ತೃತೀಯ ಬಹುಮಾನ ಪಡೆದುಕೊಂಡಿತು. **ಪ್ರೊಫೆಷನಲ್ ವಿಭಾಗ(ಕನ್ನಡ ಮತ್ತು ಇಂಗ್ಲಿಷ್)**ದಲ್ಲಿ ಸೇಂಟ್ ತೆರೇಸಾ ಆಫ್ ಕಲ್ಕತ್ತಾ ಚರ್ಚ್ ಪ್ರಥಮ, ಬನ್ನಿಮಂಟಪದ ಸೆಂಟ್ ಜೋಸೆಫ್ ಕಾಲೇಜ್ ಆಫ್ ನರ್ಸಿಂಗ್ ದ್ವಿತೀಯ, ಜಯಲಕ್ಷ್ಮಿಪುರಂ ಸೆಂಟ್ ಜೋಸೆಫ್ ಸ್ಕೂಲ್(ಸಿಬಿಎಸ್‌ಸಿ) ತೃತೀಯ ಬಹುಮಾನ ಗೆದ್ದುಕೊಂಡಿತು.

ಕ್ರಿಸ್‌ಮಸ್ ಶುಭಹಾರೈಕೆ: ವಿಜೇತ ಶಾಲಾ–ಕಾಲೇಜು ತಂಡಗಳಿಗೆ ಬಹುಮಾನ ವಿತರಿಸಿ, ಸಮಾರೋಪ ಭಾಷಣ ಮಾಡಿದ ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕ್ರಿಸ್‌ಮಸ್ ಹಬ್ಬದ ಶುಭಾಶಯ ತಿಳಿಸಿದರು. ಮಂಡ್ಯ ಧರ್ಮಪ್ರಾಂತ್ಯದ ಬಿಷಪ್ ಸೆಬಾಸ್ಟಿಯನ್ ಅದಯಂತ್ರತ್, ಮೈಸೂರು ಪ್ರಾಂತೀಯ ಸೆಂಟ್ ಪೌಲ್ಸ್ ಪ್ರಾವಿನ್ ಆಗ್ನೆಸ್ ಪಯಂಪಲ್ಲಿಲ್, ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಜೋಸೆಫ್ ಮ್ಯಾಥ್ಯೂ, ಕಾರ್ಯದರ್ಶಿ ಸಂತೋಷ್ ಜೋಸೆಫ್, ಸಂಚಾಲಕ ಜೋಸೆಫ್ ಚಕೋ ಸೇರಿದಂತೆ ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಪದಾಧಿಕಾರಿಗಳು, ಟೆರೇಷಿಯನ್ ಕಾಲೇಜು ಸಿಬ್ಬಂದಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೂಚ್ ಬೆಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿ

ಕರ್ನಾಟಕಕ್ಕೆ 183 ರನ್ ಟಾರ್ಗೆಟ್ ನೀಡಿದ ಉತ್ತರಪ್ರದೇಶ

33 ರನ್‌ಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ಕರ್ನಾಟಕ

ಮೈಸೂರು, ಡಿ.10(ಎಂಟಿವೈ)– ಕರ್ನಾಟಕ–ಉತ್ತರ ಪ್ರದೇಶದ ನಡುವಿನ ಕೂಚ್ ಬೆಹಾರ್ ಟ್ರೋಫಿ ರಾಷ್ಟ್ರೀಯ ಪಂದ್ಯಾವಳಿಯ ಪಂದ್ಯದ ಮೂರನೇ ದಿನದ ಆಟದಲ್ಲಿ ಉತ್ತರ ಪ್ರದೇಶ ಎರಡನೇ ಇನ್ನಿಂಗ್ಸ್‌ನಲ್ಲಿ 177 ರನ್‌ಗೆ ಆಲೌಟಾದರೆ, 183 ರನ್ ಗುರಿ ಬೆನ್ನತ್ತಿದ ಕರ್ನಾಟಕ ದಿನದ ಅಂತ್ಯಕ್ಕೆ ಪ್ರಮುಖ 5 ವಿಕೆಟ್ ಕಳೆದುಕೊಂಡು 33 ರನ್ ಗಳಿಸಿ ಸಂಕಷ್ಟದ ಸ್ಥಿತಿಯಲ್ಲಿ ಸಿಲುಕಿದೆ.



ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನಾಲ್ಕು ದಿನ ಪಂದ್ಯದಲ್ಲಿ ಶನಿವಾರ ದಿನದ ಅಂತ್ಯಕ್ಕೆ ಎರಡನೇ ಇನ್ನಿಂಗ್ಸ್‌ನಲ್ಲಿ 23 ಓವರ್‌ನಲ್ಲಿ 3 ವಿಕೆಟ್ ಕಳೆದುಕೊಂಡು 47 ರನ್ ಗಳಿಸಿದ್ದ ಉತ್ತರ ಪ್ರದೇಶ ಮೂರನೇ ದಿನವಾದ ಭಾನುವಾರ ಕರ್ನಾಟಕ ಬೌಲರ್‌ಗಳ ದಾಳಿಗೆ ತತ್ತರಿಸಿತು.

ಇಂದು ಬೆಳಗ್ಗೆ ಇನ್ನಿಂಗ್ಸ್ ಮುಂದುವರೆಸಿದ ಉತ್ತರ ಪ್ರದೇಶ ತಂಡದ ಮೊತ್ತ 97 ರನ್ ಆಗಿದ್ದಾಗ 125 ಎಸೆತ ಎದುರಿಸಿ 5 ಬೌಂಡರಿಯೊಂದಿಗೆ 48 ರನ್ ಗಳಿಸಿದ್ದ ಕಾವ್ಯ ಟಿಯೋಟಿಯ, ಧ್ರುವ ಪ್ರಭಾಕರ್ ಬೌಲಿಂಗ್‌ನಲ್ಲಿ ಕಾರ್ತಿಕೇಯಗೆ ಕ್ಯಾಚ್ ನೀಡಿ ಔಟಾದರು. ಉತ್ತಮ ಪ್ರದರ್ಶನ ಭರವಸೆ ಮೂಡಿಸಿದ್ದ ಸುಶಾಂತ್ 141 ಎಸೆತದಲ್ಲಿ 4 ಬೌಂಡರಿ ಬಾರಿಸಿ 29 ರನ್ ಗಳಿಸಿದ್ದಾಗ ಹಾರ್ದಿಕ್ ರಾಜ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ನಿರ್ಗಮಿಸಿದರು. ನಂತರ ಕೆಲ ಸಮಯ ವಿಕೆಟ್ ಕಾಯ್ದುಕೊಂಡು ನಿಧಾನಗತಿಯಲ್ಲಿ ರನ್ ಹೊಡೆಯುತ್ತಿದ್ದ ವಿಕೆಟ್ ಕೀಪರ್ ಅಕ್ಷಯ್ ಧುಬೆ 57 ಎಸೆತದಲ್ಲಿ 11 ರನ್ ಗಳಿಸಿದ್ದಾಗ ಕ್ರಿಶಿವ್ ಬಜಾಜ್ ಕ್ಯಾಚ್‌ನೀಡಿ ಹಾರ್ದಿಕ್ ರಾಜ್‌ಗೆ ಎರಡನೆ ವಿಕೆಟ್ ಒಪ್ಪಿಸಿದರು. ಆಗ ಉತ್ತರ ಪ್ರದೇಶದ ತಂಡ 66 ಓವರ್‌ನಲ್ಲಿ 6 ವಿಕೆಟ್ ನಷ್ಟಕ್ಕೆ 112 ರನ್ ಕಲೆ ಹಾಕಿತ್ತು.

ನಂತರ 31 ರನ್‌ಗಳಿಸಿದ್ದ ಶುಭಂ ಮಿಶ್ರ ರನೌಟ್ ಆದರೆ, ಆರುಶ್ ಗೋಲ್ 22ರನ್ ಗಳಿಸಿದ್ದಾಗ ಸಮಿತ್ ದ್ರಾವಿಡ್ ಬೌಲಿಂಗ್‌ನಲ್ಲಿ ಕ್ರಿಶಿವ್ ಬಜಾಜ್‌ಗೆ ಕ್ಯಾಚ್ ನೀಡಿ ಪೆವಿಲಿಯನ್‌ನತ್ತ ಸಾಗಿದರು. ನಂತರ ಬಂದ ಯಾಸಿರ್ ಖಾನ್ 1, ಆದಿತ್ಯ ಕುಮಾರ್ ಸಿಂಗ್ 6 ರನ್‌ಗಳಿಸಿ ವಿಕೆಟ್ ಚೆಲ್ಲಿದರೆ, ಹಿತೇಶ್ ಕುಮಾರ 4 ರನ್‌ಗಳಿಸಿ ಅಜೇಯರಾಗಿ ಉಳಿದರು. ಅಂತಿಮವಾಗಿ 97.3 ಓವರ್‌ನಲ್ಲಿ 177ರನ್ ಗಳಿಸಿ ಆಲೌಟ್ ಆಯಿತು. ಮೊದಲ ಇನ್ನಿಂಗ್ಸ್ 5 ರನ್ ಮುನ್ನಡೆ ಸೇರಿದಂತೆ ಕರ್ನಾಟಕ ತಂಡಕ್ಕೆ 183 ರನ್‌ಗಳ ಗುರಿ ನೀಡಿತು.

ಕರ್ನಾಟಕದ ಪರ ಎನ್.ಸಮರ್ಥ್ 12 ಓವರ್‌ನಲ್ಲಿ 22 ರನ್‌ಗೆ 3 ವಿಕೆಟ್ ಗಳಿಸಿದರೆ, ಎಸ್.ಇಶಾನ್ 4 ಓವರ್‌ನಲ್ಲಿ 13 ರನ್, ಹಾರ್ದಿಕ್ ರಾಜ್ 28 ಓವರ್‌ನಲ್ಲಿ 37 ರನ್ ನೀಡಿ 3 ವಿಕೆಟ್ ಗಳಿಸಿದರು. ಧೀರಜ್‌ಗೌಡ 25 ಓವರ್‌ನಲ್ಲಿ 36 ರನ್, ಧ್ರುವ್ ಪ್ರಭಾಕರ್ 18 ಓವರ್‌ನಲ್ಲಿ 35 ರನ್‌ಗೆ 1 ವಿಕೆಟ್, ಕೆ.ಪಿ.ಕಾರ್ತಿಕೇಯ 1 ಓವರ್‌ನಲ್ಲಿ 5 ರನ್ ನೀಡಿದರೆ, ನಿಶ್ಚಿತ್ ಎನ್ ಪೈ 3 ಓವರ್‌ನಲ್ಲಿ 10 ರನ್ ಹಾಗೂ ಸಮಿತ್ ದ್ರಾವಿಡ್ 6.3 ಓವರ್‌ನಲ್ಲಿ 4 ರನ್ ನೀಡಿ 1 ವಿಕೆಟ್ ಪಡೆದರು.

ಎರಡನೇ ಇನ್ನಿಂಗ್ಸ್‌ನಲ್ಲಿ ಕರ್ನಾಟಕಕ್ಕೆ ಅಘಾತ: ಉತ್ತರ ಪ್ರದೇಶವನ್ನು ಎರಡನೇ ಇನ್ನಿಂಗ್ಸ್‌ನಲ್ಲಿ ಅಲ್ಪ ಮೊತ್ತಕ್ಕೆ ಕಟ್ಟಿ ಹಾಕಿ ಪಂದ್ಯದ ಮೇಲೆ ಹಿಡಿತ ಸಾಧಿಸಿದ್ದ ಕರ್ನಾಟಕ ಗೆಲುವಿಗಾಗಿ ದೊರೆತ 183 ರನ್ ಗುರಿ ಬೆನ್ನತ್ತಿ ಎರಡನೇ ಇನ್ನಿಂಗ್ಸ್ ಆರಂಭಿಸಿತು. ಉತ್ತರ ಪ್ರದೇಶದ ಬೌಲರ್ ಶುಭಂ ಮಿಶ್ರ ಮಾರಕ ದಾಳಿಗೆ ಕರ್ನಾಟಕ ತಂಡದ ಆಟಗಾರರು ತರಗಲೆಯಂತೆ ವಿಕೆಟ್ ಒಪ್ಪಿಸಿದರು. ಮೂರನೇ ದಿನ ಅಂತ್ಯಕ್ಕೆ ಕರ್ನಾಟಕ ಎರಡನೇ ಇನ್ನಿಂಗ್ಸ್‌ನಲ್ಲಿ 13 ಓವರ್‌ನಲ್ಲಿ ಪ್ರಮುಖ 5 ವಿಕೆಟ್ ಕಳೆದುಕೊಂಡು 33 ರನ್‌ಗಳಿಸಿದೆ. ಕರ್ನಾಟಕ ಗೆಲ್ಲಬೇಕಾದರೆ ಪಂದ್ಯದ ಕೊನೆ ದಿನವಾದ ಸೋಮವಾರ ಇನ್ನು 150 ರನ್ ಗಳಿಸಬೇಕಾದ ಸವಾಲಿನ ಪರಿಸ್ಥಿತಿಯಲ್ಲಿ ಸಿಲುಕಿದೆ.

ಸಂಕ್ಷಿಪ್ತ ಸ್ಕೋರ್


ಉತ್ತರ ಪ್ರದೇಶ ಮೊದಲ ಇನ್ನಿಂಗ್ಸ್ 77 ಓವರ್‌ನಲ್ಲಿ 239ಕ್ಕೆ ಆಲೌಟ್, ಎರಡನೇ ಇನ್ನಿಂಗ್ಸ್‌ನಲ್ಲಿ 97.3 ಓವರ್‌ನಲ್ಲಿ 177ಕ್ಕೆ ಆಲ್‌ಔಟ್ (ಗೆಲುವಿನ ಗುರಿ 183 ರನ್).

ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ 78 ಓವರ್‌ನಲ್ಲಿ 234 ರನ್‌ಗೆ ಆಲೌಟ್, 2ನೇ ಇನ್ನಿಂಗ್ಸ್ 13 ಓವರ್‌ನಲ್ಲಿ 5 ವಿಕೆಟ್ ನಷ್ಟಕ್ಕೆ 33 ರನ್.

ಎರಡನೇ ಇನ್ನಿಂಗ್ಸ್ ಆರಂಭಿಸಿದ ಕರ್ನಾಟಕ, ತಂಡದ ಮೊತ್ತ 1.3 ಓವರ್‌ನಲ್ಲಿ 4 ರನ್ ಗಳಿಸಿದ್ದಾಗ ಆರಂಭಿಕ ಆಟಗಾರ, ವಿಕೆಟ್ ಕೀಪರ್ ಕ್ರಿಶಿವ್ ಬಜಾಜ್ ಖಾತೆ ತೆರೆಯದೇ ಶುಭಂ ಮಿಶ್ರ ಬೌಲಿಂಗ್ ಎಲ್‌ಬಿಡ್ಲಬ್ಯು ಬಲೆಗೆ ಬಿದ್ದರು. ತಂಡದ ಮೊತ್ತ 8.3 ಓವರ್‌ನಲ್ಲಿ 27 ರನ್ ಆಗಿದ್ದಾಗ ಮೂರನೇ ಕ್ರಮಾಂಕದ ಆಟಗಾರ ಮಾಧವ್ ದಾರ್ವಾಡ್ಕರ್ 11 ರನ್ ಗಳಿಸಿದ್ದಾಗ ಶುಭಂ ಮಿಶ್ರಗೆ ಎರಡನೇ ಬಲಿಯಾದರು. 1 ಬೌಂಡರಿಯೊಂದಿಗೆ 12 ರನ್ ಗಳಿಸಿದ್ದ ಆರಂಭಿಕ ಆಟಗಾರ ಪ್ರಕರ್ ಚತುರ್ವೇಧಿ ಯಾಸಿರ್ ಬೌಲಿಂಗ್‌ನಲ್ಲಿ ಅಕ್ಷಯ್ ಧುಬೆಗೆ ಕ್ಯಾಚ್ ನೀಡಿ ನಿರ್ಗಮಿಸಿದರು. ಆಗ ತಂಡದ ಮೊತ್ತ 9.3 ಓವರ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 27 ರನ್ ದಾಖಲಾಗಿತ್ತು.

ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಕೆ.ಪಿ.ಕಾರ್ತಿಕೇಯ ಖಾತೆ ತೆರೆಯುವ ಮುನ್ನವೇ ಶುಭಂ ಮಿಶ್ರಗೆ ಮೂರನೆ ವಿಕೆಟ್ ಒಪ್ಪಿಸಿದರು. ಅದರ ಬೆನ್ನಲ್ಲೇ 6ನೇ ಕ್ರಮಾಂಕದ ಆಟಗಾರ ಎನ್.ಸಮರ್ಥ್ 2ರನ್ ಗಳಿಸಿದ್ದಾಗ ಶುಭಂ ಮಿಶ್ರಗೆ ನಾಲ್ಕನೆ ವಿಕೆಟ್ ಒಪ್ಪಿಸಿದರು. ದಿನದ ಅಂತ್ಯಕ್ಕೆ 5ನೇ ಕ್ರಮಾಂಕದ ಆಟಗಾರ ಸಮಿತ್ ದ್ರಾವಿಡ್ 9 ಎಸೆತ ಎದುರಿಸಿ ಅಜೇಯ 4 ರನ್ ಹಾಗೂ 7ನೇ ಕ್ರಮಾಂಕದ ಆಟಗಾರ ಧ್ರುವ್ ಪ್ರಭಾಕರ್ ಯಾವುದೇ ರನ್‌ಗಳಿಸದೇ ಕ್ರೀಸ್ ಕಾಯ್ದುಕೊಂಡಿದ್ದಾರೆ. ಅಂತಿಮವಾಗಿ ದಿನದ ಅಂತ್ಯಕ್ಕೆ ಕರ್ನಾಟಕ ಎರಡನೇ ಇನ್ನಿಂಗ್ಸ್‌ನಲ್ಲಿ 13 ಓವರ್‌ನಲ್ಲಿ 5 ವಿಕೆಟ್ ಕಳೆದುಕೊಂಡು 33 ರನ್ ಗಳಿಸಿದೆ.

ಉತ್ತರ ಪ್ರದೇಶದ ಪರ ಬೌಲರ್ ಶುಭಂ ಮಿಶ್ರ 6 ಓವರ್‌ನಲ್ಲಿ 9 ರನ್ ನೀಡಿ 4 ವಿಕೆಟ್ ಕಬಳಿಸಿದರೆ, ಯಾಸೀರ್ ಖಾನ್ 3 ಓವರ್‌ನಲ್ಲಿ 6 ರನ್ ನೀಡಿ 1 ವಿಕೆಟ್ ಪಡೆದರು. ನಿತೇಶ್ ಕುಮಾರ್ 4 ಓವರ್‌ನಲ್ಲಿ 14 ರನ್ ನೀಡಿದ್ದಾರೆ.



ಬಾಲಕನನ್ನು ಬಲಿ ಪಡೆದಿದ್ದ ಗ್ರಾಮದಲ್ಲಿ ಹುಲಿ ಪ್ರತ್ಯಕ್ಷ

ಹೆಚ್.ಡಿ. ಕೋಟೆ ತಾಲೂಕು ಕಲ್ಲಟ್ಟಿ ಗ್ರಾಮದಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆ

ಬಾಲಕನನ್ನು ಬಲಿ ಪಡೆದಿದ್ದು ಹೆಣ್ಣು ಹುಲಿ, ಅರಣ್ಯ ಇಲಾಖೆ ಹಿಡಿದಿದ್ದು ಗಂಡು ಹುಲಿ, ಆತಂಕಗೊಂಡಿರುವ ಗ್ರಾಮಸ್ಥರು, ಗ್ರಾಮಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳ ಭೇಟಿ, ಗ್ರಾಮದಲ್ಲಿ ಮತ್ತೆ 15 ಕ್ಯಾಮರಾಗಳ ಅಳವಡಿಕೆ



ಈ ಹಿಂದೆ ಸೆರೆ ಸಿಕ್ಕ ಗಂಡು ಹುಲಿ.



ಕಲ್ಲಟ್ಟಿ ಗ್ರಾಮದಲ್ಲಿ ಹುಲಿ ಹೆಜ್ಜೆ ಗುರುತು.

ಹೆಚ್.ಡಿ.ಕೋಟೆ, ಡಿ.10– ಬಾಲಕನೋರ್ವನನ್ನು ಬಲಿ ಪಡೆದಿದ್ದ ತಾಲೂಕಿನ ಕಲ್ಲಟ್ಟಿ ಗ್ರಾಮದಲ್ಲಿ ಭಾನುವಾರ ಹುಲಿ ಹೆಜ್ಜೆ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಭಯ ಭೀತರಾಗಿದ್ದಾರೆ.

ಕಲ್ಲಟ್ಟಿ ಗ್ರಾಮದ ರೈತ ಪರಮೇಶ್ ಭಾನುವಾರ ಬೆಳಗಿನ ಜಾವ ತಮ್ಮ ಜಮೀನಿಗೆ ತೆರಳಿದ್ದ ಸಂದರ್ಭದಲ್ಲಿ ಹುಲಿ ಹೆಜ್ಜೆ ಗುರುತು ಕಂಡು ಗಾಬರಿಯಿಂದ ಊರಿಗೆ ಓಡಿ ಬಂದು ಗ್ರಾಮಸ್ಥರಿಗೆ ವಿಷಯ ತಿಳಿಸಿದ್ದಾರೆ. ಗ್ರಾಮಸ್ಥರು ಕೂಡಲೇ ಸಂಬಂಧಪಟ್ಟ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದ್ದಾರೆ.

ವಿಷಯ ತಿಳಿದ ಕೂಡಲೇ ಮೇಟಿಕುಪ್ಪೆ ಆರ್‌ಎಫ್‌ಓ ಹರ್ಷಿತ್ ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಹುಲಿ ಹೆಜ್ಜೆ ಗುರುತು ಪರಿಶೀಲನೆ ನಡೆಸಿ, ಈ ಹುಲಿ ವೀರನ ಹೊಸಳ್ಳಿ ಕಡೆಯಿಂದ ಬಂದಿರಬಹುದು ಎಂಬ ಸಂಶಯ ವ್ಯಕ್ತಪಡಿಸಿ ಈ ಹುಲಿ ಪತ್ತೆಹಚ್ಚಲು, ಮತ್ತೆ ಹೊಸದಾಗಿ 15 ಹೊಸ ಕ್ಯಾಮರಾಗಳನ್ನು ಅಳವಡಿಸಿದ್ದಾರೆ.

ಈಗಾಗಲೇ ಕಳೆದ ನಾಲ್ಕು ತಿಂಗಳ ಹಿಂದೆ ಹುಲಿ ಸೆರೆ ಹಿಡಿಯಲು 20 ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಮತ್ತೊಂದು ಹುಲಿ ಪ್ರತ್ಯಕ್ಷ ಆಗಿರುವ ಹಿನ್ನೆಲೆಯಲ್ಲಿ ಈಗ ಮತ್ತೆ 15 ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಒಟ್ಟು 35 ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಕಾರ್ಯಾಚರಣೆ ನಡೆಸಲಾಗುವುದು ಎಂದು ಆರ್‌ಎಫ್‌ಓ ಹರ್ಷಿತ್ ತಿಳಿಸಿದ್ದಾರೆ.

ಕಳೆದ ನಾಲ್ಕು ತಿಂಗಳ ಹಿಂದೆ ಕಲ್ಲಟ್ಟಿ ಗ್ರಾಮದ ಕೃಷ್ಣ ನಾಯಕ್ ಅವರ ಪುತ್ರ ಚರಣ್ ನಾಯಕ್ ಎಂಬ ಬಾಲಕನನ್ನು ಹಾಡಹಗಲೇ ಹುಲಿ ಬಲಿ ಪಡೆದಿತ್ತು ರೈತ ಕೃಷ್ಣನಾಯಕ್ ತಮ್ಮ ಜಮೀನಿನಲ್ಲಿ ಬೆಳೆದಿದ್ದ ಮೆಣಸಿಕಾಯಿಯನ್ನು ಕೊಯ್ದು ಚೀಲದಲ್ಲಿ ತುಂಬಿ ತಮ್ಮ ಮಗ ಚರಣ್ ನಾಯಕ್‌ನನ್ನು ಮೆಣಸಿಕಾಯಿ ಚೀಲ ಕಾಯಲು ಕೂರಿಸಿ ಮೆಣಸಿಕಾಯಿ ಬಿಡಿಸಲು ತೆರಳಿದ್ದ ಸಂದರ್ಭದಲ್ಲಿ ಹುಲಿ ಏಕಾಏಕಿ ದಾಳಿ ಮಾಡಿ ಬಲಿ ತೆಗೆದುಕೊಂಡಿತ್ತು. ಈ ಘಟನೆಯಿಂದ ಕಲ್ಲಟ್ಟಿ ಭಾಗದ ಸುತ್ತಮುತ್ತಲಿನ ಗ್ರಾಮದ ಜನತೆ ಭಯಗೊಂಡು, ಪ್ರತಿಭಟನೆಯನ್ನು ಕೂಡ ನಡೆಸಿದ್ದರು. ಇದರಿಂದ ಅರಣ್ಯ ಅಧಿಕಾರಿಗಳು ಎಚ್ಚೆತ್ತು ಹುಲಿಯನ್ನು ಸೆರೆ ಹಿಡಿದಿದ್ದರು.

ಆದರೆ ಬಾಲಕನನ್ನು ಬಲಿ ಪಡೆದಿದ್ದು, ಹುಲಿ ಹೆಣ್ಣು ಹುಲಿ. ಅರಣ್ಯ ಇಲಾಖೆಯವರು ಹಿಡಿದಿದ್ದು ಗಂಡು ಹುಲಿಯಾಗಿತ್ತು. ಅರಣ್ಯ ಇಲಾಖೆಯವರು ಗಂಡು ಹುಲಿಯನ್ನು ಸೆರೆ ಹಿಡಿದು ಗ್ರಾಮದ ಜನತೆಗೆ ಬಾಲಕನನ್ನು ಕೊಂದು ಹಾಕಿದ್ದ ಹುಲಿ ಇದೆ ಎಂದು ಕಣ್ಣು ಒರೆಸುವ ಕೆಲಸ ಮಾಡಿದ್ದರು ಎನ್ನಲಾಗಿದೆ.

ಈಗ ಬಾಲಕನನ್ನು ಕೊಂದು ಹಾಕಿದ್ದ ಹುಲಿ ಮತ್ತೆ ಗ್ರಾಮದಲ್ಲಿ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರಲ್ಲಿ ಆತಂಕವನ್ನುಂಟು ಮಾಡಿದೆ.

ಅಕ್ಟೋಬರ್ ತಿಂಗಳಲ್ಲಿ ಹುಲಿ ಸೆರೆ ಹಿಡಿಯುವ ವಿಚಾರವಾಗಿ ಕಲ್ಲಟ್ಟಿ ಗ್ರಾಮಸ್ಥರು ಹಾಗೂ ಅರಣ್ಯಾಧಿಕಾರಿಗಳ ಸಮ್ಮುಖದಲ್ಲಿ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಗ್ರಾಮಸ್ಥರು, ಚರಣ್ ನಾಯಕ್‌ನನ್ನು ಬಲಿ ಪಡೆದಿದ್ದು ಹೆಣ್ಣು ಹುಲಿ ಎಂದು ನಿಮಗೆ ತಿಳಿದಿದ್ದರೂ, ಗಂಡು ಹುಲಿಯನ್ನು ಸೆರೆಹಿಡಿದು ಗ್ರಾಮದ ಜನರ ಕಣ್ಣು ಒರೆಸುವ ಕೆಲಸ ಮಾಡಿದ್ದೀರಾ ಎಂದು ಗ್ರಾಮಸ್ಥರು ಪ್ರಶ್ನೆ ಮಾಡಿದಾಗ ಅರಣ್ಯ ಅಧಿಕಾರಿಗಳು ಉತ್ತರ ಕೊಡಲಾಗದೆ ತಬ್ಬಿಬ್ಬಾದರು.

ಒಂದು ಹೆಣ್ಣು ಮತ್ತು ಗಂಡು ಹುಲಿ ಸೇರಿದಂತೆ ಎರಡು ಹುಲಿಗಳು ಈ ಭಾಗದಲ್ಲಿ ಜೊತೆಯಲ್ಲೇ ಓಡಾಡಿಕೊಂಡಿದ್ದು, ಕಾರ್ಯಾಚರಣೆ ಸಂದರ್ಭದಲ್ಲಿ ಗಂಡು ಹುಲಿ ಸೆರೆ ಹಿಡಿದಿದ್ದೇವೆ, ಹೆಣ್ಣು ಹುಲಿಯನ್ನು ಇನ್ನು ಮೂರು ತಿಂಗಳ ಒಳಗೆ ಸೆರೆಹಿಡಿಯುತ್ತೇವೆ ಎಂದು ಆಗಲೇ ಭರವಸೆ ನೀಡಿದ್ದರಂತೆ.

ಅಧಿಕಾರಿಗಳು ಹುಲಿ ಸೆರೆ ಹಿಡಿಯುವುದಕ್ಕೆ ಯಾವುದೇ ಪ್ರಯತ್ನ ಮಾಡುತ್ತಿಲ್ಲ. ಭಾನುವಾರ ಬೆಳಿಗ್ಗೆ ಜಮೀನಿನಲ್ಲಿ ಹುಲಿ ಹೆಜ್ಜೆ ಪತ್ತೆಯಾದ ವಿಚಾರವನ್ನು ಅಧಿಕಾರಿಗಳಿಗೆ ತಿಳಿಸಿದ ಸಂದರ್ಭದಲ್ಲಿ ಈಗ 15 ಕ್ಯಾಮರಗಳನ್ನು ಅಳವಡಿಸಿ ಸೆರೆ ಹಿಡಿಯುತ್ತೇವೆ ಎಂದು ಮತ್ತೆ ಗ್ರಾಮಸ್ಥರ ಕಣ್ಣು ಒರೆಸುವ ಕೆಲಸ ಮಾಡುತ್ತಿದ್ದಾರೆ ಎಂದು ಎಲ್ಲಾ ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಕಣಿಯನಹುಂಡಿ, ಹಾರೋಹಳ್ಳಿಯಲ್ಲೂ ಹುಲಿ, ಚಿರತೆ ಹಾವಳಿ

ಜಾನುವಾರುಗಳು ಬಲಿ, ಆತಂಕದಲ್ಲಿ ಗ್ರಾಮಸ್ಥರು, ಕ್ರಮಕ್ಕೆ ಆಗ್ರಹ

ಹೆಚ್.ಡಿ.ಕೋಟೆ: ತಾಲೂಕಿನ ಕಣಿಯನಹುಂಡಿ, ಗೋಪಾಲಪುರ, ಬೆಟ್ಟದ ಬೀಡು, ಅರಸಿನಕೆರೆ, ಹಾರೋಹಳ್ಳಿ ಮತ್ತು ಜಿ.ಬಿ. ಸರಗೂರು ಸುತ್ತ-ಮುತ್ತ ಹುಲಿ ಮತ್ತು ಚಿರತೆ ಹಾವಳಿ ಅತಿಯಾಗಿದ್ದು, ಗ್ರಾಮಸ್ಥರು ಆತಂಕದಲ್ಲಿ ಜೀವನ ನಡೆಸುವಂತಾಗಿದೆ.

ಈ ಗ್ರಾಮಗಳಲ್ಲಿ ಹುಲಿಯೊಂದು ನಿರಂತರವಾಗಿ ಕಾಣಿಸಿಕೊಳ್ಳುತ್ತಿದ್ದು, ಕೈಗೆ ಸಿಕ್ಕ ಹಸು, ಕರು ಸೇರಿದಂತೆ ಜಾನುವಾರುಗಳನ್ನು ತಿಂದುಹಾಕುತ್ತಿದೆ. ಕೆಲವು ಬಾರಿ ಗ್ರಾಮಸ್ಥರು ತಮ್ಮ ತೋಟ ಮತ್ತು ಹೊಲಗಳಿಗೆ ತೆರಳುವಾಗ ಹುಲಿ ಕಂಡು ಭಯಭೀತರಾಗಿ ವಾಪಸ್ ಬಂದಿರುವ ಘಟನೆಗಳು ಸಂಭವಿಸಿವೆ.

ಇದರಿಂದ ಗ್ರಾಮಸ್ಥರು ಮನೆಯಿಂದ ಹೊರಗೆ ಬರಲು ಹೆದರುತ್ತಿದ್ದಾರೆ. ಅದರಲ್ಲೂ ರಾತ್ರಿ ವೇಳೆಯಂತೂ ಯಾರೂ ಮನೆಯಿಂದ ಹೊರಗೆ ಬರುತ್ತಿಲ್ಲ. ಇದರಿಂದ ರಾತ್ರಿ ವೇಳೆ ಈ ಗ್ರಾಮಗಳಲ್ಲಿ ನೀರವ ಮೌನ ಆವರಿಸಿರುತ್ತದೆ ಎನ್ನಲಾಗಿದೆ. ಇತ್ತೀಚೆಗೆ ಚಿರತೆಗಳು ಕೂಡ ಗ್ರಾಮಗಳಲ್ಲಿ ನಿರ್ಭಯವಾಗಿ ಓಡಾಡುತ್ತಿದ್ದು, ಜಾನುವಾರುಗಳ ಮೇಲೆ ದಾಳಿ ನಡೆಸಿವೆ ಎಂದು ಮೂಲಗಳು ತಿಳಿಸಿವೆ.

ವಿಚಾರ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಗ್ರಾಮಗಳಿಗೆ ಭೇಟಿ ನೀಡಿ ಕೊಂಬಿಂಗ್ ಕಾರ್ಯಾಚರಣೆ ನಡೆಸಿ ಹಾರೋಹಳ್ಳಿ ಬಳಿ ಹುಲಿ ಮತ್ತು ಚಿರತೆ ಸೆರೆಗೆ ಬೋನು ಇಟ್ಟಿದ್ದರೂ, ಬೋನಿನೊಳಗೆ ಇಟ್ಟಿರುವ ಪ್ರಾಣಿಗಳನ್ನು ತಿಂದು ಬೋನಿಗೆ ಬೀಳದೆ ತಪ್ಪಿಸಿಕೊಳ್ಳುತ್ತಿವೆ ಎಂದು ಗ್ರಾಮಸ್ಥರು ತಿಳಿಸುತ್ತಾರೆ.

ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಗ್ರಾಮಗಳಿಗೆ ಭೇಟಿ ನೀಡಿ ತೀವ್ರ ಕೊಂಬಿಂಗ್ ಕಾರ್ಯಾಚರಣೆ ನಡೆಸಿ ಹುಲಿ ಮತ್ತು ಚಿರತೆಯನ್ನು ಸೆರೆಹಿಡಿಯಬೇಕು ಎಂದು ಕಣಿಯನಹುಂಡಿ ಗ್ರಾಮಸ್ಥರಾದ ಬಿಜೆಪಿ ಮುಖಂಡ ಕೆ.ಎಂ. ಅನುರಾಜ್ ಆಗ್ರಹಿಸಿದ್ದಾರೆ. ಎಷ್ಟೋ ಬಾರಿ ಗ್ರಾಮಸ್ಥರು ಕೆಲಸದ ನಿಮಿತ್ತ ಮೈಸೂರು ಸಿಟಿಗೆ ಬಂದು ವಾಪಸ್ ಹೋಗುವುದು ರಾತ್ರಿಯಾದರೆ ಊರಿಗೆ ಹೋಗದೆ ಮೈಸೂರಲ್ಲಿ ಉಳಿದು, ಮರುದಿನ ಊರಿಗೆ ಹೋಗುವ ಪರಿಸ್ಥಿತಿ ಇದೆ ಎಂದು ಅವರು ಹುಲಿ ಮತ್ತು ಚಿರತೆ ಹಾವಳಿ ಬಗ್ಗೆ ತಿಳಿಸಿದ್ದಾರೆ.

ಅರಣ್ಯ ಇಲಾಖೆ ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಇದರಿಂದಾಗುವ ಅನಾಹುತಕ್ಕೆ ಇಲಾಖೆಯೇ ಹೊಣೆಗಾರರಾಗಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಬೇಲದಕುಪ್ಪೆ ಮಾದಪ್ಪನ ಜಾತ್ರಾ ಮಹೋತ್ಸವ ಆರಂಭ

ಸ್ವಾಮಿಗೆ ಬೆಳ್ಳಿ ಕೊಳಗ ಧಾರಣೆ, ಅಭಿಷೇಕಗಳೊಂದಿಗೆ ಅಲಂಕಾರ





ಸರಗೂರು, ಡಿ.10–ಹೆಚ್.ಡಿ.ಕೋಟೆ ತಾಲೂಕಿನ ಪ್ರಸಿದ್ಧ ಬೇಲದಕುಪ್ಪೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಾನುವಾರದಿಂದ ಕಾರ್ತಿಕ ಮಾಸದ ವಿಶೇಷ ಪೂಜೆಗಳು ನಡೆಯುವುದರೊಂದಿಗೆ 3 ದಿನಗಳ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆತಿದೆ.

ದಟ್ಟ ಕಾಡಿನ ಮಧ್ಯೆ ಇರುವ ಮಹದೇಶ್ವರ ಸ್ವಾಮಿಗೆ ಮುಜರಾಯಿ ಇಲಾಖೆಯ ಸಿಇಓ ರಘು, ಪಾರಪತ್ತೆದಾರರಾದ ಮಹದೇವಸ್ವಾಮಿ, ರಾಕೇಶ್ ಅವರ ನೇತೃತ್ವ ಹಾಗೂ ದಡದಹಳ್ಳಿ ಪಟ್ಟದ ಮಠದ ಶ್ರೀ ಷಡಕ್ಷರ ಸ್ವಾಮೀಜಿ ಹಾಗೂ ಪಡುವಲು ವಿರಕ್ತ ಮಠದ ಶ್ರೀ ಮಹದೇವಸ್ವಾಮಿ ಅವರ ದಿವ್ಯ ಸಾನಿಧ್ಯದಲ್ಲಿ ಶ್ರೀ ಸ್ವಾಮಿಗೆ ಬೆಳ್ಳಿ ಕೊಳಗ ಧಾರಣೆ ಮಾಡಿ, ರುದ್ರ ಪಾರಾಯಣ, ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ ನೆರವೇರಿಸಲಾಯಿತು.

ಮೈಸೂರು, ಚಾಮರಾಜನಗರ, ಬೆಂಗಳೂರು, ಹೆಚ್.ಡಿ.ಕೋಟೆ ತಾಲೂಕು ಸೇರಿದಂತೆ ರಾಜ್ಯದ ನಾನಾ ಮೂಲೆಗಳಿಂದ ಭಕ್ತ ಸಾಗರ ಹರಿದು ಬರುತ್ತಿದ್ದು, ಶ್ರೀಸ್ವಾಮಿಯ ಧಾರ್ಮಿಕ ಪೂಜೆಯ ನಂತರ ವಿಶೇಷ ಅಲಂಕಾರಗಳು ಆರಂಭಗೊಂಡವು.

ಈಗಾಗಲೇ ಬಂದಿರುವ ರಥಗಳಿಗೆ ಅಲಂಕಾರ ಮಾಡಲಾಗುತ್ತಿದೆ. ದೇವಸ್ಥಾನಕ್ಕೆ ಬಣ್ಣ-ಬಣ್ಣದ ಲೈಟುಗಳು, ಹೂವಿನ ಅಲಂಕಾರ ಮಾಡಲಾಗಿದ್ದು, ಜಾತ್ರಾ ಮಹೋತ್ಸವಕ್ಕೆ ಮೆರುಗು ನೀಡುತ್ತಿದೆ. ಕಾಡಿನ ಪ್ರದೇಶವಾದ್ದರಿಂದ ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆ ಬಿಗಿ ರಕ್ಷಣೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು.

ನಾಳೆ(ಸೋಮವಾರ) ದೇವಸ್ಥಾನದ ಸಮೀಪವಿರುವ ಕೆರೆಯಲ್ಲಿ ವಿವಿಧ ಪೂಜೆಗಳನ್ನು ಸಲ್ಲಿಸಿ ಹಾಲರವಿಯೊಂದಿಗೆ ದೇವರನ್ನು ದೇವಾಲಯದವರೆಗೆ ಮೆರವಣಿಗೆ ಮೂಲಕ ಕರೆತರಲಾಗುವುದು. ರಾತ್ರಿ ಎಣ್ಣೆ ಮಜ್ಜನ ಮತ್ತು ಪ್ರಸಾದ ವಿನಿಯೋಗವಿರುತ್ತದೆ. ಡಿ.12ರಂದು ರಥೋತ್ಸವ ಜರುಗಲಿದೆ. ದೇವಾಲಯಕ್ಕೆ ಎತ್ತಿನ ಗಾಡಿ ಮತ್ತು ದ್ವಿಚಕ್ರ ವಾಹನ ಪ್ರವೇಶ ನಿಷೇಧಿಸಲಾಗಿದ್ದು, ಭಕ್ತಾದಿಗಳು ತಮ್ಮ ವಾಹನವನ್ನು ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿ ಬಸ್ಸಿನಲ್ಲಿ ದೇವಸ್ಥಾನಕ್ಕೆ ತೆರಳಬೇಕು.

ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಮಕ್ಕಳನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ ಶಾಸಕ ದರ್ಶನ್ ಧ್ರುವನಾರಾಯಣ್



ಮಲ್ಕುಂಡಿ, ಡಿ.10– ನಂಜನಗೂಡು ತಾಲೂಕಿನ ಈರೇಗೌಡನಹುಂಡಿ ಗ್ರಾಮದ ಬಳಿ ಶುಕ್ರವಾರ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ಗಾಯಗೊಂಡು ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾಲಾ ಮಕ್ಕಳನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಭೇಟಿ ಮಾಡಿ ಮಕ್ಕಳ ಆರೋಗ್ಯ ವಿಚಾರಿಸಿ ಧೈರ್ಯ ಹೇಳಿದರು.

ಮಕ್ಕಳನ್ನು ಶಾಲೆಗೆ ಕರೆದೊಯ್ಯುತ್ತಿದ್ದ ಟಾಟಾ ಎಸ್ ವಾಹನ ತಾಲೂಕಿನ ಈರೇಗೌಡನಹುಂಡಿ ಬಳಿ ಪಲ್ಟಿಯಾಗಿ ಶಾಲೆಯ ಹಲವು ಮಕ್ಕಳು ಗಾಯಗೊಂಡಿದ್ದರು. ಅವರುಗಳಿಗೆ ನಂಜನಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ಬಳಿಕ ಮಾತನಾಡಿದ ಅವರು ಈಗಾಗಲೇ ಗ್ರಾಮೀಣ ಭಾಗಕ್ಕೆ ಹೆಚ್ಚಿನ ಬಸ್ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಆಗದಂತೆ ಮುನ್ನೆಚ್ಚರಿಕೆ ವಹಿಸಲಾಗುವುದು. ಅಪಘಾತಕ್ಕೆ ಒಳಗಾದ ಮಕ್ಕಳಿಗೆ ಉತ್ತಮವಾದ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ಸಲಹೆ ನೀಡಿದ್ದೇನೆ ಎಂದು ತಿಳಿಸಿದರು.

ಬನ್ನೂರು ಡೇರಿಗೆ ಡಿ.24ಕ್ಕೆ ಚುನಾವಣೆ

ತಿ.ನರಸೀಪುರ, ಡಿ.10– ತಾಲೂಕು ಬನ್ನೂರು ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಚುನಾವಣೆಗೆ ಡಿ.24 ರಂದು ಚುನಾವಣೆ ನಡೆಯಲಿದೆ.

ಸಂಘದ ಕಚೇರಿಯಲ್ಲಿ ಡಿ.11 ರಿಂದ 16 ರವರೆಗೆ ನಾಮಪತ್ರ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಣಾಧಿಕಾರಿ ರಘು ಮತ್ತು ಚುನಾವಣಾಧಿಕಾರಿ ರಾಜಣ್ಣ ಅವರನ್ನು ಭೇಟಿ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಗಬ್ಬೆದ್ದು ನಾರುತ್ತಿರುವ ಅರಳಿ ಮರದ ಕೊಪ್ಪಳ ಗ್ರಾಮ

ಪಿರಿಯಾಪಟ್ಟಣ, ಡಿ.10– ತಾಲೂಕಿನ ಬೆಟ್ಟದ ಪುರದ ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಳಿ ಮರದ ಕೊಪ್ಪಳ ಗ್ರಾಮದಲ್ಲಿ ಚರಂಡಿ ನೀರು ಮುಖ್ಯರಸ್ತೆಯ ಮೇಲೆ ಹರಿಯುತ್ತಿದ್ದು ಇಡೀ ಗ್ರಾಮ ಗಬ್ಬೆದ್ದು ನಾರುತ್ತಿದೆ. ಇದರಿಂದ ಗ್ರಾಮದಲ್ಲಿ ಡೆಂಗ್ಯೂ ಮತ್ತು ಚಿಕನ್ ಗುನ್ಯಾದಂತಹ ಕಾಯಿಲೆಗಳು ಹರಡುವ ಸಾಧ್ಯತೆ ಇದೆ. ಸಂಬಂಧಪಟ್ಟವರು ಚರಂಡಿ ನೀರು ಸರಾಗವಾಗಿ ಹರಿಯುವಂತೆ ಕ್ರಮಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಪಿಡಿಓ ಮಂಜುನಾಥ್ ಮಾತನಾಡಿ ಈಗಾಗಲೇ ಗ್ರಾಮ ಪಂಚಾಯತಿಯಿಂದ ಕ್ರಿಯಾಯೋಜನೆ ತಯಾರಿಸಿದ್ದು, ಇನ್ನು 15 ದಿನದಲ್ಲಿ ಚರಂಡಿ ಕಾಮಗಾರಿ ಆರಂಭಿಸಲಾಗುವುದೆಂದು ತಿಳಿಸಿದ್ದಾರೆ.



ಇಂದು ಭಕ್ತ ಪ್ರಹ್ಲಾದ ನಾಟಕ

ತಿ.ನರಸೀಪುರ: ಗುರು ಕಾರ್ತಿಕ ಮಾಸದ ಪ್ರಯುಕ್ತ ನಂಜನಗೂಡು ತಾಲೂಕಿನ ದೇವನೂರು ಮಠದ ಶ್ರೀ ಮಹಾಂತಸ್ವಾಮಿ ಅವರ ಹಾಗೂ ಟಿ.ನರಸೀಪುರ ತಾಲೂಕು ಬೆನಕನಹಳ್ಳಿ ಗುರು ಮಲ್ಲೇಶ್ವರ ದಾಸೋಹ ಮಠದ ಮಹದೇವಸ್ವಾಮಿಗಳ ದಿವ್ಯ ಆಶೀರ್ವಾದದೊಂದಿಗೆ ಡಿ.11ರ ಸೋಮವಾರ ರಾತ್ರಿ 9 ಗಂಟೆಗೆ ಬಿಜಿ ಗುರುಸ್ವಾಮಿ ಕಲಾ ಪ್ರತಿಷ್ಠಾಪನ ಹಾಗೂ ಬೆನಕನಹಳ್ಳಿ ಶ್ರೀ ಕುಂದುರಮ್ಮನ ಕಲಾತಂಡದ ವತಿಯಿಂದ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ದೇವನೂರು ಮಠದ ಮುಂಭಾಗ ಭಕ್ತ ಪ್ರಹ್ಲಾದ ನಾಟಕವನ್ನು ಏರ್ಪಡಿಸಲಾಗಿದೆ. ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಸೋಸಲೆ ಪಿಎಸಿಸಿ ಎಸ್ ಮಾಜಿ ಅಧ್ಯಕ್ಷ ಬಿ.ಎಸ್. ಪ್ರಭುಸ್ವಾಮಿ ಮನವಿ ಮಾಡಿದ್ದಾರೆ.

ಅಭಿವೃದ್ಧಿಯೊಂದಿಗೆ ಹೆಮ್ಮಿಗೆ(ಬಿ) ಮಾದರಿ ಗ್ರಾಮವಾಗಿ ಪರಿವರ್ತನೆ

ಸಿದ್ದಪ್ಪಾಜಿ ದೇವಸ್ಥಾನಕ್ಕೆ ಕೆಡಿಪಿ ಸದಸ್ಯ ಸುನಿಲ್ ಬೋಸ್ ಗುದ್ದಲಿ ಪೂಜೆ



ಸುನಿಲ್ ಬೋಸ್ ಅವರಿಗೆ ಟಿಕೆಟ್ ನೀಡಿ

ಟಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಮಹದೇವಪ್ಪನವರು ಲೋಕೋಪಯೋಗಿ ಸಚಿವರಾಗಿದ್ದಾಗ ಕ್ಷೇತ್ರದಲ್ಲಿ ಹಿಂದೆಂದೂ ಕಂಡರಿಯದಂತಹ ಅಭಿವೃದ್ಧಿ ಕೆಲಸ ಮಾಡಿದ್ದರು. ಅದೇ ಮಾದರಿಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ಅವರ ಪುತ್ರ ಸುನಿಲ್ ಬೋಸ್ ಅವರಿಂದ ಅಭಿವೃದ್ಧಿಯನ್ನು ಮಾಡಿಸೋಣ. ಗ್ರಾಮದಲ್ಲಿ ಎಲ್ಲರೂ ಒಗ್ಗಟ್ಟಾಗಿ ಏನೇ ಬಂದರು ಜಯಿಸೋಣ ಅನ್ನೋ ರೀತಿಯಲ್ಲಿ ಒಗ್ಗಟ್ಟಾಗಿರಿ. ನಾವ್ ಅಭಿವೃದ್ಧಿ ಮಾಡಿಸುತ್ತೇವೆ. ಲೋಕಸಭಾ ಚುನಾವಣೆಗೆ ನಮ್ಮ ಯುವ ನಾಯಕರಾದ ಸುನಿಲ್ ಬೋಸ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಸುನಿಲ್ ಬೋಸ್ ಅವರಿಗೆ ಟಿಕೆಟ್ ನೀಡಬೇಕು. **– ಎಚ್ ವಿ ಶೇಷಾದ್ರಿ, ಗ್ರಾಪಂ ಮಾಜಿ ಅಧ್ಯಕ್ಷ**

ತಿ.ನರಸೀಪುರ, ಡಿ.10– ಹೆಮ್ಮಿಗೆ(ಬಿ) ಗ್ರಾಮವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವ ಮೂಲಕ ಮಾದರಿ ಗ್ರಾಮವನ್ನಾಗಿ ಪರಿವರ್ತಿಸಲಾಗುವುದು ಎಂದು ಕೆಡಿಪಿ ಸದಸ್ಯ ಹಾಗೂ ಕಾಂಗ್ರೆಸ್ ಯುವ ಮುಖಂಡ ಸುನಿಲ್ ಬೋಸ್ ಭರವಸೆ ನೀಡಿದ್ದಾರೆ.

ತಾಲೂಕಿನ ತಲಕಾಡು ಹೋಬಳಿಯ ಹೆಮ್ಮಿಗೆ(ಬಿ) ಗ್ರಾಮದಲ್ಲಿ ಭಾನುವಾರ 10 ಲಕ್ಷ ರೂ. ವೆಚ್ಚದಲ್ಲಿ ಸಿದ್ದಪ್ಪಾಜಿ (ಮಂಟೇಸ್ವಾಮಿ) ದೇವಸ್ಥಾನಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಗ್ರಾಮದಲ್ಲಿರುವ ಎಲ್ಲಾ ಮುಖಂಡರನ್ನು ಒಗ್ಗೂಡಿಸಿಕೊಂಡು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡುವುದಾಗಿ ತಿಳಿಸಿ, ಮಹಿಳಾ ಸ್ವಸಹಾಯ ಸಂಘಗಳಿಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸಾಲ ಸೌಲಭ್ಯದ ವ್ಯವಸ್ಥೆ ಕಲ್ಪಿಸಿ, ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ತರಬೇತಿಗಳನ್ನು ನೀಡುವ ಮೂಲಕ ಸ್ವಾವಲಂಬಿ ಜೀವನ ನಡೆಸಲು ಅನುಕೂಲ ಕಲ್ಪಿಸಿ ಕೊಡುವುದಾಗಿ ತಿಳಿಸಿದರು.

ಗ್ರಾಮದಲ್ಲಿ ಕೆಲವು ಮಣ್ಣಿನ ಗೋಡೆಯ ಮನೆಗಳಿದ್ದು, ಮಳೆಗೆ ಬೀಳುವ ಹಂತದಲ್ಲಿವೆ, ಅಂತಹ ಮನೆಗಳ ಪಟ್ಟಿಯನ್ನು ಸಿದ್ಧಪಡಿಸಿ, ಮನೆ ನಿರ್ಮಾಣ ಮಾಡಿಕೊಳ್ಳಲು ಗ್ರಾಮ ಪಂಚಾಯಿತಿ ವತಿಯಿಂದ ಅನುಕೂಲ ಕಲ್ಪಿಸಿ ಕೊಡುವುದಾಗಿ ಹೇಳಿದರು,

ಗ್ರಾಮಗಳಲ್ಲಿ ದೇವಾಲಯಗಳು ನಿರ್ಮಾಣವಾಗುವುದರಿಂದ ಗ್ರಾಮದ ಜನತೆಯ ಮನಸ್ಸಿನಲ್ಲಿ ನೆಮ್ಮದಿ ಹಾಗೂ ಶಾಂತಿ ನೆಲೆಸುತ್ತದೆ, ಎಲ್ಲರೂ ಒಗ್ಗಟ್ಟಾಗಿ ಪೂಜಾ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡು ಶಾಂತಿ ನೆಮ್ಮದಿಯಿಂದ ಬಾಳ್ವೆ ನಡೆಸುವಂತೆ ಸಲಹೆ ನೀಡಿದರು,

ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಸಚಿವರಾದ ಎಚ್.ಸಿ.ಮಹದೇವಪ್ಪನವರು ಸಮಗ್ರ ಅಭಿವೃದ್ಧಿಗೆ ಪಟ್ಟಿ ಮಾಡಿದ್ದು, ಅಧಿವೇಶನ ಮುಗಿದ ನಂತರ ಪ್ರತಿ ಹಳ್ಳಿಗೆ ಭೇಟಿ ನೀಡಿ ಜನರ ಸಮಸ್ಯೆಗೆ ಪರಿಹಾರವನ್ನು ನೀಡುವ ಮೂಲಕ ಮತದಾರರ ಭರವಸೆಯನ್ನು ಈಡೇರಿಸುವ ಮೂಲಕ ಮತದಾರರ ಋಣವನ್ನು ತೀರಿಸುತ್ತೇವೆ ಎಂದರು

ಹೆಮ್ಮಿಗೆ ಗ್ರಾಪಂ ಅಧ್ಯಕ್ಷೆ ವಸಂತಮ್ಮ ರಾಜಶೇಖರ್, ಉಪಾಧ್ಯಕ್ಷ ಸೋಮಣ್ಣ, ಮಾಜಿ ಅಧ್ಯಕ್ಷ ಶೇಷಾದ್ರಿ, ಹೆಮ್ಮಿಗೆ ಅಭಿವೃದ್ಧಿ ಅಧಿಕಾರಿ ಚಿದಾನಂದ, ತಾಪಂ ಮಾಜಿ ಸದಸ್ಯರಾದ ನರಸಿಂಹ ಮಾದನಾಯಕ, ಕುಕ್ಕುರ್ ಗಣೇಶ್, ಮೋಹನ್ ನಾಯ್ಕ, ಆಪ್ತ ಸಹಾಯಕರಾದ ಲಕ್ಷ್ಮೀನಾರಾಯಣ, ಬಸವರಾಜು, ಮುಖಂಡರಾದ ಚಿಕ್ಕಹೊನ್ನಯ್ಯ ಶಿವಣ್ಣ, ಪ್ರಸನ್ನ, ನಾಗರಾಜು, ವೆಂಕಟೇಶ್, ರವಿಚಂದ್ರ ಯುವಕ ಮಿತ್ರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಜಪಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮರೀಚಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಕಂಜೂರಿಂಗ್ ಕಣ್ಣಪ್ಪನ್ (ತ)	4 ಪ್ರದರ್ಶನಗಳು
ಸಂಗಂ	
ಮರೀಚಿ (ಕ) –2 ಪ್ರದರ್ಶನಗಳು, ಸಿಂಗಂ (ತ)	2 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜಪಾನ್ (ತ)	4 ಪ್ರದರ್ಶನಗಳು
ಪ್ರಭಾ	
ಪಾಲಿಟಿಕ್ಸ್ ಕಲ್ಯಾಣ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶುಗರ್ ಫ್ಯಾಕ್ಟರಿ (ಕ): ಮ.1.25ಕ್ಕೆ, ಸಂ.4.15ಕ್ಕೆ, ನೆಪೋಲಿಯನ್ (ಇಂ): ರಾ.7ಕ್ಕೆ, ರಾ.10.05ಕ್ಕೆ
ಸ್ಕ್ರೀನ್ 2	ಬ್ಯಾಡ್ ಮ್ಯಾನರ್ಸ್ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಕಾಥಲ್ ದಿ ಕೋರ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಕಾಥಲ್ ದಿ ಕೋರ್ (ಮ): ಬೆ.10.45ಕ್ಕೆ, ಫರ್ರಿ (ಹಿಂ): ಮ.1.05ಕ್ಕೆ, ವಿಶ್ (3ಡಿ) (ಇಂ): ಮ.3.20ಕ್ಕೆ, ಸಂ.5.25ಕ್ಕೆ, ಸ್ವಾತಿ ಮುತ್ತಿನ ಮಳೆ ಹನಿಯೇ (ಕ): ರಾ.7.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.3.55ಕ್ಕೆ.
ಸ್ಕ್ರೀನ್ 4	ಅನಿಮಲ್ (ಹಿಂ): ಬೆ.8.05ಕ್ಕೆ, ಮ.12.10ಕ್ಕೆ, ಅರ್ಧಂ ಬರ್ಧ ಪ್ರೇಮ ಕಥೆ (ಕ): ಸಂ.4.15ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ರಾ.7.10ಕ್ಕೆ, ಪಾರ್ಕಿಂಗ್ (ತ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, 12th ಫೇಲ್ (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಕೊಳ್ಳೇಗಾಲ ತಾಲೂಕು ಶ್ರೀಕ್ಷೇತ್ರ ಚಿಕ್ಕಲೂರು ದೇವಸ್ಥಾನದಲ್ಲಿ ನಿರ್ಮಿಸಿರುವ ಅನ್ನಪೂರ್ಣ ಭವನ ಉದ್ಘಾಟನೆ ಮತ್ತು ತೆಪ್ಪೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಚಂದ್ರಶೇಖರ ಕಂಬಾರ ಹಾಗೂ ಕ್ಷೇತ್ರದ ರೂವಾರಿಗಳಾದ ಮೈಸೂರು ಸಿದ್ದಪ್ಪಾಜಿ ಅವರುಗಳನ್ನು ವಿಶ್ವಕರ್ಮ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ, ಸಮಾಜದ ಮುಖಂಡರಾದ ತಾಂಡವಪುರ ಸಿದ್ದರಾಜು, ಅವಿನಾಶ್ ಅವರುಗಳು ಅಭಿನಂದಿಸಿದರು.

ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ದೀಪೋತ್ಸವ, ಅನ್ನ ಸಂತರ್ಪಣೆ



ತಿ.ನರಸೀಪುರ, ಡಿ.10– ಪಟ್ಟಣದ ಹಳೆ ತಿರುಮಕೂಡಲಿನಲ್ಲಿರುವ ಶ್ರೀ ಚೌಡೇಶ್ವರಿ ಅಮ್ಮನವರ ದೇವಾಲಯದಲ್ಲಿ ಮಂಗಳವಾರ (ನ.12) ದೀಪೋತ್ಸವ ಹಾಗೂ ಹೋಮ ಹವನನನ್ನು ಏರ್ಪಡಿಸಲಾಗಿದೆ. ಮಂಗಳವಾರ ಬೆಳಿಗ್ಗೆಯಿಂದ ದುರ್ಗಾ ಹೂಮ, ಮಹಾಭಿಷೇಕ, ಮಹಾಮಂಗಳಾರತಿ ನಡೆಯಲಿದ್ದು, ಮಧ್ಯಾಹ್ನ ಶ್ರೀ ಆದಿ ಚುಂಚನಗಿರಿ ರಜತೋತ್ಸವ ಕಲ್ಯಾಣ ಮಂಟಪದಲ್ಲಿ ಬರುವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಸಂಜೆ 6 ಕ್ಕೆ ಶ್ರೀ ಚೌಡೇಶ್ವರಿ ಅಮ್ಮನವರ ದೀಪೋತ್ಸವವ ನಡೆಯಲಿದ್ದು ಅಮ್ಮನವರು ಭಕ್ತಾದಿಗಳು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಅರ್ಚಕ ಟಿ.ಸಿ. ಗಣೇಶ್ ಕುಮಾರ್ ತಿಳಿಸಿದ್ದಾರೆ.

ಸಣ್ಣ ರೈತರು ಸ್ಮಾರ್ಟ್ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ಅಗತ್ಯ

ಇಫ್‌ಕಾನ್ 2023ರ ಸಮಾರೋಪ ಸಮಾರಂಭದಲ್ಲಿ ಗುರುಗ್ರಾಮ್‌ನ ಎನ್‌ಎಬಿಎಲ್ ಅಧ್ಯಕ್ಷ ಪ್ರೊ.ಎಸ್.ಅಯ್ಯಪ್ಪನ್ ಅಭಿಮತ





ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಭಾನುವಾರ ನಡೆದ ಇಫ್‌ಕಾನ್ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪೋಸ್ಟರ್ ಸ್ಪರ್ಧೆ, ವಸ್ತು ಪ್ರದರ್ಶನದಲ್ಲಿ ಉತ್ತಮ ಪ್ರದರ್ಶನ ನೀಡಿದ ಪ್ರತಿನಿಧಿಗಳು ಪ್ರಮಾಣ ಪತ್ರದೊಂದಿಗೆ ನಗದು ಬಹುಮಾನ ಸ್ವೀಕರಿಸಿರುವುದು. ಮತ್ತೊಂದು ಚಿತ್ರದಲ್ಲಿ ಎನ್‌ಎಬಿಎಲ್ ಅಧ್ಯಕ್ಷ ಪ್ರೊ.ಎಸ್.ಅಯ್ಯಪ್ಪನ್ ಮಾತನಾಡುತ್ತಿರುವುದನ್ನು ಕಾಣಬಹುದು.

ಮೈಸೂರು,ಡಿ.10(ಪಿಎಂ)– ಆಹಾರದ ಪ್ರಮಾಣ ಮತ್ತು ಗುಣಮಟ್ಟ ಹೆಚ್ಚಿಸಲು ಸ್ಮಾರ್ಟ್ ಕೃಷಿ ಪದ್ಧತಿಯಲ್ಲಿ ದೇಶದ ಸಣ್ಣ ರೈತರು ತೊಡಗಿಸಿಕೊಳ್ಳಲು ಉತ್ತೇಜನ ನೀಡಬೇಕಿದೆ ಎಂದು ಗುರುಗ್ರಾಮ್‌ನ ನ್ಯಾಷನಲ್ ಅಕ್ರೆಡಿಟೇಷನ್ ಬೋರ್ಡ್ ಫಾರ್ ಟೆಸ್ಟಿಂಗ್ ಅಂಡ್ ಕ್ಯಾಲಿಬ್ರೇಷನ್ ಲ್ಯಾಬೋರೇಟರೀಸ್ (ಎನ್‌ಎಬಿಎಲ್) ಅಧ್ಯಕ್ಷರೂ ಆದ ಪದ್ಮಶ್ರೀ ಪುರಸ್ಕೃತ ಕನ್ನಡಿಗ ಪ್ರೊ.ಎಸ್. ಅಯ್ಯಪ್ಪನ್ (ಸುಬ್ಬಣ್ಣ ಅಯ್ಯಪ್ಪನ್) ಅಭಿಪ್ರಾಯಪಟ್ಟರು.

ಮೈಸೂರಿನ ಸಿಎಸ್‌ಐಆರ್–ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯದ (ಸಿಎಫ್‌ಟಿಆರ್‌ಐ) ಐಎಫ್‌ಟಿಟಿಸಿ ಸಭಾಂಗಣದಲ್ಲಿ ಸಿಎಫ್‌ಟಿಆರ್‌ಐ, ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ ಅಂಡ್ ಟೆಕ್ನಾಲಜಿಸ್ಟ್ (ಇಂಡಿಯಾ/ಎಎಫ್ ಎಸ್‌ಟಿ–ಐ) ಜಂಟಿ ಆಶ್ರಯ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನ–ಇಫ್‌ಕಾನ್ 2023ರ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, 'ಹವಾಮಾನ ಬದಲಾವಣೆ ಮತ್ತು ಸುಸ್ಥಿರ ಆಹಾರ ಉತ್ಪಾದನೆ' ಕುರಿತು ಮಾತನಾಡಿದರು.

ದೇಶದ ಕೃಷಿ ಚಟುವಟಿಕೆಗಳಲ್ಲಿ ತಂತ್ರಜ್ಞಾನದ ಸಮ್ಮಿಲನಗೊಳ್ಳಿಸುವ ಮೂಲಕ ಅಭಿವೃದ್ಧಿ ಕಾಣಬೇಕಿದೆ. ಕಡಿಮೆ ಭೂಮಿಯಲ್ಲಿ ಕಡಿಮೆ ನೀರು ಬಳಸಿಕೊಂಡು ಹೆಚ್ಚು ಆಹಾರ ಉತ್ಪಾದಿಸುವ ಸ್ಮಾರ್ಟ್ ಕೃಷಿಯತ್ತ ಇಡೀ ದೇಶ ಮುಖ ಮಾಡಬೇಕಿದೆ. ಈ ನಿಟ್ಟಿನಲ್ಲಿ ಬಿಗ್ ಡೇಟಾ ಅನಾಲಿಟಿಕ್ಸ್, ರಿಮೋಟ್ ಸೆನ್ಸಿಂಗ್, ಇಮೇಜ್ ಪ್ರೊಸೆಸಿಂಗ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ), ಡೀಪ್ ಮೆಷಿನ್ ಲರ್ನಿಂಗ್, ಬ್ಲಾಕ್ ಚೈನ್ ಟೆಕ್ನಾಲಜಿ, ಸೆನ್ಸರ್ ಮತ್ತು ರೊಬೋಟಿಕ್ಸ್‌ನಂತಹ ತಂತ್ರಜ್ಞಾನದ ಬಳಕೆ ಅಗತ್ಯವಾಗಿದೆ ಎಂದು ಹೇಳಿದರು.

> ನಾಲ್ಕು ದಿನಗಳು ನಡೆದ '9ನೇ ಅಂತಾರಾಷ್ಟ್ರೀಯ ಆಹಾರ ಸಮ್ಮೇಳನದಲ್ಲಿ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಯೋಜಕರು, ಉದ್ಯಮಿಗಳು, ಆಹ್ವಾನಿತ ಪ್ರತಿನಿಧಿಗಳು ಸೇರಿದಂತೆ 2500ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಒಟ್ಟು 85 ತಜ್ಞರು ತಮ್ಮ ತಾಂತ್ರಿಕ ಉಪನ್ಯಾಸಲ್ಲಿ ವಿವಿಧ ವಿಷಯಗಳ ಮೇಲೆ ಬೆಳಕು ಚೆಲ್ಲಿಸಿದರು. ಈ ಪೈಕಿ 15 ವಿವಿಧ ದೇಶಗಳಿಂದ 22 ಮಂದಿ ಅಂತಾರಾಷ್ಟ್ರೀಯ ಮಟ್ಟದ ತಜ್ಞರು ಭಾಗವಹಿಸಿದ್ದರು. ಆಹಾರ ವಸ್ತು ಪ್ರದರ್ಶನದಲ್ಲಿ ಒಟ್ಟು 85 ಮಳಿಗೆಗಳಲ್ಲಿ ಆಹಾರೋದ್ಯಮದ ವಿವಿಧ ಆಯಾಮಗಳ ಮೇಲೆ ಬೆಳಕು ಚಲ್ಲಲಾಯಿತು.

ನಮ್ಮಲ್ಲಿ ಶೇ.85ರಷ್ಟು ರೈತರು ಐದು ಎಕರೆಯಿಂದ ಕಡಿಮೆ ಭೂಮಿ ಹೊಂದಿದ್ದಾರೆ. ಇದು ಮುಂಬರುವ ದಿನಗಳಲ್ಲಿ ಶೇ.90ಕ್ಕೆ ಏರಿಕೆಯಾಗಲಿದೆ. ಹಾಗಾಗಿ ನಾವು ಸಣ್ಣ ರೈತರನ್ನು ಹೆಚ್ಚು ಪ್ರೋತ್ಸಾಹಿಸಬೇಕಿದೆ. ಕಡಿಮೆ ಭೂಮಿಯಲ್ಲಿ ಹೆಚ್ಚಿನ ಕೃಷಿ ಉತ್ಪಾದನೆಗೆ ಉತ್ತೇಜನ ನೀಡಬೇಕು. ಜೊತೆಗೆ ಕಡಿಮೆ ನೀರಿನ ಬಳಕೆ ಮೂಲಕ ಉತ್ತಮ ಇಳುವರಿ ಪಡೆಯಲು ಪೂರಕವಾಗಿ ಆವಿಷ್ಕಾರಗಳು ನಡೆಯಬೇಕು ಎಂದರು.

ಸಣ್ಣ ರೈತರ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಮೂಲಕ ದೇಶದ ಆಹಾರ ಭದ್ರತೆಗೆ ಕೊಡುಗೆ ನೀಡಬೇಕಿದೆ. 150 ವರ್ಷಗಳಲ್ಲಿ ನಾವು ಕಂಡರಿಯದಂತಹ ಹವಾಮಾನ ವೈಪರೀತ್ಯವು ಕಳೆದ 15 ವರ್ಷಗಳಲ್ಲಿ ದಾಖಲಾಗಿದೆ. ಹವಾಮಾನ ವೈಪರಿತ್ಯವು ಬೆಳೆ, ಜಾನುವಾರು ಮತ್ತು ಮೀನು ಸೇರಿದಂತೆ ಎಲ್ಲಾ ಕೃಷಿ ಚಟುವಟಿಕೆಗಳ ಮೇಲೆ ದುಷ್ಪರಿಣಾಮ ಉಂಟು ಮಾಡಿದೆ. ಇದರಿಂದ ತಪ್ಪಿಸಿಕೊಳ್ಳಲು ಸೂಕ್ತ ಬೆಳೆಗಳ ಮೇಲೆ ಹೆಚ್ಚಿನ ಆವಿಷ್ಕಾರಗಳ ಅಗತ್ಯವಿದೆ. ಈ ಬಗ್ಗೆ ಗಮನ ನೀಡಬೇಕಿದೆ. ಯಾವುದೇ ಆವಿಷ್ಕಾರ ಮಾಡಿದರೂ ವೈಪರೀತ್ಯಕ್ಕೆ ಎಡೆಯಾಗದಂತೆ ಎಚ್ಚರ ವಹಿಸಬೇಕಿದೆ ಎಂದು ತಿಳಿಸಿದರು.

> ದೇಶದಲ್ಲಿ ಶೇ.54ರಷ್ಟು ನೀರಿನ ಸಮಸ್ಯೆ ಎದುರಾಗಿದೆ. ಈ ಮೊದಲು ಕೃಷಿ ಚಟುವಟಿಕೆಗೆ ಮಾತ್ರವೇ ಬಹುತೇಕ ನೀರಿನ್ನು ಬಳಕೆ ಮಾಡಲಾಗುತ್ತಿತ್ತು. ಆದರೆ ಈಗ ವಿಸ್ತಾರಗೊಂಡಿರುವ ಕೈಗಾರಿಕಾ ವಲಯ, ಸೇವಾ ವಲಯಕ್ಕೂ ಹೆಚ್ಚಿನ ನೀರಿನ ಅಗತ್ಯತೆ ಕಂಡುಬರುತ್ತಿದೆ. ಇದರಿಂದ 2050ರ ವೇಳೆಗೆ ನೀರಿನ ಕೊರತೆಯು ಮತ್ತಷ್ಟು ಬಿಗಡಾಯಿಸಲಿದೆ. ಆದ್ದರಿಂದ ಅತ್ಯಂತ ಜಾಣ್ಮೆಯಿಂದ ನೀರಿನ ಬಳಕೆ ಮಾಡಬೇಕಿದೆ. ಕಡಿಮೆ ನೀರು ಬಳಕೆ ಮೂಲಕ ಹೆಚ್ಚು ಉತ್ಪಾದನೆಯ ವಿಧಾನಗಳನ್ನು ಕಂಡುಕೊಳ್ಳಬೇಕು. ಪರಿಣಾಮಕಾರಿ ನೀರಿನ ನಿರ್ವಹಣೆಗಾಗಿ 4–5 ಎಕರೆಯಷ್ಟು ಕಡಿಮೆ ಜಮೀನಿನಲ್ಲೇ ಸಮಗ್ರ ಕೃಷಿ, ಮಿಶ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು. ಇದರಿಂದ ಕೃಷಿ ಮತ್ತು ಅದನ್ನು ಅವಲಂಬಿಸಿರುವ ರೈತರಿಗೂ ಲಾಭವಾಗಲಿದೆ.
> -ಪ್ರೊ.ಎಸ್.ಅಯ್ಯಪ್ಪನ್

ಜೊತೆಗೆ ಅಂತರ ಬೆಳೆ ಕೃಷಿ ಪದ್ಧತಿಗೆ ಆದ್ಯತೆ ನೀಡಬೇಕು. ಇದು ರೈತರಿಗೆ ಹೆಚ್ಚು ಲಾಭದಾಯಕವಾಗಲಿದೆ. ಹವಾಮಾನ ಅಧ್ಯಯನದ ಆಧಾರದಲ್ಲಿ ಕೃಷಿ ಮಾಡುವ ಮೂಲಕ ನಷ್ಟದಿಂದ ತಪ್ಪಿಸಿಕೊಳ್ಳಬಹುದು. ಸ್ಮಾರ್ಟ್ ಕೃಷಿ ಪದ್ಧತಿಯಿಂದ ಇದು ಸಾಧ್ಯವಾಗಲಿದೆ. ಹಸಿರು ಕ್ರಾಂತಿ ಇಂದಿಗೂ ಅಗತ್ಯವಿದೆ. ಬೇರೆ ಕ್ಷೇತ್ರಗಳ ವಿವಿಧ ಕೈಗಾರಿಕಾ ಕಂಪನಿಗಳು ಕೃಷಿಯತ್ತ ಬರಬೇಕು. ತಮ್ಮಲ್ಲಿರುವ ವಿನೂತನ ತಂತ್ರಜ್ಞಾನವನ್ನು ಕೃಷಿರಂಗದಲ್ಲೂ ಬಳಕೆ ಮಾಡಿ ಕೃಷಿ ಕ್ಷೇತ್ರ ಲಾಭದಾಯಕಗೊಳ್ಳಲು ಸಹಕಾರ ನೀಡಬೇಕು ಎಂದು ತಿಳಿಸಿದರು.

ಪ್ರಸ್ತುತ ಆಹಾರದಲ್ಲಿ ಭದ್ರತೆ ಹೊಂದಿರುವ ಕಾರಣದಿಂದಲೇ ಚಂದ್ರಯಾನ ಸೇರಿದಂತೆ ಹಲವು ಸಾಧನೆಗಳಿಗೆ ದೇಶ ಸಾಕ್ಷಿಯಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಎಷ್ಟೋ ದೇಶಗಳು ಆಹಾರ ಕೊರತೆಯಿಂದ ಹೊರ ಬರಲು ಸಾಧ್ಯವಾಗಿಲ್ಲ. ದೇಶದ ಪ್ರಗತಿಗೆ ರೈತರ ಕೊಡುಗೆ ಅಪಾರವಾಗಿದ್ದರೂ ಅವರಿಗೆ ಸೂಕ್ತ ಗೌರವ–ಮನ್ನಣೆ ದೊರೆಯುತ್ತಿಲ್ಲ. ಇದು ಬೇಸರದ ಸಂಗತಿ. ದೇಶದಲ್ಲಿ ಆಹಾರ ಹಾಗೂ ಅದರ ಉತ್ಪಾದಕರಾದ ರೈತ ಸಮುದಾಯಕ್ಕೆ ಆದ್ಯತೆ ದೊರೆಯಬೇಕು ಎಂದು ಹೇಳಿದರು.

ಇದೇ ವೇಳೆ ಸಮ್ಮೇಳನದಲ್ಲಿ ನಡೆದ ಪೋಸ್ಟರ್ ಸ್ಪರ್ಧೆ ಮತ್ತು ವಸ್ತು ಪ್ರದರ್ಶನದಲ್ಲಿ ಉತ್ತಮ ಪ್ರದರ್ಶನ ನೀಡಿದ ಸಮ್ಮೇಳನದ ಪ್ರತಿನಿಧಿಗಳಿಗೆ ಪ್ರಮಾಣ ಪತ್ರದೊಂದಿಗೆ ನಗದು ಬಹುಮಾನ ನೀಡಲಾಯಿತು. ತಂಜಾವೂರು ಎನ್‌ಐಎಫ್‌ಟಿಇಎಂ ನಿರ್ದೇಶಕ ಪ್ರೊ.ವಿ.ಪಳನಿಮುತ್ತು, ತೆಲಂಗಾಣದ ಐಸಿಆರ್‌ಐಎಸ್‌ಎಟಿನ ಗ್ಲೋಬಲ್ ರಿಸರ್ಚ್ ಪ್ರೋಗ್ರಾಮ್ ಡೈರೆಕ್ಟರ್ (ಅಕ್ಸಿಲೆರ್ಟೆಡ್ ಕ್ರಾಫ್ ಇಂಪ್ರೂಮೆಂಟ್) ಡಾ.ಸೀನ್ ಮೇಯಸ್, ಸಿಎಫ್‌ಟಿಆರ್‌ಐನ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಲಕ್ನೋದ ಸಿಎಸ್‌ಐಆರ್–ಐಐಟಿಆರ್‌ನ ನಿರ್ದೇಶಕರೂ ಆದ ಎಎಫ್‌ಎಸ್‌ಟಿ (ಐ) ಅಧ್ಯಕ್ಷ ಡಾ.ಎನ್.ಭಾಸ್ಕರ್, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಸುರೇಶ್ ಡಿ.ಸಖರೆ, ಸಹ ಅಧ್ಯಕ್ಷ ಡಾ.ಕೆ.ವಿ.ಹರೀಶ್ ಪ್ರಶಾಂತ್ ಮತ್ತಿತರರು ಹಾಜರಿದ್ದರು.



ಉತ್ತರ ಪ್ರದೇಶದ ರಾಜಭವನದಲ್ಲಿ ರಾಜ್ಯಪಾಲೆ ಆನಂದಿ ಬೆನ್ ಪಟೇಲ್ ಅವರನ್ನು ಮೈಸೂರು ಬಿಜೆಪಿ ಸಹ ವಕ್ತಾರ ಕೇಬಲ್ ಮಹೇಶ್ ಹಾಗೂ ಅಶೋಕ್ ಕುಮಾರ್ ಜೈನ್ ಭಾನುವಾರ ಭೇಟಿ ಮಾಡಿ ಮೈಸೂರಿನ ಪ್ರಮುಖ ಖಾದ್ಯಗಳು ಹಾಗೂ ಸ್ಮರಣಿಕೆ ನೀಡಿ ಗೌರವಿಸಿದರು.

ಅಂಧ ಮಕ್ಕಳ ಬಾಳಿಗೆ ಬೆಳಕಾದ ಕಲಾವಿದ ಅನಂತಸ್ವಾಮಿ

ಸರ್ಕಾರಿ ಅಂಧ ಮಕ್ಕಳ ಶಾಲೆ ಮುಖ್ಯಸ್ಥ ಸತೀಶ್ ಅಭಿಮತ

ಮೈಸೂರು, ಡಿ.10(ಜಿಎ)–ಹುಟ್ಟಿನಿಂದಲೇ ಕಲಾವಿದರಾದ ಅನಂತಸ್ವಾಮಿ ಯವರು ಸಂಗೀತ ಶಿಕ್ಷಕರಾಗಿ ಅಂಧ ಮಕ್ಕಳ ಬಾಳಿಗೆ ಬೆಳಕಾದ ಮಹಾನ್ ಕಲಾವಿದ ಎಂದು ಸರ್ಕಾರಿ ಅಂಧ ಮಕ್ಕಳ ಪಾಠಶಾಲೆ ಮುಖ್ಯಸ್ಥ ಸತೀಶ್ ಸ್ಮರಿಸಿದರು.



ನಗರದ ಪುರಭವನದಲ್ಲಿ ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್‌ನಿಂದ ಭಾನುವಾರ ನಡೆದ ಸಂಘದ ದ್ವಿತೀಯ ವಾರ್ಷಿಕೋತ್ಸವ, ಎಂ.ಬಿ.ಅನಂತಸ್ವಾಮಿ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲಾ ವಿದ್ವಾಂಸರನ್ನು ಮರುಳು ಮಾಡುವಂತಹ ಪ್ರತಿಭೆ ಅವರದ್ದಾಗಿತ್ತು. ದೈವದತ್ತ ಕಲೆ ಮೈಗೂಡಿಸಿಕೊಂಡಿದ್ದರು. ಅವರದ್ದು ಶಾಂತ ಸ್ವರೂಪ ಸ್ವಭಾವ. ಎಲ್ಲರನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಅವರಂತಹ ಕಲಾವಿದರು ಈ ನಾಡಿನಲ್ಲಿ ಮತ್ತೆ ಹುಟ್ಟಿಬರಬೇಕು. ಆ ಕಾಲಘಟ್ಟದಲ್ಲಿ ಬಹಳಷ್ಟು ಒಳ್ಳೆಯ ಅದ್ಭುತ ಕಲಾವಿದರಿದ್ದರು. ಆದರೆ ಅವರ ಪ್ರತಿಭೆ ಗುರುತಿಸುವುದು ಕಷ್ಟವಾಗಿತ್ತು. ಇವತ್ತು ಕಾಲ ಬದಲಾಗಿದೆ. ಜನಪ್ರಿಯತೆ ಗಳಿಸಲು ಬೇಕಾದಷ್ಟು ಅವಕಾಶಗಳಿವೆ ಎಂದರು.

ಅನಂತಸ್ವಾಮಿಯವರು ತಮ್ಮ ಬಾಲ್ಯದಿಂದಲೇ ಸಂಗೀತ ಕಛೇರಿಗಳಲ್ಲಿ ತಾಳವಾದ್ಯ ನುಡಿಸುವ ಮೂಲಕ ಗಮನ ಸೆಳೆದರು. ನಂತರದ ದಿನದಲ್ಲಿ ಕಠಿಣ ಅಭ್ಯಾಸ, ಪರಿಶ್ರಮದಿಂದ ತಮ್ಮ ಪರಿಪಕ್ವ ವಿದ್ಯಾಭ್ಯಾಸದ ಫಲವಾಗಿ ಅಂಧ ಮಕ್ಕಳ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ನೇಮಕವಾದರು ಎಂದು ನೆನೆದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್ ಮಾತನಾಡಿ, ಕಲಾ ಪ್ರತಿಭೆ ಮೂಲಕ ಅಜಾರಾಮರಾಗಿ ಉಳಿಯುವರ ಹೆಸರಿನಲ್ಲಿ ಅನಂತಸ್ವಾಮಿಯವರು ಸೇರುತ್ತಾರೆ. ಮೃದಂಗ ಹಾಗೂ ತಬಲಾದ ಮೂಲಕ ಅಂದಿನ ಕಾಲದಲ್ಲಿ ಸಂಗೀತ ಕ್ಷೇತ್ರದಲ್ಲಿ ಕಲಾಸೇವೆಯಲ್ಲಿ ಕೀರ್ತಿಗಳಿಸಿ ಹೆಸರು ವಾಸಿಯಾಗಿದ್ದರು ಎಂದು ತಿಳಿಸಿದರು.

ಈ ವೇಳೆ ವೀಣಾ ವಾದಕ ಆರ್.ಕೆ. ಪದ್ಮನಾಭ, ತಬಲಾ ವಾದಕ ರಮೇಶ್ ಧನೂರ್, ಕೀಬೋರ್ಡ್ ವಾದಕ ಗಣೇಶ್ ಭಟ್, ಹರಿಕಥೆ ವಿದ್ವಾಂಸ ಬಿಳಿಕೆರೆ ಬಿ.ಎಸ್.ಗಂಗಾಧರ್ ಆಚಾರ್ ಅವರುಗಳನ್ನು ಅಭಿನಂದಿಸಲಾಯಿತು. ಸಮಾರಂಭದಲ್ಲಿ ಎಂ.ಬಿ.ಅನಂತ ಸ್ವಾಮಿ ಕುರಿತ ಜೀವನ ಸಾಧನೆ ಒಳಗೊಂಡ 'ಅನಂತ ಪರ್ವ' ಕಿರು ಹೊತ್ತಿಗೆ ಬಿಡುಗಡೆ ಮಾಡಲಾಯಿತು.



ಮೈಸೂರಿನ ದಿವಾನ್ಸ್ ರಸ್ತೆಯ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಆಗ್ರಹಿಸಿ, ಗಾಂಧಿನಗರದ ಕರ್ನಾಟಕ ದಲಿತ್ ಪ್ಯಾಂಥರ್ಸ್ ಸಂಘಟನೆ ವತಿಯಿಂದ ಅದೇ ಸ್ಥಳದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಸಂಘಟನೆ ಅಧ್ಯಕ್ಷ ಯೋಗನರಸಿಂಹ, ಗಿರಿಯಣ್ಣ, ಹಿರಿಯ ಮುಖಂಡ ಚನ್ನಕೇಶವಮೂರ್ತಿ, ನಾಗಣ್ಣ, ಸದಸ್ಯರಾದ ಕಿರಣ್‌ಕುಮಾರ್, ಮೋಹನ್ ಕುಮಾರ್, ಅನುಪಮ್, ಚೇತನ ಕಾಂತರಾಜು, ರಾಜೀವ್ ಮತ್ತಿತರರು ಪಾಲ್ಗೊಂಡಿದ್ದರು.

ದಿನೇಶ್ ಕೋಚಿಂಗ್ ಸೆಂಟರ್‌ನಿಂದ ಪ್ರತಿಭಾ ಪುರಸ್ಕಾರ



ಮೈಸೂರು, ಡಿ.10(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ(ರಾಜ್ಯ ಪಠ್ಯಕ್ರಮ)ಯಲ್ಲಿ ಹಾಗೂ ಸಿಬಿಎಸ್‌ಇ ಪಠ್ಯಕ್ರಮದ 10ನೇ ತರಗತಿಯಲ್ಲಿ ಶೇ.96ಕ್ಕಿಂತ ಹೆಚ್ಚು ಅಂಕಗಳಿಸಿದ 94 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ನಗರದ ಕಲಾಮಂದಿರದಲ್ಲಿ ಭಾನುವಾರ ದಿನೇಶ್ ಕೋಚಿಂಗ್ ಸೆಂಟರ್‌ನ 26ನೇ ವರ್ಷದ ಪ್ರತಿಭಾ ಪುರಸ್ಕಾರದಲ್ಲಿ ಎಸ್‌ಎಸ್‌ಎಲ್‌ಸಿ(ರಾಜ್ಯ ಪಠ್ಯಕ್ರಮ)ಯ 69 ಹಾಗೂ ಸಿಬಿಎಸ್‌ಇ ಪಠ್ಯಕ್ರಮದ 10ನೇ ತರಗತಿಯ 25 ಸೇರಿ ಒಟ್ಟು 94 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 623 ಅಂಕ ಗಳಿಸಿದ್ದ ಅನಘ ಎನ್. ಕಾರ್ನಿಸ್(ರಾಜ್ಯ ಪಠ್ಯಕ್ರಮ) ಹಾಗೂ 500ಕ್ಕೆ 484 ಅಂಕಗಳಿಸಿದ್ದ ಮನಸ್ವಿ ಎಂ.ದೇವರಹಟ್ಟಿ(ಸಿಬಿಎಸ್‌ಇ) ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸ್ವಾಮಿ ಮಹಾಮೇಧಾನಂದ ಅವರು, ಶಾರೀರಿಕ, ಭೌದ್ಧಿಕ ಮತ್ತು ಚಾರಿತ್ರಿಕವೆಂಬ ಮೂರು ಶಕ್ತಿಯ ಜೊತೆಗೆ ಜಿತೇಂದ್ರಿಯ ಶಕ್ತಿಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರಲ್ಲದೆ ವಿದ್ಯಾರ್ಥಿಗಳು ಗಳಿಸುವ ಅಂಕದೊಂದಿಗೆ ಅವರ ಒಳ್ಳೆಯ ಗುಣಗಳನ್ನು ಗುರುತಿಸಿ ಅಭಿನಂದಿಸುವ ಮೂಲಕ ಪ್ರೋತ್ಸಾಹ ನೀಡಬೇಕು. ಯಾಕೆ ಓದಬೇಕು ಎಂಬುದರ ಬಗ್ಗೆ ಸಕರಾತ್ಮಕವಾಗಿ ಹುರಿದುಂಬಿಸಬೇಕು ಎಂದು ಹೇಳಿದರು.

ಪೋಷಕರು ತಮ್ಮ ಮಕ್ಕಳನ್ನು ಬೇರೆ ಮಕ್ಕಳೊಂದಿಗೆ ಹೋಲಿಕೆ ಮಾಡುವುದನ್ನು ಬಿಡಬೇಕು. ಈ ರೀತಿ ಹೋಲಿಕೆ ಮಾಡಿದರೆ ವಿದ್ಯಾರ್ಥಿಗಳಲ್ಲಿ ಒತ್ತಡ ಹೆಚ್ಚಾಗಿ ಅನೈತಿಕ ಮಾರ್ಗದಲ್ಲಿ ಸ್ಪರ್ಧೆಗೆ ಇಳಿಯಲಿದ್ದಾರೆ. ಸೋಲು ಜೀವನದ ಒಂದು ಭಾಗ ಅದನ್ನು ಹೇಗೆ ನಿರ್ವಹಣೆ ಮಾಡಬೇಕು ಎಂಬುದನ್ನು ಸಹ ಮಕ್ಕಳಿಗೆ ಪೋಷಕರು ಹೇಳಿಕೊಡಬೇಕು ಎಂದರು. ಕೇಂದ್ರ ಸರಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್, ಸೆಂಟರ್‌ನ ಎನ್.ವಿ.ದಿನೇಶ್ ಉಪಸ್ಥಿತರಿದ್ದರು.